# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯು ದಿನಾಂಕಃ 16-08-2012 ರಂದು ನಡೆಸಲಾದ ವಿಷಯಗಳ ಸಭೆಯ ನಡವಳಿಗಳು

| ಕ್ರ. ಸಂ. | ಹಾಜರಿದ್ದ ಸಮಿತಿಯ ಪದಾಧಿಕಾರಿಗಳು ಶ್ರೀಯುತರಾದ | | ಕ್ರ. ಸಂ. | ಹಾಜರಿದ್ದ ಅಧಿಕಾರಿಗಳು |
|---|---|---|---|---|
| 1 | ಶ್ರೀ.ಎನ್.ಆರ್.ಶ್ರೀಧರ ರೆಡ್ಡಿ | ಅಧ್ಯಕ್ಷರು | 1 | ಅಧಿಕ ಕೌನ್ಸಿಲ್ ಕಾರ್ಯದರ್ಶಿಗಳು |
| 2 | ಶ್ರೀಮತಿ.ಸುಮಿತ್ರ | ಸದಸ್ಯರು | 2 | ಕಾರ್ಯಪಾಲಕ ಅಭಿಯಂತರರು( ರ.ಮೂ.ಸೌ/ ಯೋಜನೆ/ ಬೃ.ಮ.ನೀ.ಗಾ) |
| 3 | ಶ್ರೀ.ಎಂ.ವೆಂಕಟೇಶ್ | ಸದಸ್ಯರು | | |
| 4 | ಶ್ರೀ.ಆರ್.ಚಂದ್ರಶೇಖರಯ್ಯ | ಸದಸ್ಯರು | | |
| 5 | ಶ್ರೀಮತಿ.ಸರಸ್ವತಮ್ಮ | ಸದಸ್ಯರು | | |
| 6 | ಶ್ರೀ.ಎಸ್.ಕೇಶವಮೂರ್ತಿ | ಸದಸ್ಯರು | | |
| 7 | ಶ್ರೀ.ಎನ್.ಪಿಳ್ಳಪ್ಪ | ಸದಸ್ಯರು | | |
| 8 | ಶ್ರೀಮತಿ.ಯಶೋದಮ್ಮ.ಕೆ.ಆರ್ | ಸದಸ್ಯರು | | |
| 9 | ಶ್ರೀ.ಕೆ.ಎಲ್.ತಿಮ್ಮನಂಜಯ್ಯ | ಸದಸ್ಯರು | | |
| 10 | ಶ್ರೀ.ಆರ್.ಪ್ರಕಾಶ್ | ಸದಸ್ಯರು | | |

(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲಿಸಲಾಯಿತು)

## 01] ವಿಷಯ ಸಂಖ್ಯೆ:/39/2012-13

ವಿಶೇಷ ಆಯುಕ್ತರು (ಯೋಜನೆ) ರವರು ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಹೆಬ್ಬಾಳ ಮುಖ್ಯ ಕಣಿವೆ H-100 ಜಯಚಾಮರಾಜೇಂದ್ರ ನಗರದಲ್ಲಿ (ವಾರ್ಡ್ ಸಂಖ್ಯೆ: 46) ಹರಿಯುತ್ತಿದ್ದು, ಪ್ರತಿ ಮಳೆಗಾಲದಲ್ಲೂ ಸದರಿ ಪ್ರದೇಶದಲ್ಲಿ ನೀರು ತುಂಬಿ ಹರಿದು ಸಾರ್ವಜನಿಕರ ಆಸ್ತಿಗೆ ನಷ್ಟ ಉಂಟಾಗುತ್ತಿದ್ದು, ಇದನ್ನು ತಪ್ಪಿಸಲು ಕಣಿವೆಯನ್ನು ಅಗಲ ಹಾಗೂ ಆಳಗೊಳಿಸಿ Construction of RCC'U' shape drain H-100 in Hebbal Valley Package-1 from Ch: 1500m to 1750m in ward no-46, Jayachamarajendranagara ಕಾಮಗಾರಿಗೆ ಅಂದಾಜನ್ನು 2011-12 ನೇ ಸಾಲಿನ ಲೋಕೋಪಯೋಗಿ ಮತ್ತು ಒಳನಾಡು ಸಾರಿಗೆ, ಬೆಂಗಳೂರು ವೃತ್ತದ ದರಪಟ್ಟಿಯ ದರಗಳನ್ನು ಪರಿಗಣಿಸಿ ರೂ. 170.00 ಲಕ್ಷಗಳಿಗೆ ತಯಾರಿಸಿ ಸಕ್ಷಮ ಪ್ರಾಧಿಕಾರದಿಂದ ಆಡಳಿತಾತ್ಮಕ ಅನುಮೋದನೆ ಪಡೆದು ಟೆಂಡರ್ ಕರೆಯಲಾಯಿತು.

ಈ ಕಾಮಗಾರಿಗೆ ದಿನಾಂಕ 12.04.2012 ರಂದು ಕರ್ನಾಟಕ ಸರ್ಕಾರದ e-procurement portal ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿತ್ತು. ಸದರಿ ಟೆಂಡರ್‌ಗೆ ಒಬ್ಬರೇ ಬಿಡ್ಡರ್ ಭಾಗವಹಿಸಿದ್ದರಿಂದ ಇವರ ಬಿಡ್ಡನ್ನು ತಿರಸ್ಕರಿಸಿ ದಿನಾಂಕ 21.05.2012 ರಂದು 2ನೇ ಬಾರಿ ಟೆಂಡರ್ ಆಹ್ವಾನಿಸಲಾಗಿತ್ತು. ಟೆಂಡರ್ ಸಲ್ಲಿಸಲು ಕಡೆಯ ದಿನಾಂಕವಾಗಿದ್ದ 01.06.2012 ರಂದು ಮೆ: ಪ್ರಶಾಂತ್ ಬಿಲ್ಡರ್ಸ್ ಮತ್ತು ಮೆ: ಶ್ರೀನಿವಾಸ್ ಕನ್ಸ್‌ಟ್ರಕ್ಷನ್ಸ್ ರವರು ಟೆಂಡರ್ ಸಲ್ಲಿಸಿರುವ ಬಿಡ್ಡುದಾರರಾಗಿರುತ್ತಾರೆ.

ಅಧ್ಯಕ್ಷರು
ಬೃ. ಸಾ. ಕಾ. ಸ್ಥಾಸ

ಸದರಿ ಗುತ್ತಿಗೆದಾರರು ಸಲ್ಲಿಸಿದ್ದ ದಾಖಲೆಗಳನ್ನು ಪರಿಶೀಲಿಸಲಾಗಿ ತಾಂತ್ರಿಕವಾಗಿ ಗುತ್ತಿಗೆದಾರರು ಅರ್ಹತೆಯನ್ನು ಹೊಂದಿರುವರೆಂದು ಘೋಷಿಸಿದ ನಂತರ ಇವರುಗಳು ಸಲ್ಲಿಸಿದ್ದ ಆರ್ಥಿಕ ಬಿಡ್‌ಗಳನ್ನು ದಿನಾಂಕ: 05.06.2012 ರಂದು ತೆರೆಯಲಾಗಿದ್ದು ಕೆಳಕಂಡಂತೆ ಒಟ್ಟಾರೆ ಮೊತ್ತವನ್ನು ನಮೂದಿಸಿರುತ್ತಾರೆ.

| ಕ್ರಮ ಸಂಖ್ಯೆ | ಟೆಂಡರ್‌ನಲ್ಲಿ ಭಾಗವಹಿಸಿರುವ ಗುತ್ತಿಗೆದಾರರ ವಿವರ | ನಮೂದಿಸಿರುವ ಒಟ್ಟಾರೆ ಮೊತ್ತ ರೂ ಗಳಲ್ಲಿ | ಷರಾ |
|---|---|---|---|
| 1 | ಮೆ: ಶ್ರೀನಿವಾಸ್ ಕನ್‌ಸ್ಟ್ರಕ್ಷನ್ಸ್ | 1,80,96,793/- | ಕಡಿಮೆ ಬಿಡ್ಡುದಾರರು |
| 2 | ಮೆ: ಪ್ರಶಾಂತ್ ಬಿಲ್ಡರ್ಸ್ | 1,88,84,845/- | |

ಕಡಿಮೆ ಬಿಡ್ಡುದಾರರು ನಮೂದಿಸಿರುವ ಟೆಂಡರ್ ದರಗಳನ್ನು ಅಂದಾಜು ಪಟ್ಟಿಯ ದರಗಳೊಂದಿಗೆ ಹೋಲಿಸಿದಾಗ ವಿವರಗಳು ಕೆಳಕಂಡಂತೆ ಇರುತ್ತದೆ.

| | | |
|---|---|---|
| 1 | ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ (2011–12ನೇ ಸಾಲಿನ ದರಪಟ್ಟಿಯಂತೆ) | ರೂ. 1,60,17,040/– |
| 2 | ಪ್ರಸಕ್ತ ಸಾಲಿನ ಅಂದರೆ ಟೆಂಡರ್ ಸಲ್ಲಿಸಿದ ದಿನಾಂಕ 18/04/2012 ರಂದು ಚಾಲ್ತಿಯಲ್ಲಿದ್ದ ಸಿಮೆಂಟ್ ಮತ್ತು ಉಕ್ಕಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಾಗ ಟೆಂಡರಿನ ಮೊತ್ತ | ರೂ. 1,75,05,378/– |
| 3 | ಕಡಿಮೆ ಬಿಡ್ಡುದಾರರಾದ ಮೆ: ಶ್ರೀನಿವಾಸ್ ಕನ್‌ಸ್ಟ್ರಕ್ಷನ್ಸ್ ನಮೂದಿಸಿರುವ ಮೊತ್ತ | ರೂ.1,80,96,793/- |
| 4 | ಟೆಂಡರಿಗಿಟ್ಟ ಮೊತ್ತದ ಮೇಲೆ ಶೇಕಡಾವಾರು ಹೆಚ್ಚುವರಿ/ಕಡಿಮೆ | 12.98 ಹೆಚ್ಚುವರಿ |
| 5 | ಪ್ರಸಕ್ತ ಸಾಲಿನ ಅಂದರೆ ಸಿಮೆಂಟ್ ಮತ್ತು ಉಕ್ಕಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಾಗ ಟೆಂಡರಿಗೆ ಇಟ್ಟ ಮೊತ್ತ ಶೇಕಡಾವಾರು ಹೆಚ್ಚುವರಿ/ಕಡಿಮೆ | 3.38 ಹೆಚ್ಚುವರಿ |

ಮೆ: ಶ್ರೀನಿವಾಸ್ ಕನ್‌ಸ್ಟ್ರಕ್ಷನ್ಸ್ ರವರು ಟೆಂಡರ್‌ನಲ್ಲಿ ನಮೂದಿಸಿರುವ ಒಟ್ಟಾರೆ ಮೊತ್ತವು ಮಂಜೂರಾದ ಅಂದಾಜಿನಂತೆ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇ.12.98 ರಷ್ಟು ಹೆಚ್ಚುವರಿ ಇದ್ದು, ಪ್ರಸಕ್ತ ಸಾಲಿನ ಅಂದರೆ ಸಿಮೆಂಟ್ ಮತ್ತು ಉಕ್ಕಿನ ಪ್ರಸಕ್ತ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇ.3.38 ಹೆಚ್ಚುವರಿ ಆಗಿದ್ದು, ಇದು ಸ್ಪರ್ಧಾತ್ಮಕವಾಗಿರುವುದು ಕಂಡುಬಂದಿರುತ್ತದೆ.

ಮೇಲಿನ ಹಿನ್ನೆಲೆಯಲ್ಲಿ ಮೆ: ಶ್ರೀನಿವಾಸ್ ಕನ್‌ಸ್ಟ್ರಕ್ಷನ್ಸ್, ಸದರಿ ಟೆಂಡರ್‌ನಲ್ಲಿ ಕಡಿಮೆ ದರ ನಮೂದಿಸಿದರುವ ಬಿಡ್ಡುದಾರರಾಗಿದ್ದು, ಇವರು ನಮೂದಿಸಿರುವ ಟೆಂಡರ್ ಮೊತ್ತ ರೂ. 1,80,96,793/- (ಪ್ರಸಕ್ತ ಸಾಲಿನ ದರಗಳಿಗೆ ಹೋಲಿಸಿದಾಗ ಶೇ. 3.38 ರಷ್ಟು ಹೆಚ್ಚುವರಿ) ಗಳಿಗೆ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ದಿನಾಂಕಃ 30–06–2012 ಟಿಪ್ಪಣಿ.

**ಃ ಮುಂದೂಡಿದೆ ಃ**

## 02] ವಿಷಯ ಸಂಖ್ಯೆಃ/42/2012–13

ವಿಶೇಷ ಆಯುಕ್ತರು (ಯೋಜನೆ) ರವರು ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಹೆಬ್ಬಾಳ ಮುಖ್ಯ ಕಣಿವೆ H-100 ಜಯಚಾಮರಾಜೇಂದ್ರ ನಗರದಲ್ಲಿ (ವಾರ್ಡ್ ಸಂಖ್ಯೆ: 46) ಹರಿಯುತ್ತಿದ್ದು, ಪ್ರತಿ ಮಳೆಗಾಲದಲ್ಲೂ ಸದರಿ ಪ್ರದೇಶದಲ್ಲಿ ನೀರು ತುಂಬಿ ಹರಿದು ಸಾರ್ವಜನಿಕರ ಆಸ್ತಿಗೆ ನಷ್ಟ ಉಂಟಾಗುತ್ತಿದ್ದು, ಇದನ್ನು ತಪ್ಪಿಸಲು

ಅಧ್ಯಕ್ಷರು
ಬೃ. ಸಾ. ಕಾ. ಸ್ಥಾಸ

ಕಣಿವೆಯನ್ನು ಅಗಲ ಹಾಗೂ ಆಳಗೊಳಿಸಲು Construction of RCC'U' shape drain to Primary drain H-100 in Hebbal Valley Package-1 from Ch: 1250m to 1500m in ward no-46, Jayachamarajendranagara. ಕಾಮಗಾರಿಗೆ ಅಂದಾಜನ್ನು 2011-12 ನೇ ಸಾಲಿನ ಲೋಕೋಪಯೋಗಿ ಮತ್ತು ಒಳನಾಡು ಸಾರಿಗೆ, ಬೆಂಗಳೂರು ವೃತ್ತದ ದರಪಟ್ಟಿಯ ದರಗಳನ್ನು ಪರಿಗಣಿಸಿ ರೂ. 145.00 ಲಕ್ಷಗಳಿಗೆ ತಯಾರಿಸಿ ಸಕ್ಷಮ ಪ್ರಾಧಿಕಾರದಿಂದ ಆಡಳಿತಾತ್ಮಕ ಅನುಮೋದನೆ ಪಡೆದು ಟೆಂಡರ್ ಕರೆಯಲಾಯಿತು.

ಈ ಕಾಮಗಾರಿಗೆ ದಿನಾಂಕ 12.04.2012 ರಂದು ಕರ್ನಾಟಕ ಸರ್ಕಾರದ e-procurement portal ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿತ್ತು. ಸದರಿ ಟೆಂಡರ್‌ಗೆ ಒಬ್ಬರೇ ಬಿಡ್ಡರ್ ಭಾಗವಹಿಸಿದ್ದರಿಂದ ಇವರ ಬಿಡ್ಡನ್ನು ತಿರಸ್ಕರಿಸಿ ದಿನಾಂಕ 21.05.2012 ರಂದು 2ನೇ ಬಾರಿ ಟೆಂಡರ್ ಆಹ್ವಾನಿಸಲಾಗಿತ್ತು. ಟೆಂಡರ್ ಸಲ್ಲಿಸಲು ಕಡೆಯ ದಿನಾಂಕವಾಗಿದ್ದ 01.06.2012 ರಂದು ಶ್ರೀನಿವಾಸ್ .ಬಿ ಮತ್ತು ಗೌರಮ್ಮ ರಾಮಯ್ಯ ರವರು ಟೆಂಡರ್ ಸಲ್ಲಿಸಿರುವ ಬಿಡ್ಡುದಾರರಾಗಿರುತ್ತಾರೆ.

ಸದರಿ ಗುತ್ತಿಗೆದಾರರು ಸಲ್ಲಿಸಿದ್ದ ದಾಖಲೆಗಳನ್ನು ಪರಿಶೀಲಿಸಲಾಗಿ ತಾಂತ್ರಿಕವಾಗಿ ಗುತ್ತಿಗೆದಾರರು ಅರ್ಹತೆಯನ್ನು ಹೊಂದಿರುವವರೆಂದು ಘೋಷಿಸಿದ ನಂತರ ಇವರುಗಳು ಸಲ್ಲಿಸಿದ್ದ ಆರ್ಥಿಕ ಬಿಡ್‌ಗಳನ್ನು ದಿನಾಂಕ: 05.06.2012 ರಂದು ತೆರೆಯಲಾಗಿದ್ದು ಕೆಳಕಂಡಂತೆ ಒಟ್ಟಾರೆ ಮೊತ್ತವನ್ನು ನಮೂದಿಸಿರುತ್ತಾರೆ.

| ಕ್ರಮ ಸಂಖ್ಯೆ | ಟೆಂಡರ್‌ನಲ್ಲಿ ಭಾಗವಹಿಸಿರುವ ಗುತ್ತಿಗೆದಾರರ ವಿವರ | ನಮೂದಿಸಿರುವ ಒಟ್ಟಾರೆ ಮೊತ್ತ ರೂ ಗಳಲ್ಲಿ | ಷರಾ |
|---|---|---|---|
| 1 | ಶ್ರೀನಿವಾಸ್ .ಬಿ | 1,54,30,917/- | ಕಡಿಮೆ ಬಿಡ್ಡುದಾರರು |
| 2 | ಗೌರಮ್ಮ ರಾಮಯ್ಯ | 1,61,03,102/- | |

ಕಡಿಮೆ ಬಿಡ್ಡುದಾರರು ನಮೂದಿಸಿರುವ ಟೆಂಡರ್ ದರಗಳನ್ನು ಅಂದಾಜು ಪಟ್ಟಿಯ ದರಗಳೊಂದಿಗೆ ಹೋಲಿಸಿದಾಗ ವಿವರಗಳು ಕೆಳಕಂಡಂತೆ ಇರುತ್ತದೆ.

| | | |
|---|---|---|
| 1 | ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ (2011–12ನೇ ಸಾಲಿನ ದರಪಟ್ಟಿಯಂತೆ) | ರೂ.1,36,57,456/– |
| 2 | ಪ್ರಸಕ್ತ ಸಾಲಿನ ಅಂದರೆ ಟೆಂಡರ್ ಸಲ್ಲಿಸಿದ ದಿನಾಂಕ 18/04/2012 ರಂದು ಚಾಲ್ತಿಯಲ್ಲಿದ್ದ ಸಿಮೆಂಟ್ ಮತ್ತು ಉಕ್ಕಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿ ದಾಗ ಟೆಂಡರಿನ ಮೊತ್ತ | ರೂ.1,49,30,019/– |
| 3 | ಕಡಿಮೆ ಬಿಡ್ಡುದಾರರಾದ ಶ್ರೀನಿವಾಸ್ .ಬಿ ನಮೂದಿಸಿರುವ ಮೊತ್ತ | ರೂ. 1,54,30,917/- |
| 4 | ಟೆಂಡರಿಗಿಟ್ಟ ಮೊತ್ತದ ಮೇಲೆ ಶೇಕಡಾವಾರು ಹೆಚ್ಚುವರಿ/ಕಡಿಮೆ | 12.99 ಹೆಚ್ಚುವರಿ |
| 5 | ಪ್ರಸಕ್ತ ಸಾಲಿನ ಅಂದರೆ ಸಿಮೆಂಟ್ ಮತ್ತು ಉಕ್ಕಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಾಗ ಟೆಂಡರಿಗೆ ಇಟ್ಟ ಮೊತ್ತ ಶೇಕಡಾವಾರು ಹೆಚ್ಚುವರಿ/ಕಡಿಮೆ | 3.35 ಹೆಚ್ಚುವರಿ |

ಶ್ರೀನಿವಾಸ್ .ಬಿ ರವರು ಟೆಂಡರ್‌ನಲ್ಲಿ ನಮೂದಿಸಿರುವ ಒಟ್ಟಾರೆ ಮೊತ್ತವು ಮಂಜೂರಾದ ಅಂದಾಜಿನಂತೆ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇ.12.99 ರಷ್ಟು ಹೆಚ್ಚುವರಿ ಇದ್ದು, ಪ್ರಸಕ್ತ ಸಾಲಿನ ಅಂದರೆ ಸಿಮೆಂಟ್ ಮತ್ತು ಉಕ್ಕಿನ ಪ್ರಸಕ್ತ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇ.3.35 ಹೆಚ್ಚುವರಿ ಆಗಿದ್ದು, ಇದು ಸ್ಪರ್ಧಾತ್ಮಕವಾಗಿರುವುದು ಕಂಡುಬಂದಿರುತ್ತದೆ.

ಮೇಲಿನ ಹಿನ್ನೆಲೆಯಲ್ಲಿ ಶ್ರೀನಿವಾಸ್ .ಬಿ ಸದರಿ ಟೆಂಡರ್‌ನಲ್ಲಿ ಕಡಿಮೆ ದರ ನಮೂದಿಸಿದರುವ ಬಿಡ್ಡುದಾರ ರಾಗಿದ್ದು, ಇವರು ನಮೂದಿಸಿರುವ ಟೆಂಡರ್ ಮೊತ್ತ ರೂ. 1,54,30,917/– (ಪ್ರಸಕ್ತ ಸಾಲಿನ



ಅಧ್ಯಕ್ಷರು
ಬೃ. ಸಾ. ಕಾ. ಸ್ಥಾಸ

ಅಧ್ಯಕ್ಷರು
ಬೃ. ಸಾ. ಕಾ. ಸ್ಥಾಸ

ದರಗಳಿಗೆ ಹೋಲಿಸಿದಾಗ ಶೇ.3.35 ರಷ್ಟು ಹೆಚ್ಚುವರಿ) ಗಳಿಗೆ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ದಿನಾಂಕಃ 30–06–2012ರಂದರ ವಿಶೇಷ ಆಯುಕ್ತರವರ ಟಿಪ್ಪಣಿ.

**ಃ ಮುಂದೂಡಿದೆ ಃ**

## 03] ವಿಷಯ ಸಂಖ್ಯೆ:/43/2012–13

ವಿಶೇಷ ಆಯುಕ್ತರು (ಯೋಜನೆ) ರವರು ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಹೆಬ್ಬಾಳ ಮುಖ್ಯ ಕಣಿವೆ H-100 ಜಯಚಾಮರಾಜೇಂದ್ರ ನಗರದಲ್ಲಿ (ವಾರ್ಡ್ ಸಂಖ್ಯೆ: 46) ಹರಿಯುತ್ತಿದ್ದು, ಪ್ರತಿ ಮಳೆಗಾಲದಲ್ಲೂ ಸದರಿ ಪ್ರದೇಶದಲ್ಲಿ ನೀರು ತುಂಬಿ ಹರಿದು ಸಾರ್ವಜನಿಕರ ಆಸ್ತಿಗೆ ನಷ್ಟ ಉಂಟಾಗುತ್ತಿದ್ದು, ಇದನ್ನು ತಪ್ಪಿಸಲು ಕಣಿವೆಯನ್ನು ಅಗಲ ಹಾಗೂ ಆಳಗೊಳಿಸಲು Construction of RCC'U' shape drain to Primary drain H-100 in Hebbal Valley Package-1 from Ch: 1750m to 2000m in ward no-46, Jayachamarajendranagara ಕಾಮಗಾರಿಗೆ ಅಂದಾಜನ್ನು 2011-12 ನೇ ಸಾಲಿನ ಲೋಕೋಪಯೋಗಿ ಮತ್ತು ಒಳನಾಡು ಸಾರಿಗೆ, ಬೆಂಗಳೂರು ವೃತ್ತದ ದರಪಟ್ಟಿಯ ದರಗಳನ್ನು ಪರಿಗಣಿಸಿ ರೂ. 170.00 ಲಕ್ಷಗಳಿಗೆ ತಯಾರಿಸಿ ಸಕ್ಷಮ ಪ್ರಾಧಿಕಾರದಿಂದ ಆಡಳಿತಾತ್ಮಕ ಅನುಮೋದನೆ ಪಡೆದು ಟೆಂಡರ್ ಕರೆಯಲಾಯಿತು.

ಈ ಕಾಮಗಾರಿಗೆ ದಿನಾಂಕ 12.04.2012 ರಂದು ಕರ್ನಾಟಕ ಸರ್ಕಾರದ e-procurement portal ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿತ್ತು. ಸದರಿ ಟೆಂಡರ್‌ಗೆ ಒಬ್ಬರೇ ಬಿಡ್ಡರ್ ಭಾಗವಹಿಸಿದ್ದರಿಂದ ಇವರ ಬಿಡ್ಡನ್ನು ತಿರಸ್ಕರಿಸಿ ದಿನಾಂಕ 21.05.2012 ರಂದು 2ನೇ ಬಾರಿ ಟೆಂಡರ್ ಆಹ್ವಾನಿಸಲಾಗಿತ್ತು. ಟೆಂಡರ್ ಸಲ್ಲಿಸಲು ಕಡೆಯ ದಿನಾಂಕವಾಗಿದ್ದ 01.06.2012 ರಂದು ಶ್ರೀನಿವಾಸ್ .ಬಿ ಮತ್ತು ಗೌರಮ್ಮ ರಾಮಯ್ಯ ರವರು ಟೆಂಡರ್ ಸಲ್ಲಿಸಿರುವ ಬಿಡ್ಡುದಾರರಾಗಿರುತ್ತಾರೆ.

ಸದರಿ ಗುತ್ತಿಗೆದಾರರು ಸಲ್ಲಿಸಿದ್ದ ದಾಖಲೆಗಳನ್ನು ಪರಿಶೀಲಿಸಲಾಗಿ ತಾಂತ್ರಿಕವಾಗಿ ಗುತ್ತಿಗೆದಾರರು ಅರ್ಹತೆಯನ್ನು ಹೊಂದಿರುವರೆಂದು ಘೋಷಿಸಿದ ನಂತರ ಇವರುಗಳು ಸಲ್ಲಿಸಿದ್ದ ಆರ್ಥಿಕ ಬಿಡ್‌ಗಳನ್ನು ದಿನಾಂಕ: 05.06.2012 ರಂದು ತೆರೆಯಲಾಗಿದ್ದು ಕೆಳಕಂಡಂತೆ ಒಟ್ಟಾರೆ ಮೊತ್ತವನ್ನು ನಮೂದಿಸಿರುತ್ತಾರೆ.

| ಕ್ರಮ ಸಂಖ್ಯೆ | ಟೆಂಡರ್‌ನಲ್ಲಿ ಭಾಗವಹಿಸಿರುವ ಗುತ್ತಿಗೆದಾರರ ವಿವರ | ನಮೂದಿಸಿರುವ ಒಟ್ಟಾರೆ ಮೊತ್ತ ರೂ ಗಳಲ್ಲಿ | ಷರಾ |
|---|---|---|---|
| 1 | ಶ್ರೀನಿವಾಸ್ .ಬಿ | 1,77,32,492/- | ಕಡಿಮೆ ಬಿಡ್ಡುದಾರರು |
| 2 | ಗೌರಮ್ಮ ರಾಮಯ್ಯ | 1,85,24,286/- | |

ಕಡಿಮೆ ಬಿಡ್ಡುದಾರರು ನಮೂದಿಸಿರುವ ಟೆಂಡರ್ ದರಗಳನ್ನು ಅಂದಾಜು ಪಟ್ಟಿಯ ದರಗಳೊಂದಿಗೆ ಹೋಲಿಸಿದಾಗ ವಿವರಗಳು ಕಳಕಂಡಂತೆ ಇರುತ್ತದೆ.

| | | |
|---|---|---|
| 1 | ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ (2011–12ನೇ ಸಾಲಿನ ದರಪಟ್ಟಿಯಂತೆ) | ರೂ.1,56,94,564/– |
| 2 | ಪ್ರಸಕ್ತ ಸಾಲಿನ ಅಂದರೆ ಟೆಂಡರ್ ಸಲ್ಲಿಸಿದ ದಿನಾಂಕ 18/04/2012 ದಂದು ಚಾಲ್ತಿಯಲ್ಲಿದ್ದ ಸಿಮೆಂಟ್ ಮತ್ತು ಉಕ್ಕಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿ ದಾಗ ಟೆಂಡರಿನ ಮೊತ್ತ | ರೂ.1,71,46,436/– |
| 3 | ಕಡಿಮೆ ಬಿಡ್ಡುದಾರರಾದ ಶ್ರೀನಿವಾಸ್ .ಬಿ ನಮೂದಿಸಿರುವ ಮೊತ್ತ | ರೂ. 1,77,32,492/– |

ಅಧ್ಯಕ್ಷರು
ಬೃ. ಸಾ. ಕಾ. ಸ್ಥಾಸ

| | | |
|---|---|---|
| 4 | ಟೆಂಡರಿಗಿಟ್ಟ ಮೊತ್ತದ ಮೇಲೆ ಶೇಕಡಾವಾರು ಹೆಚ್ಚುವರಿ/ಕಡಿಮೆ | 12.98 ಹೆಚ್ಚುವರಿ |
| 5 | ಪ್ರಸಕ್ತ ಸಾಲಿನ ಅಂದರೆ ಸಿಮೆಂಟ್ ಮತ್ತು ಉಕ್ಕಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಾಗ ಟೆಂಡರಿಗೆ ಇಟ್ಟ ಮೊತ್ತ ಶೇಕಡಾವಾರು ಹೆಚ್ಚುವರಿ/ಕಡಿಮೆ. | 3.42 ಹೆಚ್ಚುವರಿ |

ಶ್ರೀನಿವಾಸ್ .ಬಿ ರವರು ಟೆಂಡರ್‌ನಲ್ಲಿ ನಮೂದಿಸಿರುವ ಒಟ್ಟಾರೆ ಮೊತ್ತವು ಮಂಜೂರಾದ ಅಂದಾಜಿನಂತೆ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇ.12.98 ರಷ್ಟು ಹೆಚ್ಚುವರಿ ಇದ್ದು, ಪ್ರಸಕ್ತ ಸಾಲಿನ ಅಂದರೆ ಸಿಮೆಂಟ್ ಮತ್ತು ಉಕ್ಕಿನ ಪ್ರಸಕ್ತ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇ.3.42 ಹೆಚ್ಚುವರಿ ಆಗಿದ್ದು, ಇದು ಸ್ಪರ್ಧಾತ್ಮಕವಾಗಿರುವುದು ಕಂಡುಬಂದಿರುತ್ತದೆ.

ಮೇಲಿನ ಹಿನ್ನೆಲೆಯಲ್ಲಿ ಶ್ರೀನಿವಾಸ್ .ಬಿ ಸದರಿ ಟೆಂಡರ್‌ನಲ್ಲಿ ಕಡಿಮೆ ದರ ನಮೂದಿಸಿದರುವ ಬಿಡ್ಡುದಾರ ರಾಗಿದ್ದು, ಇವರು ನಮೂದಿಸಿರುವ ಟೆಂಡರ್ ಮೊತ್ತ ರೂ. 1,77,32,492/- (ಪ್ರಸಕ್ತ ಸಾಲಿನ ದರಗಳಿಗೆ ಹೋಲಿಸಿದಾಗ ಶೇ.3.42 ರಷ್ಟು ಹೆಚ್ಚುವರಿ) ಗಳಿಗೆ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ದಿನಾಂಕಃ30-06-2012ರಂದರ ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ.

**ಃ ಮುಂದೂಡಿದೆ ಃ**

04] ವಿಷಯ ಸಂಖ್ಯೆಃ/44/2012-13

ವಿಶೇಷ ಆಯುಕ್ತರು (ಯೋಜನೆ) ರವರು ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಹೆಬ್ಬಾಳ ಮುಖ್ಯ ಕಣಿವೆ H-100 ಜಯಚಾಮರಾಜೇಂದ್ರ ನಗರದಲ್ಲಿ (ವಾರ್ಡ್ ಸಂಖ್ಯೆ: 46) ಹರಿಯುತ್ತಿದ್ದು, ಪ್ರತಿ ಮಳೆಗಾಲದಲ್ಲೂ ಸದರಿ ಪ್ರದೇಶದಲ್ಲಿ ನೀರು ತುಂಬಿ ಹರಿದು ಸಾರ್ವಜನಿಕರ ಆಸ್ತಿಗೆ ನಷ್ಟ ಉಂಟಾಗುತ್ತಿದ್ದು, ಇದನ್ನು ತಪ್ಪಿಸಲು ಕಣಿವೆಯನ್ನು ಅಗಲ ಹಾಗೂ ಆಳಗೊಳಿಸಿ Construction of RCC'U' shape drain to Primary drain H-100 in Hebbal Valley Package-1 from Ch: 1000m to 1250m in ward no-46, Jayachamarajendranagara. ಕಾಮಗಾರಿಗೆ ಅಂದಾಜನ್ನು 2011-12 ನೇ ಸಾಲಿನ ಲೋಕೋಪಯೋಗಿ ಮತ್ತು ಒಳನಾಡು ಸಾರಿಗೆ, ಬೆಂಗಳೂರು ವೃತ್ತದ ದರಪಟ್ಟಿಯ ದರಗಳನ್ನು ಪರಿಗಣಿಸಿ ರೂ. 145.00 ಲಕ್ಷಗಳಿಗೆ ತಯಾರಿಸಿ ಸಕ್ಷಮ ಪ್ರಾಧಿಕಾರದಿಂದ ಆಡಳಿತಾತ್ಮಕ ಅನುಮೋದನೆ ಪಡೆದು ಟೆಂಡರ್ ಕರೆಯಲಾಯಿತು.

ಈ ಕಾಮಗಾರಿಗೆ ದಿನಾಂಕ 12.04.2012 ರಂದು ಕರ್ನಾಟಕ ಸರ್ಕಾರದ e-procurement portal ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿತ್ತು. ಸದರಿ ಟೆಂಡರ್‌ಗೆ ಒಬ್ಬರೇ ಬಿಡ್ಡರ್ ಭಾಗವಹಿಸಿದ್ದರಿಂದ ಇವರ ಬಿಡ್ಡನ್ನು ತಿರಸ್ಕರಿಸಿ ದಿನಾಂಕ 21.05.2012 ರಂದು 2ನೇ ಬಾರಿ ಟೆಂಡರ್ ಆಹ್ವಾನಿಸಲಾಗಿತ್ತು. ಟೆಂಡರ್ ಸಲ್ಲಿಸಲು ಕಡೆಯ ದಿನಾಂಕವಾಗಿದ್ದ 01.06.2012 ರಂದು ಶ್ರೀನಿವಾಸ್ .ಬಿ ಮತ್ತು ಗೌರಮ್ಮ ರಾಮಯ್ಯ ರವರು ಟೆಂಡರ್ ಸಲ್ಲಿಸಿರುವ ಬಿಡ್ಡುದಾರರಾಗಿರುತ್ತಾರೆ.

ಸದರಿ ಗುತ್ತಿಗೆದಾರರು ಸಲ್ಲಿಸಿದ್ದ ದಾಖಲೆಗಳನ್ನು ಪರಿಶೀಲಿಸಲಾಗಿ ತಾಂತ್ರಿಕವಾಗಿ ಗುತ್ತಿಗೆದಾರರು ಅರ್ಹತೆಯನ್ನು ಹೊಂದಿರುವರೆಂದು ಘೋಷಿಸಿದ ನಂತರ ಇವರುಗಳು ಸಲ್ಲಿಸಿದ್ದ ಆರ್ಥಿಕ ಬಿಡ್‌ಗಳನ್ನು ದಿನಾಂಕ: 05.06.2012 ರಂದು ತೆರೆಯಲಾಗಿದ್ದು ಕೆಳಕಂಡಂತೆ ಒಟ್ಟಾರೆ ಮೊತ್ತವನ್ನು ನಮೂದಿಸಿರುತ್ತಾರೆ.

| ಕ್ರಮ ಸಂಖ್ಯೆ | ಟೆಂಡರ್‌ನಲ್ಲಿ ಭಾಗವಹಿಸಿರುವ ಗುತ್ತಿಗೆದಾರರ ವಿವರ | ನಮೂದಿಸಿರುವ ಒಟ್ಟಾರೆ ಮೊತ್ತ ರೂ ಗಳಲ್ಲಿ | ಷರಾ |
|---|---|---|---|

ಅಧ್ಯಕ್ಷರು
ಬೃ. ಸಾ. ಕಾ. ಸ್ಥಾಸ

ಅಧ್ಯಕ್ಷರು
ಬೃ. ಸಾ. ಕಾ. ಸ್ಥಾಸ

| | | | |
|---|---|---|---|
| 1 | ಶ್ರೀನಿವಾಸ್ .ಬಿ | 1,54,30,917/- | ಕಡಿಮೆ ಬಿಡ್ದುದಾರರು |
| 2 | ಗೌರಮ್ಮ ರಾಮಯ್ಯ | 1,61,03,102/- | |

ಕಡಿಮೆ ಬಿಡ್ದುದಾರರು ನಮೂದಿಸಿರುವ ಟೆಂಡರ್ ದರಗಳನ್ನು ಅಂದಾಜು ಪಟ್ಟಿಯ ದರಗಳೊಂದಿಗೆ ಹೋಲಿಸಿದಾಗ ವಿವರಗಳು ಕೆಳಕಂಡಂತೆ ಇರುತ್ತದೆ.

| | | |
|---|---|---|
| 1 | ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ (2011-12ನೇ ಸಾಲಿನ ದರಪಟ್ಟಿಯಂತೆ) | ರೂ. 1,36,57,456/- |
| 2 | ಪ್ರಸಕ್ತ ಸಾಲಿನ ಅಂದರೆ ಟೆಂಡರ್ ಸಲ್ಲಿಸಿದ ದಿನಾಂಕ 18/04/2012 ರಂದು ಚಾಲ್ತಿಯಲ್ಲಿದ್ದ ಸಿಮೆಂಟ್ ಮತ್ತು ಉಕ್ಕಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಾಗ ಟೆಂಡರಿನ ಮೊತ್ತ | ರೂ.1,49,30,019/- |
| 3 | ಕಡಿಮೆ ಬಿಡ್ದುದಾರರಾದ ಶ್ರೀನಿವಾಸ್ .ಬಿ ನಮೂದಿಸಿರುವ ಮೊತ್ತ | ರೂ.1,54,30,917/- |
| 4 | ಟೆಂಡರಿಗಿಟ್ಟ ಮೊತ್ತದ ಮೇಲೆ ಶೇಕಡಾವಾರು ಹೆಚ್ಚುವರಿ/ಕಡಿಮೆ | 12.99 ಹೆಚ್ಚುವರಿ |
| 5 | ಪ್ರಸಕ್ತ ಸಾಲಿನ ಅಂದರೆ ಸಿಮೆಂಟ್ ಮತ್ತು ಉಕ್ಕಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಾಗ ಟೆಂಡರಿಗೆ ಇಟ್ಟ ಮೊತ್ತ ಶೇಕಡಾವಾರು ಹೆಚ್ಚುವರಿ/ಕಡಿಮೆ | 3.35 ಹೆಚ್ಚುವರಿ |

ಶ್ರೀನಿವಾಸ್ .ಬಿ ರವರು ಟೆಂಡರ್‌ನಲ್ಲಿ ನಮೂದಿಸಿರುವ ಒಟ್ಟಾರೆ ಮೊತ್ತವು ಮಂಜೂರಾದ ಅಂದಾಜಿನಂತೆ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇ.12.99 ರಷ್ಟು ಹೆಚ್ಚುವರಿ ಇದ್ದು, ಪ್ರಸಕ್ತ ಸಾಲಿನ ಅಂದರೆ ಸಿಮೆಂಟ್ ಮತ್ತು ಉಕ್ಕಿನ ಪ್ರಸಕ್ತ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇ.3.35 ಹೆಚ್ಚುವರಿ ಆಗಿದ್ದು, ಇದು ಸ್ಪರ್ಧಾತ್ಮಕವಾಗಿರುವುದು ಕಂಡುಬಂದಿರುತ್ತದೆ.

ಮೇಲಿನ ಹಿನ್ನೆಲೆಯಲ್ಲಿ ಶ್ರೀನಿವಾಸ್.ಬಿ ಸದರಿ ಟೆಂಡರ್‌ನಲ್ಲಿ ಕಡಿಮೆ ದರ ನಮೂದಿಸಿದರುವ ಬಿಡ್ದುದಾರರಾಗಿದ್ದು, ಇವರು ನಮೂದಿಸಿರುವ ಟೆಂಡರ್ ಮೊತ್ತ ರೂ. 1,54,30,917/- (ಪ್ರಸಕ್ತ ಸಾಲಿನ ದರಗಳಿಗೆ ಹೋಲಿಸಿದಾಗ ಶೇ.3.35 ರಷ್ಟು ಹೆಚ್ಚುವರಿ) ಗಳಿಗೆ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ದಿನಾಂಕಃ30-06-2012ರಂದರ ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ.

**ಃ ಮುಂದೂಡಿದೆ ಃ**

05] ವಿಷಯ ಸಂಖ್ಯೆಃ/54/2012-13

ವಿಶೇಷ ಆಯುಕ್ತರು (ಯೋಜನೆ) ರವರು ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬಿಬಿಎಂಪಿ ವ್ಯಾಪ್ತಿಯ ಬೊಮ್ಮನಹಳ್ಳಿ ವಲಯದ ವಸಂತ ಪುರ ವಾರ್ಡ್‌ನ (ವಾರ್ಡ್ ನಂ.197) ಸಿದ್ದಯ್ಯ ಬಡಾವಣೆಯಲ್ಲಿ ಮೇಲ್ಕಂಡ ಕಾಮಗಾರಿಯನ್ನು ನಿರ್ವಹಿಸಲು ಯೋಜಿಸಿದೆ. ಕನಕಪುರ ರಸ್ತೆಯಿಂದ ಸತ್ಯಮ್ಮನ ಕುಂಟೆ (ಕೆರೆ) ವರೆಗೆ ರಾಜಕಾಲುವೆ ಇದ್ದು, ಮಳೆಗಾಲದಲ್ಲಿ ಮೇಲ್ಕಂಡ ಪ್ರದೇಶದ ನೀರು ಸಿದ್ದಯ್ಯ ಬಡಾವಣೆ ಮೂಲಕ ಕೆರೆಗೆ ಸೇರಬೇಕಾಗಿದೆ. ಸಿದ್ದಯ್ಯ ಬಡಾವಣೆಯು ತಗ್ಗು ಪ್ರದೇಶವಾಗಿದ್ದು, (Flood Prone) ಹಾಲಿ ಇರುವ ರಾಜಕಾಲುವೆಯು ಕಚ್ಚಾ ಚರಂಡಿಯಾಗಿದ್ದು, ಹೂಳಿನಿಂದ ತುಂಬಿದೆ. ಮಳೆಗಾಲದಲ್ಲಿ ಮಳೆ ನೀರು ರಸ್ತೆಯಲ್ಲಿ ಹರಿದು ಅಕ್ಕಪಕ್ಕದ ಮನೆಗಳಿಗೆ ನುಗ್ಗಿ ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ. ಇದನ್ನು ತಪ್ಪಿಸಲು ಈ ರಾಜಕಾಲುವೆಯನ್ನು ಬೊಮ್ಮನಹಳ್ಳಿ ವಲಯದ ಮಳೆ ನೀರುಗಾಲುವೆಗಳ ಡಿಪಿಆರ್ ನಂತೆ ವಿನ್ಯಾಸಕ್ಕನಗುಣವಾಗಿ ಅಭಿವೃದ್ಧಿ ಪಡಿಸಲು Construction of SWD from Siddaiah layout to Satyamma Kunte tank BH-514C ಕಾಮಗಾರಿಗೆ ಅಂದಾಜು ಪಟ್ಟಿಯನ್ನು 2011-12ನೇ ಸಾಲಿನ



ಅಧ್ಯಕ್ಷರು
ಬೃ. ಸಾ. ಕಾ. ಸ್ಥಾಸ

ಅಧ್ಯಕ್ಷರು
ಬೃ. ಸಾ. ಕಾ. ಸ್ಥಾಸ

ಲೋಕೋಪಯೋಗಿ ಇಲಾಖೆಯ ದರಪಟ್ಟಿಯಂತೆ 131.00 ಲಕ್ಷ ರೂಗಳಿಗೆ ತಯಾರಿಸಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆಯಲಾಗಿದೆ.

ಈ ಕಾಮಗಾರಿಗೆ ದಿನಾಂಕ: 11-04-2012 ರಂದು ಮೊದಲನೆ ಭಾರಿ E-Procurement Portal ನಲ್ಲಿ, Two Cover System ನಲ್ಲಿ ಅಧಿಸೂಚನೆಯನ್ನು ಹೊರಡಿಸಲಾಯಿತು. ಟೆಂಡರ್ ಸಲ್ಲಿಸಲು ಕಡೆಯ ದಿನಾಂಕ: 11-05-2012. ಟೆಂಡರ್‌ನಲ್ಲಿ ಮೂರು ಜನ ಗುತ್ತಿಗೆದಾರರು ಭಾಗವಹಿಸಿರುತ್ತಾರೆ. ಸದರಿ ಗುತ್ತಿಗೆದಾರರು ಸಲ್ಲಿಸಿದ್ದ Technical Bid ಅನ್ನು ದಿನಾಂಕ: 14-05-2012 ರಂದು ತೆರೆಯಲಾಗಿದೆ. ತಾಂತ್ರಿಕವಾಗಿ ಇಬ್ಬರು ಗುತ್ತಿಗೆದಾರರು ಅರ್ಹತೆಯನ್ನು ಹೊಂದಿದ್ದು, ಇದಕ್ಕೆ ಮುಖ್ಯ ಇಂಜಿನಿಯರ್‌ರವರು ಅನುಮೋದನೆ ನೀಡಿದ ನಂತರ ಸದರಿ ಗುತ್ತಿಗೆದಾರರು ಸಲ್ಲಿಸಿದ್ದ ಆರ್ಥಿಕ ಬಿಡ್ಡನ್ನು ದಿನಾಂಕ: 28-05-2012 ರಂದು ತೆರೆಯಲಾಗಿದ್ದು, ಶ್ರೀ.ಗಿರಿರಾಜು.ಎಸ್..ಆರ್ ರವರು ಕಡಿಮೆ ಮೊತ್ತವನ್ನು ನಮೂದಿಸಿದ್ದು, ಇವರು L1 ಆಗಿರುತ್ತಾರೆ. ಉಳಿದ ವಿವರಗಳು ಕೆಳಕಂಡಂತಿವೆ.

| | | |
|---|---|---|
| 1. | ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ (2011-12ನೇ ಸಾಲಿನ ದರಪಟ್ಟಿಯಂತೆ) | ರೂ.12987676.49 |
| 2. | ಬಿಡ್ಡುದಾರರಾದ ಶ್ರೀ.ಗಿರಿರಾಜು.ಎಸ್.ಆರ್ ರವರು ನಮೂದಿಸಿರುವ ಟೆಂಡರ್ ಮೊತ್ತ | ರೂ.13911062.63/- |
| 3. | 2011-12ನೇ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಾಗ ಟೆಂಡರಿಗೆ ಇಟ್ಟ ಮೊತ್ತದ ಮೇಲಿನ ಶೇಕಡಾವಾರು ಹೆಚ್ಚಳ / ಕಡಿಮೆ | 7.11 ಹೆಚ್ಚುವರಿ |
| 4. | First Quarter issue rate of steel ದರಗಳಿಗೆ ಹೋಲಿಸಿದಾಗ (Order No.8772, Dated: 29-02-2012) | 0.07 ಹೆಚ್ಚುವರಿ |

ಶ್ರೀ.ಗಿರಿರಾಜು.ಎಸ್.ಆರ್ ರವರು ನಮೂದಿಸಿರುವ ಮೊತ್ತವು ಮಂಜೂರಾದ ಅಂದಾಜಿನಂತೆ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇ.7.11 ರಷ್ಟು ಹೆಚ್ಚುವರಿ ಇದ್ದು, ಈ ವರ್ಷದ ಮೊದಲನೇ ಭಾಗದ (First Quarter) ಉಕ್ಕಿನ ದರಗಳಿಗೆ ಹೋಲಿಸಿದಾಗ 0.07 ಹೆಚ್ಚುವರಿಯಾಗಿದ್ದು, ಸ್ಪರ್ಧಾತ್ಮಕವಾಗಿರುವುದು ಕಂಡು ಬರುತ್ತದೆ. ಮೇಲಿನ ಹಿನ್ನೆಲೆಯಲ್ಲಿ ಶ್ರೀ.ಗಿರಿರಾಜು.ಎಸ್.ಆರ್ ರವರು ನಮೂದಿಸಿರುವ ಟೆಂಡರ್ ಮೊತ್ತ 13911062.63 ರೂಗಳಿಗೆ (ಮಂಜೂರಾದ ಅಂದಾಜು ಪಟ್ಟಿಯಂತೆ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇ.7.11 ಹೆಚ್ಚುವರಿ ಹಾಗೂ ಈ ವರ್ಷದ ಮೊದಲಭಾಗದ (First Quarter) ಉಕ್ಕಿನ ದರಗಳಿಗೆ ಹೋಲಿಸಿದಾಗ ಶೇ.0.07 ಹೆಚ್ಚುವರಿ) ಅನುಮೋದನೆ ಕೋರಿ ಬೃಹತ್ ಕಾಮಗಾರಿ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ವಿಶೇಷ ಆಯುಕ್ತರವರ ದಿನಾಂಕಃ 30-06-2012ರ ಟಿಪ್ಪಣಿ.

**ನಿರ್ಣಯಃ ದಿನಾಂಕಃ 30–06–2012ರ ವಿಶೇಷ ಆಯುಕ್ತರವರ ಟಿಪ್ಪಣಿಯನ್ನು ಒಪ್ಪದೆ.**

## 06] ವಿಷಯ ಸಂಖ್ಯೆಃ/61/2012–13

ವಿಶೇಷ ಆಯುಕ್ತರು (ಯೋಜನೆ) ರವರು ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಹೆಬ್ಬಾಳ ಮುಖ್ಯ ಕಣಿವೆ H–306 ಅಂಬೇಡ್ಕರ್ ಮೆಡಿಕಲ್ ಕಾಲೇಜ್ ಹತ್ತಿರ (ವಾರ್ಡ್ ಸಂಖ್ಯೆಃ 31) ಹರಿಯುತ್ತಿದ್ದು, ಪ್ರತಿ ಮಳೆಗಾಲದಲ್ಲೂ ಸದರಿ ಪ್ರದೇಶದಲ್ಲಿ ನೀರು ತುಂಬಿ ಹರಿದು ಸಾರ್ವಜನಿಕರ ಆಸ್ತಿಗೆ ನಷ್ಟ ಉಂಟಾಗುತ್ತಿದ್ದು, ಇದನ್ನು ತಪ್ಪಿಸಲು ಕಣಿವೆಯನ್ನು ಅಗಲ ಹಾಗೂ ಆಳಗೊಳಿಸಿ RCC box drain ನಿರ್ಮಿಸಲು Construction of RCC box drain for SWD (missing bit) from Basavanagar main road to secondary SWD H-306 joining near Ambedkar Medical College ಕಾಮಗಾರಿಗೆ ಅಂದಾಜನ್ನು 2011–12ನೇ ಸಾಲಿನ ಲೋಕೋಪಯೋಗಿ ಮತ್ತು ಒಳನಾಡು ಸಾರಿಗೆ, ಬೆಂಗಳೂರು ವೃತ್ತದ ದರಪಟ್ಟಿಯ ದರಗಳನ್ನು ಪರಿಗಣಿಸಿ

ಅಧ್ಯಕ್ಷರು
ಬೃ. ಸಾ. ಕಾ. ಸ್ಥಾಸ

ಅಧ್ಯಕ್ಷರು
ಬೃ. ಸಾ. ಕಾ. ಸ್ಥಾಸ

ರೂ. 235.00ಲಕ್ಷಗಳಿಗೆ ತಯಾರಿಸಿ ಸಕ್ಷಮ ಪ್ರಾಧಿಕಾರದಿಂದ ಆಡಳಿತಾತ್ಮಕ ಅನುಮೋದನೆ ಪಡೆದು ಟೆಂಡರ್ ಕರೆಯಲಾಯಿತು.

ಈ ಕಾಮಗಾರಿಗಳಿಗೆ ದಿನಾಂಕಃ 12-04-2012ರಂದು ಕರ್ನಾಟಕ ಸರ್ಕಾರದ E-procurement ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿತ್ತು, ಸದರಿ ಟೆಂಡರ್‌ಗೆ ಒಬ್ಬರೇ ಬಿಡ್ಡರ್ ಭಾಗವಹಿಸಿದ್ದರಿಂದ ಇವರ ಬಿಡ್ಡನ್ನು ತಿರಸ್ಕರಿಸಿ ದಿನಾಂಕಃ 21-05-2012ರಂದು 2ನೇ ಬಾರಿ ಟೆಂಡರ್ ಆಹ್ವಾನಿಸಲಾಗಿತ್ತು. ಟೆಂಡರ್ ಸಲ್ಲಿಸಲು ಕಡೆಯ ದಿನಾಂಕವಾಗಿದ್ದ 01-06-2012ರಂದು ಶ್ರೀ. ಕೊಂಡಲು ಸುಬ್ರಮಣ್ಯ ರಾಜು, ಮೆ: ಡೆಕ್ಕನ್ ಇಂಜಿನಿಯರ್ಸ್ ರವರು ಟೆಂಡರ್ ಸಲ್ಲಿಸಿರುವ ಒಬ್ಬರೇ ಬಿಡ್ಡುದಾರರಾಗಿರುತ್ತಾರೆ.

ಸದರಿ ಗುತ್ತಿಗೆದಾರರು ಸಲ್ಲಿಸಿದ್ದ ದಾಖಲೆಗಳನ್ನು ಪರಿಶೀಲಿಸಲಾಗಿ ತಾಂತ್ರಿಕವಾಗಿ ಗುತ್ತಿಗೆದಾರರು ಅರ್ಹತೆಯನ್ನು ಹೊಂದಿರುವರೆಂದು ಘೋಷಿಸಿದ ನಂತರ ಇವರು ಸಲ್ಲಿಸಿದ್ದ ಆರ್ಥಿಕ ಬಿಡ್‌ಗಳನ್ನು ದಿನಾಂಕಃ 05-06-2012ರಂದು ತೆರೆಯಲಾಗಿದ್ದು ಕೆಳಕಂಡಂತೆ ಒಟ್ಟಾರೆ ಮೊತ್ತವನ್ನು ನಮೂದಿಸಿರುತ್ತಾರೆ.

| ಕ್ರ ಸಂ. | ಟೆಂಡರ್‌ನಲ್ಲಿ ಭಾಗವಹಿಸಿರುವ ಗುತ್ತಿಗೆದಾರರ ವಿವರ | ನಮೂದಿಸಿರುವ ಒಟ್ಟಾರೆ ಮೊತ್ತ ರೂ.ಗಳಲ್ಲಿ | ಷರಾ |
|---|---|---|---|
| 1 | ಶ್ರೀ ಕೊಂಡಲು ಸುಬ್ರಮ್ಮಣ್ಯ ರಾಜು ಮೆ:ಡೆಕ್ಕನ್ ಇಂಜಿನಿಯರ್ಸ್ | ರೂ. 2,09,08,772/- | ಒಬ್ಬರೇ ಬಿಡ್ಡುದಾರರು |

ಏಕೈಕ ಬಿಡ್ಡುದಾರರು ನಮೂದಿಸಿರುವ ಟೆಂಡರ್‌ದರಗಳನ್ನು ಅಂದಾಜುಪಟ್ಟಿಯ ದರಗಳೊಂದಿಗೆ ಹೋಲಿಸಿದಾಗ ವಿವರಗಳು ಕೆಳಕಂಡಂತೆ ಇರುತ್ತದೆ.

| | | |
|---|---|---|
| 1 | ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ (2011-12ನೇ ಸಾಲಿನ ದರಪಟ್ಟಿಯಂತೆ) | ರೂ. 1,95,78,100/- |
| 2 | ಪ್ರಸಕ್ತ ಸಾಲಿನ ಅಂದರೆ ಟೆಂಡರ್ ಸಲ್ಲಿಸಿದ ದಿನಾಂಕಃ 18-04-2012ರಂದು ಚಾಲ್ತಿಯಲ್ಲಿದ್ದ ಸಿಮೆಂಟ್ ಮತ್ತು ಉಕ್ಕಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಾಗ ಟೆಂಡರಿನ ಮೊತ್ತ | ರೂ. 2,15,15,397/- |

| | | |
|---|---|---|
| 3 | ಏಕೈಕ ಬಿಡ್ಡುದಾರರಾದ ಶ್ರೀ ಕೊಂಡಲು ಸುಬ್ರಹ್ಮಣ್ಯರಾಜು ಮೆ:ಡೆಕ್ಕನ್ ಇಂಜಿನಿಯರ್ಸ್ ನಮೂದಿಸಿರುವ ಮೊತ್ತ | ರೂ.2,09,08,772/- |
| 4 | ಟೆಂಡರಿಗಿಡ್ಡ ಮೊತ್ತದ ಮೇಲೆ ಶೇಕಡಾವಾರು ಹೆಚ್ಚುವರಿ/ಕಡಿಮೆ | 6.80 ಹೆಚ್ಚುವರಿ |
| 5 | ಪ್ರಸಕ್ತ ಸಾಲಿನ ಅಂದರೆ ಸಿಮೆಂಟ್ ಮತ್ತು ಉಕ್ಕಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಾಗ ಟೆಂಡರಿಗೆ ಇಟ್ಟ ಮೊತ್ತ ಶೇಕಡಾವಾರು ಹೆಚ್ಚುವರಿ/ಕಡಿಮೆ | 2.82% ಕಡಿಮೆ |

ಶ್ರೀ ಕೊಂಡಲು ಸುಬ್ರಹ್ಮಣ್ಯ ರಾಜು, ಮೆಃ ಡೆಕ್ಕನ್ ಇಂಜಿನಿಯರ್ಸ್ ರವರು ಟೆಂಡರ್‌ನಲ್ಲಿ ನಮೂದಿಸಿರುವ ಒಟ್ಟಾರೆ ಮೊತ್ತವು ಮಂಜೂರಾದ ಅಂದಾಜಿನಂತೆ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 6.80 ರಷ್ಟು ಹೆಚ್ಚುವರಿ ಇದ್ದು, ಪ್ರಸಕ್ತ ಸಾಲಿನ ಅಂದರೆ ಸಿಮೆಂಟ್ ಮತ್ತು ಉಕ್ಕಿನ ಪ್ರಸಕ್ತ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾದ ಶೇಕಡ 2.82ರಷ್ಟು ಕಡಿಮೆ ಆಗಿರುವುದು ಕಂಡುಬಂದಿರುತ್ತದೆ.

ಮೇಲಿನ ಹಿನ್ನೆಲೆಯಲ್ಲಿ ಸದರಿ ಟೆಂಡರ್‌ನಲ್ಲಿ ಭಾಗವಹಿಸಿರುವ ಏಕೈಕ ಬಿಡ್ಡುದಾರರಾಗಿರುವ ಶ್ರೀ ಕೊಂಡಲು ಸುಬ್ರಮಣ್ಯರಾಜು ಮೆಃ ಡೆಕ್ಕನ್ ಇಂಜಿನಿಯರ್ಸ್ ರವರು ನಮೂದಿಸಿರುವ ಟೆಂಡರ್ ಮೊತ್ತ ರೂ. 2,09,08,772/-(ಪ್ರಸಕ್ತಸಾಲಿನ ದರಗಳಿಗೆ ಹೋಲಿಸಿದಾಗ ಶೇಕಡ 2.82 ರಷ್ಟು ಕಡಿಮೆ) ಗಳಿಗೆ

ಅಧ್ಯಕ್ಷರು
ಬೃ. ಸಾ. ಕಾ. ಸ್ಥಾಸ

ಅನುಮೋದನೆ ಕೋರಿ ಬೃಹತ್ ಕಾಮಗಾರಿ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ವಿಶೇಷ ಆಯುಕ್ತರವರ ದಿನಾಂಕಃ 10-07-2012ರ ಟಿಪ್ಪಣಿ.

**: ಮುಂದೂಡಿದೆ :**

07] ವಿಷಯ ಸಂಖ್ಯೆಃ/62/2012-13

ವಿಶೇಷ ಆಯುಕ್ತರು (ಯೋಜನೆ) ರವರು ಟಿಪ್ಪಣಿಯಲ್ಲಿ ವಿವರಿಸಿರುವಂತೆ, construction of RCC box drain to secondary drain V-116 in Ambedkar stadium ಕಾಮಗಾರಿಗೆ ರೂ.99.00 ಲಕ್ಷಗಳಿಗೆ ಅಂದಾಜನ್ನು ತಯಾರಿಸಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ಟೆಂಡರ್ ನೋಟಿಫಿಕೇಶನ್ ನಂ.EE/SWD(West)/ TEND/ 12 /11 – 12 Dt: 02.05.2012 ದಿನಾಂಕದಂದು (ಎರಡನೇ ಕರೆ) ಟೆಂಡರ್ ಆಹ್ವಾನಿಸಲಾಗಿತ್ತು.

ಈ ಟೆಂಡರನ್ನು ದಿನಾಂಕ: 21.05.2012 ರಂದು ತೆರೆಯಲಾಗಿ ಇಬ್ಬರು ಗುತ್ತಿಗೆದಾರರು ಭಾಗವಹಿಸಿರುತ್ತಾರೆ. ಈ ಗುತ್ತಿಗೆದಾರರ ತಾಂತ್ರಿಕ ಬಿಡ್‌ಗೆ ದಿನಾಂಕ: 28.05.2012 ರಂದು ಮುಖ್ಯ ಅಭಿಯಂತರರು (ಮಳೆ ನೀರು ಚರಂಡಿ) ರವರಿಂದ ಅನುಮೋದನೆ ಪಡೆದು ಇಬ್ಬರು ಗುತ್ತಿಗೆದಾರರುಗಳ ಆರ್ಥಿಕ ಬಿಡ್ಡನ್ನು ದಿನಾಂಕ: 28.05.2012 ರಂದು ತೆರೆಯಲಾಗಿರುತ್ತದೆ. ಸದರಿ ಗುತ್ತಿಗೆದಾರರ ಆರ್ಥಿಕ ಬಿಡ್‌ನ ವಿವರಗಳು ಕೆಳಕಂಡಂತಿರುತ್ತದೆ.

ಆರ್ಥಿಕ ಬಿಡ್‌ನ ವಿವರಗಳು

| ಕ್ರ ಸಂ. | ಗುತ್ತಿಗೆದಾರರ ಹೆಸರು | ಕಾಮಗಾರಿಯ ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ | ಟೆಂಡರ್‌ಗಿಟ್ಟ ಮೊತ್ತ (ಮಂಜೂರಾದ ಅಂದಾಜು ಪಟ್ಟಿಯ ದರದಂತೆ 2010-11ನೇ ಸಾಲಿನ ದರಪಟ್ಟಿಗೆ) ರೂ. | ಗುತ್ತಿಗೆದಾರರು ನಮೂದಿಸಿರುವ ಮೊತ್ತ ರೂ. | ಅಂದಾಜು ಪಟ್ಟಿಯ (2010-11ನೇ ಸಾಲಿನ ದರಪಟ್ಟಿಯ ದರಗಳಂತೆ) | 2011-12ನೇಸಾಲಿನ ದರಪಟ್ಟಿಯ ದರಗಳಂತೆ) Issue rateನೊಂದಿಗೆ |
|---|---|---|---|---|---|---|
| 1 | ಶ್ರೀ ಜೆ.ಮಂಜುನಾಥ್ | 99.00 | 98,65,066.32 | 1,22,09,015.00 | 23.76% ರಷ್ಟು ಹೆಚ್ಚು | 1.32% ರಷ್ಟು ಕಡಿಮೆ |
| 2 | ಶ್ರೀ.ಎಂ.ಸುಂದರ್ ರಾಜು | | | 1,24,85,557.00 | 26.56% ರಷ್ಟು ಹೆಚ್ಚು | 0.91% ರಷ್ಟು ಹೆಚ್ಚು |

ಮೇಲ್ಕಂಡ ವಿವರಗಳನ್ನು ಪರಿಶೀಲಿಸಲಾಗಿ ಈ ಕಾಮಗಾರಿಗೆ ಶ್ರೀ ಜೆ.ಮಂಜುನಾಥ್ ರವರು ರೂ.1,22,09,015.00ಗಳನ್ನು ನಮೂದಿಸಿದ್ದು, 2010-11ನೇ ಸಾಲಿನ ದರಪಟ್ಟಿಗೆ ಹೋಲಿಸಿದಾಗ ಶೇ.23.76 ರಷ್ಟು ಹೆಚ್ಚಿಗೆ ಇರುತ್ತದೆ ಮತ್ತು ಎಸ್.ಆರ್.ದರ 2011-12ರ ಮತ್ತು Issue rate ನೊಂದಿಗೆ ಹೋಲಿಸಿದಾಗ ಶೇ.1.32 ರಷ್ಟು ಕಡಿಮೆ ಇರುತ್ತದೆ.

ಪ್ರಸ್ತಾಪಿಸಿರುವ ಕಾಮಗಾರಿಗೆ ಶ್ರೀ.ಜೆ.ಮಂಜುನಾಥ್ ರವರು ನಮೂದಿಸಿರುವ ಟೆಂಡರ್ ಮೊತ್ತ ರೂ.1,22,09,015.00 (2010-11ನೇ ಸಾಲಿನ ದರಪಟ್ಟಿಗೆ ಶೇ.23.76 ರಷ್ಟು ಹೆಚ್ಚಿಗೆ ಮತ್ತು ಎಸ್.ಆರ್.ದರ 2011-12ರ ಮತ್ತು **Issue rate** ನೊಂದಿಗೆ ಹೋಲಿಸಿದಾಗ ಶೇ.1.32 ರಷ್ಟು ಕಡಿಮೆ)ಗಳಿಗೆ ಅನುಮೋದನೆ ಕೋರಿ ಬೃಹತ್ ಕಾಮಗಾರಿ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ವಿಶೇಷ ಆಯುಕ್ತರವರ ದಿನಾಂಕಃ 11-07-2012ರ ಟಿಪ್ಪಣಿ.

**: ಮುಂದೂಡಿದೆ :**

ಅಧ್ಯಕ್ಷರು
ಬೃ. ಸಾ. ಕಾ. ಸ್ಥಾಸ

**08] ವಿಷಯ ಸಂಖ್ಯೆ:/66/2012-13**

ವಿಶೇಷ ಆಯುಕ್ತರು (ಯೋಜನೆ) ರವರು ಟಿಪ್ಪಣಿಯಲ್ಲಿ ವಿವರಿಸಿರುವಂತೆ, Proposed Improvements and Rejuvenation of BBMP building to setup an EVM ware house for DEO (Central) at Jakkarayana kere adjacent to Krishna flour mill in ward No:95 Subash Nagar Bangalore ಕಾಮಗಾರಿಯ ಅಂದಾಜುಪಟ್ಟಿ ರೂ. 2890000.00ಗಳಿಗೆ ಜಾಬ್ ಸಂಕೇತ ಲಭ್ಯವಾಗಿರುತ್ತದೆ.

ರೈಲ್ವೆ ಪ್ಯಾರಲೆಲ್ ರಸ್ತೆಯಲ್ಲಿರುವ ಕೃಷ್ಣ ಫ್ಲೋರ್ ಮಿಲ್ ಪಕ್ಕದಲ್ಲಿರುವ ಬಿ.ಬಿ.ಎಂ.ಪಿಯ ಶಿಥಿಲಾವ್ಯವಸ್ಥೆಯಲ್ಲಿರುವ ಕಟ್ಟಡವನ್ನು ಪುನರುಜ್ಜೀವನಗೊಳಿಸಿ ಅಪರ ಆಯುಕ್ತರು(ಆಡಳಿತ)ಹಾಗೂ ಜಿಲ್ಲಾ ಚುನಾವಣಾಧಿಕಾರಿ (ಕೇಂದ್ರ) ರವರ ವ್ಯಾಪ್ತಿಗೆ ಬರುವ 7 ವಿಧಾನ ಸಭಾ ಕ್ಷೇತ್ರ ಹಾಗೂ ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಪಟ್ಟ ಮತಯಂತ್ರಗಳನ್ನು ಭದ್ರತಾ ಕೊಠಡಿಯಾಗಿ ಮಾರ್ಪಡಿಸಿ ಮತಯಂತ್ರಗಳನ್ನು ಶೇಖರಿಸಿ ಇಡಲು ಅನುವುಮಾಡಿ ಕೊಡುವ ಕಾಮಗಾರಿಯ ಅಂದಾಜುಪಟ್ಟ ರೂ. 2890000.00ಗಳಿಗೆ ಆಡಳಿತಾತ್ಮಕ ಅನುಮೋದನೆ ಕೋರಿ ಬೃಹತ್ ಕಾಮಗಾರಿ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ವಿಶೇಷ ಆಯುಕ್ತರವರ ದಿನಾಂಕಃ 12-07-2012ರ ಟಿಪ್ಪಣಿ.

ನಿರ್ಣಯಃ ದಿನಾಂಕಃ 19-07-2012ರಂದು ಮುಂದೂಡಿದೆ.

**ದಿನಾಂಕಃ 16-08-2012ರ ನಿರ್ಣಯಃ-** ವಿಷಯಕ್ಕೆ ಸಂಬಂಧಪಟ್ಟ ಕಡತವನ್ನು ಪರಿಶೀಲಿಸಲಾಯಿತು, ಸದರಿ ಕಾಮಗಾರಿಯನ್ನು ಕೈಗೊಳ್ಳಲು ಉದ್ದೇಶಿಸಿರುವ ಪ್ರದೇಶದ ಸುತ್ತ ಮುತ್ತ ಹೆಚ್ಚಾಗಿ ಪರಿಶಿಷ್ಟ ಜಾತಿ/ ಪಂಗಡ ದವರು ಹಾಗೂ ಬಡತನ ರೇಖೆಗಿಂತ ಕೆಳಗಿನ ಮತ್ತು ಆರ್ಥಿಕವಾಗಿ ದುರ್ಬಲರಾದ ಜನರು ವಾಸಿಸುತ್ತಿದ್ದು, ಈ ಪ್ರದೇಶದಲ್ಲಿ ಸಾರ್ವಜನಿಕ ಆಸ್ಪತ್ರೆ ಇಲ್ಲದ ಕಾರಣ ಇಲ್ಲಿನ ನಿವಾಸಿಗಳಿಗೆ ತುಂಬಾ ತೊಂದರೆಯಾಗುತ್ತಿರುವುದು ಹಾಗೂ ಖಾಸಗಿ ಆಸ್ಪತ್ರೆಗಳಲ್ಲಿ ಹೆಚ್ಚಿನ ವೆಚ್ಚ ಭರಿಸಿ ವೈದ್ಯಕೀಯ ಚಿಕಿತ್ಸೆ ಪಡೆಯಲು ಅಶಕ್ತರಾಗಿರುವುದರಿಂದ ಈ ಪ್ರದೇಶದ ಸುತ್ತಮುತ್ತಲಿನ ನಿವಾಸಿಗಳಿಗೆ ಉತ್ತಮ ವೈದ್ಯಕೀಯ ಸೌಲಭ್ಯವನ್ನು ಒದಗಿಸುವ ಸಲುವಾಗಿ ಸದರಿ ಸ್ಥಳದಲ್ಲಿರುವ ಶಿಥಿಲಾವಸ್ಥೆಯಲ್ಲಿರುವ ಬಿ.ಬಿ.ಎಂ.ಪಿ ಕಟ್ಟಡವನ್ನು ಒಡೆದು ಸುಸಜ್ಜಿತ ಆಸ್ಪತ್ರೆ ಕಟ್ಟಡವನ್ನು ನಿರ್ಮಿಸುವಂತೆ ಸ್ಥಳೀಯ ಪಾಲಿಕೆ ಸದಸ್ಯರಾದ ಶ್ರೀ.ಟಿ.ಮಲ್ಲೇಶ್ ರವರು ಕೋರಿಕೊಂಡಿರುವ ಮೇರೆಗೆ ಈಗಾಗಲೇ ಆಸ್ಪತ್ರೆ ಕಟ್ಟಡವನ್ನು ನಿರ್ಮಿಸಲು **ಶೇಕಡ 22.75 ಅನುದಾನದಡಿಯಲ್ಲಿ ರೂ. 300.00ಲಕ್ಷಗಳ** ಕಾಮಗಾರಿಗೆ ಈಗಾಲೇ ದಿನಾಂಕಃ 11-04-2011ರಲ್ಲಿ ಆಯುಕ್ತರು ಒಪ್ಪಿಗೆ ನೀಡಿದ್ದು, ತತ್ಸಂಬಂಧವಾಗಿ ಸದರಿ ಕಾಮಗಾರಿಗೆ **ಸಂಖ್ಯೆ: 095-12-000053 ಕಾಮಗಾರಿ ಸಂಕೇತ ಲಭ್ಯವಾಗಿದ್ದು,** ಕಾಮಗಾರಿಗೆ ಸಮಾಲೋಚಕರನ್ನು (Consultancy) ರವರನ್ನು ನೇಮಿಸಿಕೊಳ್ಳುವ ಬಗ್ಗೆ ಈಗಾಗಲೇ ಟೆಂಡರ್‌ಅನ್ನು ಕರೆಯಲಾಗಿರುತ್ತದೆ.

ಮುಂದುವರಿದಂತೆ, ಸದರಿ ಶಿಥಿಲಾವಸ್ಥೆಯಲ್ಲಿರುವ ಕಟ್ಟಡವನ್ನು ದುರಸ್ತಿಗೊಳಿಸಿ ವಿದ್ಯುನ್ಮಾನ ಮತಯಂತ್ರಗಳಿಗೆ ಭದ್ರತಾ ಕೊಠಡಿಯನ್ನು ನಿರ್ಮಿಸಿದ್ದಲ್ಲಿ, ಮತ್ತೊಮ್ಮೆ ಸದರಿ ಕಟ್ಟಡವನ್ನು ಒಡೆದು ಆಸ್ಪತ್ರೆ ಕಟ್ಟಡವನ್ನು ನಿರ್ಮಿಸಿದ್ದಲ್ಲಿ, ಭದ್ರತಾ ಕೊಠಡಿಯ ಕಾಮಗಾರಿಗೆ ತಗಲುವ ರೂ.0.2,89 ಕೋಟಿಗಳು ಪಾಲಿಕೆ ಆರ್ಥಿಕ ನಷ್ಟ ಉಂಟಾಗುವ ಸಂಭವವಿರುತ್ತದೆ.

ಈ ಹಿನ್ನೆಲೆಯಲ್ಲಿ ಸಾರ್ವಜನಿಕರ ಹಿತದೃಷ್ಟಿಯಿಂದ, ಸದರಿ ಶಿಥಿಲಾವಸ್ಥೆಯಲ್ಲಿರುವ ಕಟ್ಟಡವನ್ನು ಒಡೆದು ಆಸ್ಪತ್ರೆಯನ್ನು ಕಟ್ಟಡವನ್ನು ನಿರ್ಮಿಸುವುದು ಸೂಕ್ತವೆಂದು ಅಭಿಪ್ರಾಯಿಸಿ, ಭದ್ರತಾ ಕೊಠಡಿಯ ಕಾಮಗಾರಿಗೆ ಹಾಗೂ ಸಂಬಂಧಿತ ಕಾಮಗಾರಿ ಸಂಕೇತವನ್ನು ರದ್ದುಪಡಿಸಿ, ಸದರಿ ಸ್ಥಳವನ್ನು ಕೇವಲ ಆಸ್ಪತ್ರೆ ನಿರ್ಮಾಣಕ್ಕೆ ಮಾತ್ರ ಉಪಯೋಗಿಸತಕ್ಕದ್ದೆಂದು ಸಮಿತಿಯು ತೀರ್ಮಾನಿಸಿತು.

ಅಧ್ಯಕ್ಷರು
ಬೃ. ಸಾ. ಕಾ. ಸ್ಥಾಸ

## 09]ವಿಷಯ ಸಂಖ್ಯೆಃ/69/2012-13

ವಿಶೇಷ ಆಯುಕ್ತರು (ಯೋಜನೆ) ರವರು ಟಿಪ್ಪಣಿಯಲ್ಲಿ ವಿವರಿಸಿರುವಂತೆ, Construction of Bridge by using RCC pre-cast cellular segment across SWD V-116, Secondary drain near Veeresha Theater at Magadi road in V-Valley ಕಾಮಗಾರಿಗೆ ರೂ. 90.00 ಲಕ್ಷಗಳಿಗೆ ಅಂದಾಜನ್ನು ತಯಾರಿಸಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ದಿನಾಂಕಃ 28-03-2012ರಂದು ಸದರಿ ಕಾಮಗಾರಿಗೆ ಟೆಂಡರ್ ಕರೆಯಲಾಗಿರುತ್ತದೆ.

ಈ ಮೇಲ್ಕಂಡ ಟೆಂಡರನ್ನು ದಿನಾಂಕಃ 21-04-2012ರಂದು ತೆರೆಯಲಾಗಿದ್ದು ಇದರಲ್ಲಿ ಮೂರು ಜನ ಗುತ್ತಿಗೆದಾರರು ಭಾಗವಹಿಸಿರುತ್ತಾರೆ. ಈ ಗುತ್ತಿಗೆದಾರರ ತಾಂತ್ರಿಕ ಬಿಡ್‌ಗೆ ದಿನಾಂಕಃ 05-05-2012ರಂದು ಮುಖ್ಯ ಅಭಿಯಂತರರು, ಬೃಹತ್ ನೀರುಗಾಲುವೆ ರವರಿಂದ ಅನುಮೋದನೆ ಪಡೆದು ಮೂರು ಜನ ಗುತ್ತಿಗೆದಾರರುಗಳ ಆರ್ಥಿಕ ಬಿಡ್ಡನ್ನು ದಿನಾಂಕಃ 05-05-2012ರಂದು ತೆರೆಯಲಾಗಿರುತ್ತದೆ. ಸದರಿ ಗುತ್ತಿಗೆದಾರರ ಆರ್ಥಿಕ ಬಿಡ್‌ನ ವಿವರಗಳು ಈ ಕೆಳಕಂಡಂತಿರುತ್ತದೆ.

| ಕ್ರ.ಸಂ. | ಗುತ್ತಿಗೆದಾರರ ಹೆಸರು | ಕಾಮಗರಿಯ ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ | ಟೆಂಡರ್‌ಗಿಟ್ಟ ಮೊತ್ತ (ಮಂಜೂರಾದ ಅಂದಾಜು ಪಟ್ಟಿಯ ದರದಂತೆ 2010-11ನೇ ಸಾಲಿನ ದರಪಟ್ಟಿಗೆ)ರೂ | ಗುತ್ತಿಗೆದಾರರು ನಮೂದಿಸಿರುವ ಮೊತ್ತ ರೂ. | ಅಂದಾಜು ಪಟ್ಟಿಯ (2010-11ನೇ ಸಾಲಿನ ದರಪಟ್ಟಿಯ ದರಗಳಂತೆ) | 2011-12ನೇ ಸಾಲಿನ ದರಪಟ್ಟಿಯ ದರಗಳಂತೆ) Issue rates ನೊಂದಿಗೆ |
|---|---|---|---|---|---|---|
| 1 | ಶ್ರೀ.ಎಸ್.ಆರ್.ಗಣೇಶ್ | 90.00 | 7049096.20 | 8938950.00 | 26.80% ರಷ್ಟು ಹೆಚ್ಚು | 25.28% ರಷ್ಟು ಹೆಚ್ಚು |
| 2 | ಶ್ರೀ.ಮುನಿವೆಂಕಟಪ್ಪ ರಾಜೇಂದ್ರ)ಎಂ.ಆರ್.ಕನ್ಸ್‌ಟ್ರಕ್ಷನ್ಸ್) | | | 9595800.00 | 36.12% ರಷ್ಟು ಹೆಚ್ಚು | 34.49% ರಷ್ಟು ಹೆಚ್ಚು |
| 3 | ಶ್ರೀ.ಎನ್.ಶ್ರೀನಿವಾಸಮೂರ್ತಿ (ಪರಿಚಿತ ಕನ್ಸ್‌ಟ್ರಕ್ಷನ್ಸ್) | | | 8725150.00 | 23.77% ರಷ್ಟು ಹೆಚ್ಚು | 22.28% ರಷ್ಟು ಹೆಚ್ಚು |

ಮೇಲ್ಕಂಡ ವಿವರಗಳನ್ನು ಪರಿಶೀಲಿಸಲಾಗಿ **ಶ್ರೀ.ಎನ್.ಶ್ರೀನಿವಾಸ ಮೂರ್ತಿ (ಪರಿಚಿತ ಕನ್ಸ್‌ಟ್ರಕ್ಷನ್ಸ್)** ರವರು **L1** ಆಗಿದ್ದು ಸದರಿಯವರ ಟೆಂಡರ್ ಮೊತ್ತ ರೂ. **87,25,150.00**ಗಳಾಗಿದ್ದು ಈ ಮೊತ್ತವು 2010-11ನೇ ಸಾಲಿನ ದರಪಟ್ಟಿಗೆ ಹೋಲಿಸಿದಾಗ ಶೇ.23.77 ರಷ್ಟು ಹೆಚ್ಚಾಗಿರುತ್ತದೆ. ಮತ್ತು 2011-12ನೇ ಸಾಲಿನ ದರಪಟ್ಟಿಯ ದರಗಳು ಮತ್ತು Issue rates ನೊಂದಿಗೆ ಹೋಲಿಸಿದಾಗ ಶೇಕಡ 22.28 ರಷ್ಟು ಹೆಚ್ಚಿಗೆ ಇರುತ್ತದೆ. ಆದ್ದರಿಂದ ಸದರಿ ಗುತ್ತಿಗೆದಾರರು ನಮೂದಿಸಿರುವ ದರಗಳು ಹೆಚ್ಚಾಗಿದುದ್ದರಿಂದ ದರ ಸಂಧಾನ ಮಾಡಿದ್ದು, ಸಂಧಾನ ಮಾಡಿದ ನಂತರ ರೂ. 78,91,483.19 ಗಳಾಗಿದ್ದು, 2010-11ನೇ ಸಾಲಿನ ದರಪಟ್ಟಿಗೆ ಹೋಲಿಸಿದಾಗ ಶೇಕಡ 11.95 ರಷ್ಟು ಹೆಚ್ಚಾಗಿರುತ್ತದೆ ಮತ್ತು 2011-12ನೇ ಸಾಲಿನ ದರಪಟ್ಟಿಯ ದರಗಳು ಮತ್ತು Issue rates ನೊಂದಿಗೆ ಹೋಲಿಸಿದಾಗ ಶೇಕಡ 7.24 ರಷ್ಟು ಹೆಚ್ಚಿಗೆ ಇರುತ್ತದೆ.

ಮೇಲ್ಕಂಡ ಎಲ್ಲಾ ಅಂಶಗಳನ್ನು ತಮ್ಮ ಗಮನಕ್ಕೆ ತರುತ್ತಾ ಶ್ರೀ.ಎನ್.ಶ್ರೀನಿವಾಸ ಮೂರ್ತಿ (ಪರಿಚಿತ ಕನ್ಸ್‌ಟ್ರಕ್ಷನ್ಸ್ ರವರು ನಮೂದಿಸಿರುವ ಟೆಂಡರ್ ಮೊತ್ತ ರೂ. 78,91,483.19 (2010-11ನೇ ಸಾಲಿನ ದರಪಟ್ಟಿಗೆ ಹೋಲಿಸಿದಾಗ ಶೇಕಡ 11.95 ರಷ್ಟು ಹೆಚ್ಚಿಗೆ ಮತ್ತು ಎಸ್.ಆರ್.ದರ 2011-12ರ ಮತ್ತು Issue rates ನೊಂದಿಗೆ ಹೋಲಿಸಿದಾಗ ಶೇಕಡ 7.24 ರಷ್ಟು ಹೆಚ್ಚಿಗೆ) ಅನುಮೋದನೆ ಮತ್ತು ಟೆಂಡರ್ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ದಿನಾಂಕಃ 18-07-2012ರ ವಿಶೇಷ ಆಯುಕ್ತರವರ ಟಿಪ್ಪಣಿ.

**ನಿರ್ಣಯಃ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕಃ 18-07-2012ರ ಟಿಪ್ಪಣಿಯನ್ನು ಒಪ್ಪಲಾಯಿತು.**

ಅಧ್ಯಕ್ಷರು
ಬೃ. ಸಾ. ಕಾ. ಸ್ಥಾಸ

10] ವಿಷಯ ಸಂಖ್ಯೆ:/70/2012-13

ವಿಶೇಷ ಆಯುಕ್ತರು (ಯೋಜನೆ) ರವರು ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬಿ.ಬಿ.ಎಂ.ಪಿ ವ್ಯಾಪ್ತಿಯ ರಾಜರಾಜೇಶ್ವರಿ ನಗರ ವಲಯದ ರಾಜರಾಜೇಶ್ವರಿ ನಗರ ವಾರ್ಡಿನ (ವಾರ್ಡ್ ನಂ: 160) ಎನ್.ಕೆ.ಭಟ್ ಫಾರಂನಿಂದ ಮಣಿಪಾಲ್ ಆಸ್ಪತ್ರೆ ಪಕ್ಕದಲ್ಲಿರುವ ಚೆನ್ನಸಂದ್ರ ಮುಖ್ಯರಸ್ತೆ ಮುಖಾಂತರ ಮಳೆ ನೀರು ಹರಿದು ರಾಜಕಾಲುವೆ RN-223 ಸೇರುತ್ತಿದ್ದು, ದಿನಾಂಕ: 15-08-2011ರಂದು ರಾತ್ರಿ ಬಿದ್ದ ಭಾರಿ ಮಳೆಗೆ ಮೇಲ್ಕಂಡ ಪ್ರದೇಶದಲ್ಲಿ ಚರಂಡಿ ವ್ಯವಸ್ಥೆ ಇಲ್ಲದ ಕಾರಣ ತಗ್ಗು ಪ್ರದೇಶಗಳಿಗೆ ನೀರು ನುಗ್ಗಿ ಸಾರ್ವಜನಿಕರಿಗೆ ತೊಂದರೆಯಾಗಿರುತ್ತದೆ. ಹಾಗೂ ಪಟ್ಟಣಗೆರೆ ಚನ್ನಸಂದ್ರ ಉತ್ತರಹಳ್ಳಿ ಮುಖ್ಯ ರಸ್ತೆಗೆ ಹಾಯ್ದು ಹೋಗುವ ಈ ರಸ್ತೆಯಲ್ಲಿ ತುಂಬಾ ವಾಹನಗಳು ಸಂಚರಿಸುತ್ತಿದ್ದು, ಮಳೆ ಬಿದ್ದಾಗ ಈ ರಸ್ತೆ ಮಧ್ಯದಲ್ಲಿ ಸುಮಾರು 2.00 ಮೀಟರ್ ನಷ್ಟು ಮಳೆ ನೀರು ನಿಲ್ಲುತ್ತಿದ್ದು, ಇದರಿಂದ ವಾಹನ ಸಂಚಾರಕ್ಕೆ ಮಳೆಗಾಲದಲ್ಲಿ ತೊಂದರೆಯಾಗುತ್ತದೆ. ಇದನ್ನು ತಡೆಗಟ್ಟಲು ಸ್ಥಳೀಯ ಬಿ.ಬಿ.ಎಂ.ಪಿ ಸದಸ್ಯರು ಪತ್ರ ನೀಡಿ ಈ ಭಾಗದ ಮಳೆ ನೀರು ಕಾಲುವೆ ನಿರ್ಮಿಸಲು ಕೋರಿಕೆ ಸಲ್ಲಿಸರುತ್ತಾರೆ. ಇದನ್ನು ತಡೆಗಟ್ಟಲು ಈ ಮಳೆನೀರು ಕಾಲುವೆಯನ್ನು ವೈಜ್ಞಾನಿಕವಾಗಿ ನಿರ್ಮಿಸಲು ಉದ್ದೇಶಿಸಿದ್ದು ಈ ರಾಜಕಾಲುವೆಯನ್ನು ರಾಜರಾಜೇಶ್ವರಿ ನಗರ ವಲಯದ ಮಳೆ ನೀರು ಕಾಲುವೆಗಳ ಟಿ.ಪಿ.ಆರ್.ನಂತೆ ವಿನ್ಯಾಸಕ್ಕನುಗುಣವಾಗಿ ಅಭಿವೃದ್ಧಿಪಡಿಸಲು Remodelling of SWD from N.K.Bhatt farm to Pattanagere Channasandra main road behid Manipal Hospital in ward No: 160 ಕಾಮಗಾರಿಯ ಅಂದಾಜು ಪಟ್ಟಿಯನ್ನು 2011-12ನೇ ಸಾಲಿನ ಲೋಕೋಪಯೋಗಿ ಇಲಾಖೆಯ ದರಪಟ್ಟಿಯಂತೆ 160.00 ಲಕ್ಷ ರೂ.ಗಳಿಗೆ ತಯಾರಿಸಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆಯಲಾಗಿದೆ.

ಈ ಕಾಮಗಾರಿಗೆ ದಿನಾಂಕ: 11-04-2012ರಂದು ಮೊದಲನೆ ಭಾರಿ E-procurement portal ನಲ್ಲಿ, Two cover system ನಲ್ಲಿ ಅಧಿಸೂಚನೆಯನ್ನು ಹೊರಡಿಸಲಾಯಿತು. ಟೆಂಡರ್ ಸಲ್ಲಿಸಲು ಕಡೆಯ ದಿನಾಂಕ: 11-05-2012 ಟೆಂಡರ್‌ನಲ್ಲಿ ಇಬ್ಬರು ಗುತ್ತಿಗೆದಾರರು ಭಾಗವಹಿಸಿರುತ್ತಾರೆ. ಸರಿ ಗುತ್ತಿಗೆದಾರರು ಸಲ್ಲಿಸಿದ್ದ Technical Bid ಅನ್ನು ದಿನಾಂಕ: 14-05-2012ರಂದು ತೆರೆಯಲಾಗಿದೆ. ತಾಂತ್ರಿಕವಾಗಿ ಇಬ್ಬರೂ ಗುತ್ತಿಗೆದಾರರು ಅರ್ಹತೆಯನ್ನು ಹೊಂದಿದ್ದು, ಇದಕ್ಕೆ ಮುಖ್ಯ ಇಂಜಿನಿಯರ್‌ರವರು ದಿನಾಂಕ: 28-05-2012ರಲ್ಲಿ ಅನುಮೋದನೆ ನೀಡಿರುತ್ತಾರೆ. ನಂತರ ಸದರಿ ಗುತ್ತಿಗೆದಾರರು ಸಲ್ಲಿಸಿದ್ದ ಆರ್ಥಿಕ ಬಿಡ್ಡನ್ನು ದಿನಾಂಕ:28-05-2012ರಂದು ತೆರೆಯಲಾಗಿದ್ದು, ಶ್ರೀ. ಸಿ.ಆರ್.ರವಿ ರವರು ಕಡಿಮೆ ಮೊತ್ತವನ್ನು ನಮೂದಿಸಿದ್ದು ಇವರು L1 ಆಗಿರುತ್ತಾರೆ. ಮುಖ್ಯ ಅಭಿಯಂತರರು ದಿನಾಂಕ: 03-07-2012ರಂದು ಆಯುಕ್ತರ ಅನುಮೋದನೆ ಪಡೆಯಲಾಗಿದೆ. ಉಳಿದ ವಿವರಗಳು ಕೆಳಕಂಡಂತಿವೆ.

| | | |
|---|---|---|
| 1 | ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ (2011-12ನೇ ಸಾಲಿನ ದರಪಟ್ಟಿಯಂತೆ) | ರೂ. 1,58,75,965.01 ಲಕ್ಷಗಳು |
| 2 | ಬಿಡ್ಡುದಾರರಾದ ಶ್ರೀ.ಸಿ.ಆರ್.ರವಿ ರವರು ನಮೂದಿಸಿರುವ ಟೆಂಡರ್ ಮೊತ್ತ | ರೂ. 1,82,56,659.20 ಲಕ್ಷಗಳು |
| 3 | 2011-12ನೇ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಾಗ ಟೆಂಡರಿಗೆ ಇಟ್ಟ ಮೊತ್ತದ ಮೇಲಿನ ಶೇಕಡವಾರು ಹೆಚ್ಚಳ/ಕಡಿಮೆ | ಶೇಕಡ 15.00 ಹೆಚ್ಚುವರಿ |
| 4 | First Quarter issue rate of steel & Cement ದರಗಳಿಗೆ ಹೋಲಿಸಿದಾಗ (KPWD order No:8772 dated: 29-02-2012 KPWD order No: 225, dated:18-04-2012) | ಶೇಕಡ 5.36 ಹೆಚ್ಚುವರಿ |

ಶ್ರೀ. ಸಿ.ಆರ್.ರವಿ ರವರು ನಮೂದಿಸಿರುವ ಮೊತ್ತವು ಮಂಜೂರಾದ ಅಂದಾಜಿನಂತೆ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 15.00 ರಷ್ಟು ಹೆಚ್ಚುವರಿ ಇದ್ದು, ಈ ವರ್ಷದ ಮೊದಲನೇ ಭಾಗದ (first quarter ) ಉಕ್ಕು ಮತ್ತು ಸಿಮೆಂಟ್ ದರಗಳಿಗೆ ಹೋಲಿಸಿದಾಗ ಶೇಕಡ 5.36 ರಷ್ಟು ಹೆಚ್ಚುವರಿಯಾಗಿದ್ದು ಸ್ಪರ್ಧಾತ್ಮಕವಾಗಿರುವುದು ಕಂಡುಬರುತ್ತದೆ. ಮೇಲಿನ ಹಿನ್ನಲೆಯಲ್ಲಿ ಶ್ರೀ. ಸಿ.ಆರ್.ರವಿ ರವರು ನಮೂದಿಸಿರುವ ಟೆಂಡರ್ ಮೊತ್ತ ರೂ. **1,58,75,965.01** ರೂ. ಗಳಿಗೆ (ಮಂಜೂರಾದ ಅಂದಾಜು



ಅಧ್ಯಕ್ಷರು
ಬೃ. ಸಾ. ಕಾ. ಸ್ಥಾ

ಪಟ್ಟಿಯಂತೆ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 15.00 ರಷ್ಟು ಹೆಚ್ಚುವರಿ ದರ ಹಾಗೂ ಈ ವರ್ಷದ ಮೊದಲ ಭಾಗದ (First quarter ) ಉಕ್ಕು ಮತ್ತು ಸಿಮೆಂಟ್ ದರಗಳಿಗೆ ಹೋಲಿಸಿದಾಗ ಶೇಕಡ 5.36 ಹೆಚ್ಚುವರಿ)ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ದಿನಾಂಕಃ 18-07-2012ರ ವಿಶೇಷ ಆಯುಕ್ತರವರ ಟಿಪ್ಪಣಿ.

**ನಿರ್ಣಯಃ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕಃ 18-07-2012ರ ಟಿಪ್ಪಣಿಯನ್ನು ಒಪ್ಪಲಾಯಿತು.**

## 11] ವಿಷಯ ಸಂಖ್ಯೆಃ/71/2012-13

ವಿಶೇಷ ಆಯುಕ್ತರು (ಯೋಜನೆ) ರವರು ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬಿ.ಬಿ.ಎಂ.ಪಿ ವ್ಯಾಪ್ತಿಯ ರಾಜರಾಜೇಶ್ವರಿ ನಗರ ವಲಯದ ಹೇರೋಹಳ್ಳಿ ವಾರ್ಡಿನ (ವಾರ್ಡ್ ನಂಃ 72) ಹೇರೋಹಳ್ಳಿ ಕೆರೆಯ ತೂಬಿನಿಂದ ಅದೇ ವಾರ್ಡಿನ ಅಪ್ಪಣ್ಣಪ್ಪ ಲೇಔಟ್ ವರೆಗಿನ ಪ್ರದೇಶದಲ್ಲಿ ಹಾಲಿ ನೀರು ಕಾಲುವೆ ಇರುವುದಿಲ್ಲ. ಹಾಗಾಗಿ ಮಳೆ ಬಿದ್ದಾಗ ಮಳೆ ನೀರಿನಿಂದಾಗಿ ಈ ಪ್ರದೇಶದ ತಗ್ಗು ಜಾಗಗಳಲ್ಲಿ ಪ್ರವಾಹ ಉಂಟಾಗಿ ಸಾರ್ವಜನಿಕ ಆಸ್ತಿಪಾಸ್ತಿಗಳಿಗೆ ಹಾನಿಯಾಗಿರುತ್ತದೆ. ದಿನಾಂಕಃ 15-08-2011ರಂದು ರಾತ್ರಿ ಬಿದ್ದ ಭಾರಿ ಮಳೆಗೆ ಮೇಲ್ಕಂಡ ಪ್ರದೇಶದಲ್ಲಿ ಚರಂಡಿ ವ್ಯವಸ್ಥೆ ಇಲ್ಲದ ಕಾರಣ ಅಂಜನಾ ನಗರ, ಅಪ್ಪಣ್ಣಪ್ಪ ಲೇಔಟ್‌ನ ತಗ್ಗು ಪ್ರದೇಶಗಳಿಗೆ ನೀರು ನುಗ್ಗಿ ಸಾರ್ವಜನಿಕರಿಗೆ ತೊಂದರೆಯಾಗಿರುತ್ತದೆ. ಹಾಗೂ ರಸ್ತೆ ಸಂಚಾರ ಈ ಪ್ರದೇಶಲ್ಲಿ ಪ್ರವಾಹದ ಸಮಯದಲ್ಲಿ ಅಸ್ತವ್ಯಸ್ಥವಾಗಿರುತ್ತದೆ. ಈ ರೀತಿ ಪ್ರವಾಹ ಉಂಟಾಗಿ ಸಾರ್ವಜನಿಕರಿಗೆ ತೊಂದರೆಯಾಗುವುದನ್ನು ತಪ್ಪಿಸಲು ಈ ರಾಜಕಾಲುವೆಯನ್ನು ರಾಜರಾಜೇಶ್ವರಿ ನಗರ ವಲಯದ ಮಳೆ ನೀರು ಕಾಲುವೆಗಳ ಡಿ.ಪಿ.ಆರ್.ನಂತೆ ವಿನ್ಯಾಸಕ್ಕನುಗುಣವಾಗಿ ಅಭಿವೃದ್ಧಿಪಡಿಸಲು ಅಂದಜು ಪಟ್ಟಿಯನ್ನು 2011-12ನೇ ಸಾಲಿನ ಲೋಕೋಪಯೋಗಿ ಇಲಾಖೆಯ ದರಪಟ್ಟಿಯಂತೆ 260.00 ಲಕ್ಷ ರೂ.ಗಳಿಗೆ ತಯಾರಿಸಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆಯಲಾಗಿದೆ.

ಈ ಕಾಮಗಾರಿಗೆ ದಿನಾಂಕಃ 11-04-2012ರಂದು ಮೊದಲನೇ ಬಾರಿ E-Procurement Portal ನಲ್ಲಿ, Two cover system ನಲ್ಲಿ ಅಧಿಸೂಚನೆಯನ್ನು ಹೊರಡಿಸಲಾಯಿತು. ಟೆಂಡರ್ ಸಲ್ಲಿಸಲು ಕಡೆಯ ದಿನಾಂಕಃ 11-05-2012 ಟೆಂಡರ್‌ನಲ್ಲಿ ಮೂರು ಜನ ಗುತ್ತಿಗೆದಾರರು ಭಾಗವಹಿಸಿರುತ್ತಾರೆ. ಸದರಿ ಗುತ್ತಿಗೆದಾರರು ಸಲ್ಲಸಿದ್ದ Technical bid ಅನ್ನು ದಿನಾಂಕಃ 14-05-2012ರಂದು ತೆರೆಯಲಾಗಿದೆ. ತಾಂತ್ರಿಕವಾಗಿ ಇಬ್ಬರೂ ಗುತ್ತಿಗೆದಾರರು ಅರ್ಹತೆಯನ್ನು ಹೊಂದಿದ್ದು, ಇದಕ್ಕೆ ಮುಖ್ಯ ಇಂಜಿನಿಯರ್‌ರವರು ದಿನಾಂಕಃ 03-06-2012ರಲ್ಲಿ ಅನುಮೋದನೆ ನೀಡಿರುತ್ತಾರೆ. ನಂತರ ಸದರಿ ಗುತ್ತಿಗೆದಾರರು ಸಲ್ಲಿಸಿದ್ದ ಆರ್ಥಿಕ ಬಿಡ್ಡನ್ನು ದಿನಾಂಕಃ 05-06-2012ರಂದು ತೆರೆಯಲಾಗಿದ್ದು, ಶ್ರೀ. ಎ.ಹೆಚ್.ಪರಮಶಿವಯ್ಯ ರವರು ಕಡಿಮೆ ಮೊತ್ತವನ್ನು ನಮೂದಿಸಿದ್ದು, (ಶೇಕಡ 24.2 ಹೆಚ್ಚುವರಿ) ಇವರು L1 ಆಗಿರುತ್ತಾರೆ. ಮುಖ್ಯ ಅಭಿಯಂತರರು ದಿನಾಂಕಃ 08-06-2012ರಂದು ನೀಡಿದ ಆದೇಶದಂತೆ ಗುತ್ತಿಗೆದಾರರೊಡನೆ ಸಂಧಾನ ನಡೆಸಿದ್ದು, (ಶೇಕಡ 19.5 ಹೆಚ್ಚುವರಿ) ದಿನಾಂಕಃ 04-07-2012ರಂದು ಆಯುಕ್ತರ ಅನುಮೋದನೆ ಪಡೆಯಲಾಗಿದೆ. ಉಳಿದ ವಿವರಗಳು ಕೆಳಕಂಡಂತಿವೆ.

| | | |
|---|---|---|
| 1 | ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ (2011-12ನೇ ಸಾಲಿನ ದರಪಟ್ಟಿಯಂತೆ) | ರೂ. 259.07 ಲಕ್ಷಗಳು |
| 2 | ಬಿಡ್ಡುದಾರರಾದ ಶ್ರೀ.ಎ.ಹೆಚ್.ಪರಮಶಿವಯ್ಯ ರವರು ನಮೂದಿಸಿರುವ ಟೆಂಡರ್ ಮೊತ್ತ (ಸಂಧಾನದ ನಂತರ) | ರೂ. 3,09,58,015.25 ಲಕ್ಷಗಳು |
| 3 | 2011-12ನೇ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಾಗ ಟೆಂಡರಿಗೆ ಇಟ್ಟ ಮೊತ್ತದ ಮೇಲಿನ ಶೇಕಡವಾರು ಹೆಚ್ಚಳ/ಕಡಿಮೆ | ಶೇಕಡ 19.50 ಹೆಚ್ಚುವರಿ |
| 4 | First Quarter issue rate of steel & Cement ದರಗಳಿಗೆ ಹೋಲಿಸಿದಾಗ (KPWD order No:8772 dated: 29-02-2012 KPWD order No: 225, dated:18-04-2012) | ಶೇಕಡ 8.94 ಹೆಚ್ಚುವರಿ |



ಅಧ್ಯಕ್ಷರು
ಬೃ. ಸಾ. ಕಾ. ಸ್ಥಾಸ

ಶ್ರೀ. ಎ.ಹೆಚ್.ಪರಿಮಶಿವಯ್ಯ ರವರು ನಮೂದಿಸಿರುವ ಮೊತ್ತವು ಮಂಜೂರಾದ ಅಂದಾಜಿನಂತೆ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 19.50 ರಷ್ಟು ಹೆಚ್ಚುವರಿ ಇದ್ದು, ಈ ವರ್ಷದ ಮೊದಲನೇ ಭಾಗದ (first quarter ) ಉಕ್ಕು ಮತ್ತು ಸಿಮೆಂಟ್ ದರಗಳಿಗೆ ಹೋಲಿಸಿದಾಗ ಶೇಕಡ 8.94 ರಷ್ಟು ಹೆಚ್ಚುವರಿಯಾಗಿದ್ದು ಸ್ಪರ್ಧಾತ್ಮಕವಾಗಿರುವುದು ಕಂಡುಬರುತ್ತದೆ. ಮೇಲಿನ ಹಿನ್ನಲೆಯಲ್ಲಿ ಶ್ರೀ. ಎ.ಹೆಚ್.ಪರಮಶಿವಯ್ಯ ರವರು ನಮೂದಿಸಿರುವ ಟೆಂಡರ್ ಮೊತ್ತ ರೂ. 3,09,58,015.25 ರೂ. ಗಳಿಗೆ (ಮಂಜೂರಾದ ಅಂದಾಜು ಪಟ್ಟಿಯಂತೆ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 19.50 ರಷ್ಟು ಹೆಚ್ಚುವರಿ ದರ ಹಾಗೂ ಈ ವರ್ಷದ ಮೊದಲ ಭಾಗದ (First quarter ) ಉಕ್ಕು ಮತ್ತು ಸಿಮೆಂಟ್ ದರಗಳಿಗೆ ಹೋಲಿಸಿದಾಗ ಶೇಕಡ 8.94 ಹೆಚ್ಚುವರಿ)ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ದಿನಾಂಕಃ 18-07-2012ರ ವಿಶೇಷ ಆಯುಕ್ತರವರ ಟಿಪ್ಪಣಿ.

**ಃ ಮುಂದೂಡಿದೆ ಃ**

## 12] ವಿಷಯ ಸಂಖ್ಯೆಃ/72/2012-13

ವಿಶೇಷ ಆಯುಕ್ತರು (ಯೋಜನೆ) ರವರು ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಸುಮಾರು 800 ಕಿ.ಮೀ. ನಷ್ಟು ವಿಸ್ತಾರವಾಗಿದ್ದು ನಗರದ 8 ವಲಯಗಳ ಆರ್ಟಿರಿಯಲ್ ಮತ್ತು ಸಬ್-ಆರ್ಟಿರಿಯಲ್ ರಸ್ತೆಗಳ ಒಟ್ಟು ಉದ್ದವು 1940 ಕಿ.ಮೀ.ಗಳಾಗಿರುತ್ತದೆ. ಈ ಆರ್ಟಿರಿಯಲ್ ಮತ್ತು ಸಬ್-ಆರ್ಟಿರಿಯಲ್ ರಸ್ತೆಗಳಲ್ಲಿ ವಾಹನಗಳ ಸಂಚಾರವು ಯಥೇಚ್ಛವಾಗಿ ಹೆಚ್ಚಾಗಿರುವುದರಿಂದ ರಸ್ತೆಗಳಲ್ಲಿ ಗುಂಡಿಗಳು ಆಗುತ್ತಿದ್ದು, ಇವುಗಳನ್ನು ಕಾಲಕಾಲಕ್ಕೆ ನಿರ್ವಹಣೆ ಮಾಡಬೇಕಾಗಿರುತ್ತದೆ. ಈ ರಸ್ತೆಗಳಲ್ಲಿ ಗಣ್ಯರು, ಅತೀಗಣ್ಯರ ವಾಹನಗಳು ಸಂಚರಿಸುತ್ತಿರುವುದರಿಂದ ರಸ್ತೆಗಳನ್ನು ಗಂಡಿ ರಹಿತ ರಸ್ತೆಗಳಾಗಿ ನಿರ್ವಹಣೆ ಮಾಡಬೇಕಾಗಿರುತ್ತದೆ. ಹಾಲಿ ಈಗ ಉಂಟಾಗುವ ಗುಂಡಿಗಳನ್ನು Conventional method ನಲ್ಲಿ ಮಾಡುತ್ತಿರುವುದರಿಂದ ಗುಂಡಿ ಮುಚ್ಚಿದ ಭಾಗಗಳು ದೀರ್ಘಕಾಲ ಬಾಳಿಕೆ ಬಾರದೇ ಇರುವುದನ್ನು ಗಮನಿಸಲಾಗಿದೆ. ಅಲ್ಲದೇ ಸತತ ವಾಹನ ಸಂಚಾರದಿಂದ Conventional method ನಿಂದ ಶೀಘ್ರವಾಗಿ ಗುಂಡಿಮುಚ್ಚಲು ಸಾಧ್ಯವಾಗುವುದಿಲ್ಲ ಹಾಗೂ ಪ್ರತಿ ಗುಂಡಿ ಮುಚ್ಚಲು ಹೆಚ್ಚಿನ ಕೂಲಿಕಾರರ ಅವಶ್ಯವಿದ್ದು ಹೆಚ್ಚಿನ ಸಮಯಾವಕಾಶವೂ ಬೇಕಾಗುತ್ತದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿನ ಆರ್ಟಿರಿಯಲ್ ಮತ್ತು ಸಬ್-ಆರ್ಟಿರಿಯಲ್ ರಸ್ತೆಗಳ ವಾರ್ಷಿಕ ನಿರ್ವಹಣೆಯಲ್ಲಿ ಪ್ರಮುಖ ಅಂಶವಾದ ರಸ್ತೆ ಗುಂಡಿಗಳನ್ನು ಮುಚ್ಚುವ ಕೆಲಸವನ್ನು "ARTS" (American road Technology & Solutions private limited) ಸಂಸ್ಥೆರವರು ಹೊಸ ಹಾಗೂ ವಿಶಿಷ್ಟ ತಂತ್ರಜ್ಞಾನವನ್ನು ಬಳಸಿಕೊಂಡು ಪ್ರಾಯೋಗಿಕವಾಗಿ ನಿರ್ವಹಿಸಲು ಪ್ರಸ್ತಾವನೆ ಸಲ್ಲಿಸಿರುವ ಮೇರೆಗೆ ಈ ನೂತನ ತಂತ್ರಜ್ಞಾನದಿಂದ ಗುಂಡಿ ಮುಚ್ಚುವ ನಿರ್ವಹಣೆ ಕಾಮಗಾರಿಯನ್ನು ತೆಗೆದುಕೊಳ್ಳುವ ಬಗ್ಗೆ ಯೋಜಿಸಲಾಗಿದೆ. ಈ ತಂತ್ರಜ್ಞಾನದಿಂದ ರಸ್ತೆ ಗುಂಡಿಗಳ ನಿರ್ವಹಣೆಯನ್ನು ಪ್ರಾಯೋಗಿಕವಾಗಿ ನಿರ್ವಹಿಸಲು ಲೋಕೋಪಯೋಗಿ ಇಲಾಖೆಯವರೂ ಸಹ ಯೋಜಿಸಿದ್ದು, ಸದರಿ ತಂತ್ರಜ್ಞಾನದ ಲಾಭ ಉಪಯುಕ್ತತೆ ಕುರಿತು ಸಂಕ್ಷಿಪ್ತವಾಗಿ ಈ ಕೆಳಕಂಡಂತೆ ವಿವರಿಸಲಾಗಿದೆ.

1. This technology will not only ensure the quality of the maintenance (i.e., pot hole filling) but also execute the pot hole filling work expeditiously.
2. The equipment used will do all the pothole filling work without using any labour force. This equipment will clean the pothole, and than compact with mix with a vibratory roller attached to it and the equipments can be moved to the next place of pothole.
3. The entire process of a single pothole filling would take hardly few minutes.

ಅಧ್ಯಕ್ಷರು
ಬೃ. ಸಾ. ಕಾ. ಸ್ಥಾಸ

ಅಧ್ಯಕ್ಷರು
ಬೃ. ಸಾ. ಕಾ. ಸ್ಥಾಸ

4. The pothole filling by this equipment will lost for at least two years (based on the experience of the agency have gained over a period of time).
5. There is no increase in the pothole filling cost compared to the conventional pothole filling cost, As this is a pilot project, the agency is ready to do the pot hole filling at the same department rates.
6. The agency themselves are agreed to Execute the pilot project using the American technology (using Python 5000 pothole patcher machine)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ 923.00 ಕಿ.ಮೀ. ಗಳಷ್ಟು ಆರ್ಟಿರಿಯಲ್ ಮತ್ತು 1017.00 ಕಿ.ಮೀ. ಗಳಷ್ಟು ಸಬ್-ಆರ್ಟಿರಿಯಲ್ ರಸ್ತೆಗಳ ಪೈಕಿ ಪ್ರಾಯೋಗಿಕವಾಗಿ ಪ್ರಮುಖವಾದ 227 ರಸ್ತೆಗಳ ಒಟ್ಟು 806.00 ಕಿ.ಮೀ. ಉದ್ದದ ಆರ್ಟಿರಿಯಲ್ ಮತ್ತು ಸಬ್-ಆರ್ಟಿರಿಯಲ್ ರಸ್ತೆಗಳ ಗುಂಡಿಗಳನ್ನು ಮುಚ್ಚಲು ಒಂದು ವರ್ಷಕ್ಕೆ ರೂ. 4,98,00,000.00(ನಾಲ್ಕು ಕೋಟಿ ತೊಂಬತ್ತೆಂಟು ಲಕ್ಷಗಳು) ಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದೆ. ಸದರಿ ಮೊತ್ತವನ್ನು 2012-13ನೇ ಸಾಲಿನ ಆಯವ್ಯಯದಲ್ಲಿ ಪ್ರಸ್ತಾಪಿಸಲಾದ ಆರ್ಟಿರಿಯಲ್ ಮತ್ತು ಸಬ್-ಆರ್ಟಿರಿಯಲ್ ರಸ್ತೆಗಳನ್ನು ನಿರ್ವಹಣೆ (P-0601) ಅಡಿಯಲ್ಲಿ ಭರಿಸಲಾಗಿದೆ.

ಒಟ್ಟಾರೆ ಆಯ್ದ 806.00 ಕಿ.ಮೀ. ರಸ್ತೆಗಳಿಗೆ ರೂ. 4.98 ಕೋಟಿಗಳು ವೆಚ್ಚ ತಗಲುತ್ತದೆ. ಸರಾಸರಿ ಪ್ರತಿ ಕಿ.ಮೀ. ರಸ್ತೆಗೆ ರೂ. 61,733.00 ವೆಚ್ಚ ತಗಲುತ್ತದೆ. ಕರ್ನಾಟಕ ಲೋಕೋಪಯೋಗಿ ಇಲಾಖೆಯು ಸಹ ಅಂದಾಜು ಮಾಡಿರುವಂತೆ ರಾಷ್ಟ್ರೀಯ ಹೆದ್ದಾರಿಗೆ ರೂ. 61,250.00 ಪ್ರತಿ ಕಿ.ಮೀ. ಮತ್ತು ರಾಜ್ಯ ಹೆದ್ದಾರಿಗೆ ರೂ. 48,125.00 ಪ್ರತಿ ಕಿ.ಮೀ. ಉದ್ದಕ್ಕೆ ವೆಚ್ಚ ತಗಲುತ್ತದೆ.

ರಾಷ್ಟ್ರೀಯ ಹೆದ್ದಾರಿ ಮತ್ತು ರಾಜ್ಯ ಹೆದ್ದಾರಿಗಳಿಗೆ ಹೋಲಿಸಿದಾಗ ಬೆಂಗಳೂರು ನಗರದ ರಸ್ತೆಗಳಲ್ಲಿ ಅನೇಕ ಕಾರಣಗಳಿಂದ ರಸ್ತೆ ಗುಂಡಿಗಳು ಹೆಚ್ಚಾಗಿರುತ್ತವೆ. ಆದುದರಿಂದ ನಗರದ ಆಯ್ದ 806 ಕಿ.ಮಿ. ಉದ್ದದ ರಸ್ತೆಗಳ ಗುಂಡಿ ಮುಚ್ಚಲು ಸರಾಸರಿ ಪ್ರತಿ ಕಿ.ಮೀ.ಗೆ 61,733/- ವೆಚ್ಚ ತಗಲುವುದು ಸಮಂಜಸವಾಗಿರುತ್ತದೆ.

ಪ್ರಸ್ತುತ ಮೇಲೆ ತಿಳಿಸಿರುವ ತಂತ್ರಜ್ಞಾನದ ಯಂತ್ರದಿಂದ ರಸ್ತೆ ಗುಂಡಿಗಳನ್ನು Bituminous Hot mix ಉಪಯೋಗಿಸಿ ಅತೀ ಶೀಘ್ರವಾಗಿ ಮುಚ್ಚಿ ಅದನ್ನು ಆ ಯಂತ್ರದಲ್ಲಿ ಅಳವಡಿಸಿರುವ ತಂತ್ರಜ್ಞಾನದಿಂದ Compaction ಮಾಡುವುದರಿಂದ ಮತ್ತು ಒಂದೇ ಯಂತ್ರದಿಂದ ಎಲ್ಲಾ ಕಾರ್ಯಗಳನ್ನು ಕಡಿಮೆ ಅವಧಿಯಲ್ಲಿ ನಿರ್ವಹಿಸುವುದರಿಂದ ರಸ್ತೆಯಲ್ಲಿ ವಾಹನ ಸಂಚಾರಕ್ಕೆ ಅಡಚಣೆಯಾಗುವುದಿಲ್ಲ. ಅಲ್ಲದೆ Bituminous mix ನಲ್ಲಿ ಶಾಖಾಂಶ (Temperature) ಕಡಿಮೆಯಾದಲ್ಲಿ ಅವಶ್ಯಕವಗಿ ಬೇಕಾಗುವ ಶಾಖಾಂಶ (Temperature) ಅನ್ನು ಕಾಪಾಡಿಕೊಳ್ಳುವ ತಂತ್ರಾಂಶ ಇದರಲ್ಲಿ ಇರುವುದರಿಂದ ಗುಣಮಟ್ಟವನ್ನು ಕಾಯ್ದುಕೊಳ್ಳಬಹುದಾಗಿದೆ.

ಈ ಮೇರೆಗೆ ಕೆಳಕಂಡ ಅಂಶಗಳಿಗೆ ಅನುಮೋದನೆ ಕೋರಿದೆ.

1. ಆರ್ಟಿರಿಯಲ್ ಮತ್ತು ಸಬ್-ಆರ್ಟಿರಿಯಲ್ ರಸ್ತೆಗಳ ವಾರ್ಷಿಕ ನಿರ್ವಹಣೆ ಅಡಿಯಲ್ಲಿ ರಸ್ತೆ ಗುಂಡಿಗಳನ್ನು ಮುಚ್ಚುವ ವಾರ್ಷಿಕ ನಿರ್ವಹಣೆ" ಕಾಮಗಾರಿಯ ಮೊತ್ತವಾದ ರೂ. 498.00ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ.

2. ಆರ್ಟಿರಿಯಲ್ ಮತ್ತು ಸಬ್-ಆರ್ಟಿರಿಯಲ್ ರಸ್ತೆಗಳ ವಾರ್ಷಿಕ ನಿರ್ವಹಣೆ ಅಡಿಯಲ್ಲಿ ರಸ್ತೆ ಗುಂಡಿಗಳನ್ನು ಮುಚ್ಚುವ ಕೆಲಸವನ್ನು ನಿರ್ವಹಿಸಲು ವಿಶಿಷ್ಟ ತಂತ್ರಜ್ಞಾನ ಹಾಗೂ ಏಕಮಾತ್ರ ಸಂಸ್ಥೆಯಾದ M/s. arts (American Road Technology & Solutions Private limited) ಸಂಸ್ಥೆರವರಿಗೆ ನೇರ ಗುತ್ತಿಗೆ ಆಧಾರದ ಮೇಲೆ ವಹಿಸಲು KTTP ಕಾಯ್ದೆ 4(ಜಿ) ಅಡಿಯಲ್ಲಿ ವಿನಾಯಿತಿ ಪಡೆಯಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಅನುಮೋದನೆ.

ಅಧ್ಯಕ್ಷರು
ಬೃ. ಸಾ. ಕಾ. ಸ್ಥಾಸ

3. ಸರ್ಕಾರದಿಂದ KTTP ಕಾಯ್ದೆ 4(ಜಿ) ಅಡಿಯಲ್ಲಿ ವಿನಾಯಿತಿ ನಿರೀಕ್ಷಿಸಿ ಸದರಿ ಸಂಸ್ಥೆಯೊಂದಿಗೆ ಗುತ್ತಿಗೆ ಕರಾರು ಮಾಡಿಕೊಂಡು ರಸ್ತೆ ಗುಂಡಿಗಳ ನಿರ್ವಹಣೆ ಕಾಮಗಾರಿಯನ್ನು ಪ್ರಾರಂಭಿಸಲು ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ದಿನಾಂಕಃ 13-07-2012ರ ವಿಶೇಷ ಆಯುಕ್ತರವರ ಟಿಪ್ಪಣಿ.

**: ಮುಂದೂಡಿದೆ :**

## 13] ವಿಷಯ ಸಂಖ್ಯೆಃ/73/2012-13

ಬಿ.ಬಿ.ಎಂ.ಪಿ. ವ್ಯಾಪ್ತಿಯ ಬೊಮ್ಮನಹಳ್ಳಿ ವಲಯದ ಮಂಗಮ್ಮನ ಪಾಳ್ಯ ಮದೀನ ನಗರ (ವಾರ್ಡ್ ನಂಃ 190)ದಿನಾಂಕಃ 30-05-2011ರಂದು ರಾತ್ರಿ ಬಿದ್ದ ಭಾರಿ ಮಳೆಗೆ ಮೇಲ್ಕಂಡ ಪ್ರದೇಶದಲ್ಲಿ ಗಾರ್ವೆಬಾವಿ ಪಾಳ್ಯ ಕೆರೆ ಹಾಗೂ ಶ್ಯಾಮ್ ಸುಂದರ ಪಾಳ್ಯ ಕೆರೆ ಕೋಡಿಯ ನೀರು ಹರಿದು ಹೋಗಲು ಯಾವುದೇ ರಾಜಕಾಲುವೆ ಇಲ್ಲದ ಕಾರಣ ಮಳೆಗಾಲದಲ್ಲಿ ಮದೀನ ನಗರ ಮತ್ತು ಸುತ್ತಮುತ್ತಲುನ ಪ್ರದೇಶವು ಜಲಾವೃತಗೊಂಡು ಸಾರ್ವಜನಿಕರ ಆಸ್ತಿಪಾಸ್ತಿಗಳಿಗೆ ಹಾನಿ ಹಾಗೂ ವಾಹನ ಸಂಚಾರಕ್ಕೆ ತೊಂದರೆ ಉಂಟಾಗುತ್ತಿರುತ್ತದೆ (ಇದರ ಛಾಯಾಚಿತ್ರಗಳನ್ನು ಲಗತ್ತಿಸಲಾಗಿದೆ)

ಈ ಬಗ್ಗ ದಿನಾಂಕಃ 01-06-2011ರಂದು ಮಾನ್ಯ ಗೃಹ ಮಂತ್ರಿಗಳು ಹಾಗೂ ಸ್ಥಳಿಯ ಶಾಸಕರಾದ ಶ್ರೀ. ಸತೀಶ್‌ರೆಡ್ಡಿ ರವರು ಪಾಲಿಕೆ ಸದಸ್ಯರು ಹಾಗೂ ಆಯುಕ್ತರೊಂದಿಗೆ ಸ್ಥಳ ಪರಿಶೀಲನೆ ಮಾಡಿ ತುರ್ತಾಗಿ ಶಾಶ್ವತ ಮಳೆ ನೀರುಗಾಲುವೆ ನಿರ್ಮಾಣ ಮಾಡುವ ಬಗ್ಗೆ ಕ್ರಮ ಕೈಗೊಳ್ಳಲು ಸೂಚನೆ ನೀಡಿರುತ್ತಾರೆ. ಅದರಂತೆ ಲೋಕೋಪಯೋಗಿ ಇಲಾಖೆಯ ದರಗಳಂತೆ ರೂ. 350.00 ಲಕ್ಷಗಳಿಗೆ ತಯಾರಿಸಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆಯಲಾಗಿದೆ.

ಈ ಕಾಮಗಾರಿಗೆ ದಿನಾಂಕಃ 11-04-2012ರಂದು ಮೊದಲನೇ ಬಾರಿ E-procurement Portal ನಲ್ಲಿ Two Cover system ನಲ್ಲಿ ಅಧಿಸೂಚನೆಯನ್ನು ಹೊರಡಿಸಲಾಯಿತು. ಟೆಂಡರ್ ಸಲ್ಲಿಸಲು ಕಡೆಯ ದಿನಾಂಕಃ 11-05-2012. ಟೆಂಡರ್‌ನಲ್ಲಿ ಒಬ್ಬ ಗುತ್ತಿಗೆದಾರರು ಭಾಗವಹಿಸಿರುತ್ತಾರೆ. ಆದ್ದರಿಂದ ಈ ಕಾಮಗಾರಿಯನ್ನು ಮರು 2ನೇ ಕರೆ ಟೆಂಡರ್ ಅಧಿಸೂಚನೆ ದಿನಾಂಕಃ 05-06-2012ರಂದು Two Cover system ನಲ್ಲಿ ಅಧಿಸೂಚನೆಯನ್ನು ಹೊರಡಿಸಲಾಯಿತು. ಮಂಜೂರಾದ ಅಂದಾಜಿನ ದರಗಳಂತೆ ಟೆಂಡರ್‌ಗೆ ಇಡಲಾದ ಮೊತ್ತವು ರೂ. 3,37,38000.00 ರೂ.ಗಳಿಗೆ ಟೆಂಡರ್‌ಅನ್ನು ಸಲ್ಲಿಸಿ ಕಡೆಯ ದಿನಾಂಕಃ 22-06-2012 ಇಡಲಾಗಿತ್ತು. ಟೆಂಡರ್‌ನಲ್ಲಿ ಇಬ್ಬರು ಗುತ್ತಿಗೆದಾರರು ಶ್ರೀ. ಬಿ.ಎಂ.ರವೀಂದ್ರ ಶ್ರೀ. ಟಾಮ್.ಟಾಮ್.ಪೆದ್ದಾರೆಡ್ಡಿ ರವರು ಭಾಗವಹಿಸಿರುತ್ತಾರೆ. ಸದರಿ ಗುತ್ತಿಗೆದಾರರು ಸಲ್ಲಿಸಿದ್ದ Technical bid ಅನ್ನು ದಿನಾಂಕಃ 25-06-2012ರಂದು ತೆರೆಯಲಾಗಿದ್ದು, ತಾಂತ್ರಿಕವಾಗಿ ಇಬ್ಬರೂ ಗುತ್ತಿಗೆದಾರರೂ ಅರ್ಹತೆಯನ್ನು ಹೊಂದಿದ್ದು, ಇದಕ್ಕೆ ಮುಖ್ಯ ಇಂಜಿನಿಯರ್‌ರವರು ದಿನಾಂಕಃ 29-06-2012ರಲ್ಲಿ ಅನುಮೋದನೆ ನೀಡಿರುತ್ತಾರೆ. ನಂತರ ಸದರಿ ಗುತ್ತಿಗೆದಾರರು ಸಲ್ಲಿಸಿದ್ದ ಆರ್ಥಿಕ ಬಿಡ್ಡನ್ನು ದಿನಾಂಕಃ 30-06-2012ರಂದು ತೆರೆಯಲಾಗಿದ್ದು, ಶ್ರೀ. ಟಾಮ್.ಟಾಮ್. ಪೆದ್ದರೆಡ್ಡಿ ರವರು ಕಡಿಮೆ ಮೊತ್ತವನ್ನು ನಮೂದಿಸಿದ್ದು, ಇವರು L1 ಆಗಿರುತ್ತಾರೆ. ಮುಖ್ಯ ಅಭಿಯಂತರರು ದಿನಾಂಕಃ 07-07-2012ರಂದು ಅನುಮೋದನೆ ನೀಡಿದ್ದು, ಶ್ರೀ. ಟಾಮ್.ಟಾಮ್.ಪೆದ್ದರೆಡ್ಡಿ ರವರು ಕಡಿಮೆ ದರ ನಮೂದಿಸಿರುವ ಗುತ್ತಿಗೆದಾರರಾಗಿರುತ್ತಾರೆ. ಆದ್ದರಿಂದ ದಿನಾಂಕಃ 11-07-2012ರಂದು ನಮೂದಿಸಿರುವ ಅನುಮೋದನೆ ಪಡೆಯಲಾಗಿದೆ. ಉಳಿದ ವಿವರಗಳು ಕೆಳಕಂಡಂತಿವೆ.

| | | |
|---|---|---|
| 1 | ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ ( 2011-12ನೇ ಸಾಲಿನ ದರಪಟ್ಟಿಯಂತೆ) | ರೂ. 3,38,60,334.51 ಲಕ್ಷಗಳು |
| 2 | ಬಿಡ್ಡುದಾರರಾದ ಶ್ರೀ.ಟಾಮ್‌ಟಾಮ್ ಪೆದ್ದಾರೆಡ್ಡಿ ರವರು ನಮೂದಿಸಿರುವ ಟೆಂಡರ್ ಮೊತ್ತ | ರೂ. 4,25,07,669.39 ಲಕ್ಷಗಳು |
| | 2010-11ನೇ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಾಗ ಟೆಂಡರಿಗೆ ಇಟ್ಟ ಮೊತ್ತದ ಮೇಲಿನ ಶೇಕಡವಾರು | ಶೇಕಡ 8.29 ಹೆಚ್ಚುವರಿ |



ಅಧ್ಯಕ್ಷರು
ಬೃ. ಸಾ./ಕಾ. ಸ್ಥಾಸ

ಅಧ್ಯಕ್ಷರು
ಬೃ. ಸಾ. ಕಾ. ಸ್ಥಾಸ

| | | |
|---|---|---|
| | ಹೆಚ್ಚಳ/ಕಡಿಮೆ | |
| | ಬಿಡ್ಡುದಾರರಾದ ಶ್ರೀ. ಟಾಮ್.ಟಾಮ್.ಪೆದ್ದರೆಡ್ಡೆ ರವರು ನಮೂದಿಸಿರುವ ಟೆಂಡರ್ ಮೊತ್ತ (First quarter issue rate of steel & cement ದರಗಳಿಗೆ ಹೋಲಿಸಿದಾಗ (KPwD order No: 8772, dated:29-02-2012 KPWD order No:225, dated: 18-04-2012) | ರೂ.3,72,87,254.46 ಲಕ್ಷಗಳು (ಶೇ.2.00 ಹೆಚ್ಚುವರಿ) |

ಶ್ರೀ. ಟಾಮ್.ಟಾಮ್.ಪೆದ್ದಾರೆಡ್ಡಿ ರವರು ನಮೂದಿಸಿರುವ ಮೊತ್ತವು ಮಂಜೂರಾದ ಅಂದಾಜಿನಂತೆ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 8.29 ರಷ್ಟು ( 2011-12ನೇ ಸಾಲಿನ ದರಪಟ್ಟಿ) ಹೆಚ್ಚುವರಿ ಇದ್ದ, ಈ ವರ್ಷದ ಮೊದಲನೇ ಭಾಗದ (first Quarter) ಉಕ್ಕು ಮತ್ತು ಸಿಮೆಂಟ್ ದರಗಳಿಗೆ ಹೋಲಿಸಿದಾಗ ಶೇಕಡ 2.00 ರಷ್ಟು ಹೆಚ್ಚುವರಿಯಾಗಿದ್ದು, ಸ್ಪರ್ಧಾತ್ಮಕವಾಗಿರುವುದು ಕಂಡು ಬರುತ್ತದೆ. ಮೇಲಿನ ಹಿನ್ನಲೆಯಲ್ಲಿ ಶ್ರೀ.ಟಾಮ್.ಟಾಮ್.ಪೆದ್ದಾರೆಡ್ಡಿ ರವರು ನಮೂದಿಸಿರುವ ಟೆಂಡರ್ ಮೊತ್ತ 3,72,87,254.46 ರೂ.ಗಳಿಗೆ (ಮಂಜೂರಾದ ಅಂದಾಜು ಪಟ್ಟಿಯಂತೆ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 8.29 (2011-12ನೇ ಸಾಲಿನ ದರಪಟ್ಟಿ) ರಷ್ಟು ಹೆಚ್ಚುವರಿ ದರ ಹಾಗೂ ಈ ವರ್ಷದ ಮೊದಲಭಾಗದ (First qurter) ಉಕ್ಕು ಮತ್ತು ಸಿಮೆಂಟ್ ದರಗಳಿಗೆ ಹೋಲಿಸಿದಾಗ ಶೇಕಡ 2.00 ರಷ್ಟು ಹೆಚ್ಚುವರಿ) ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ದಿನಾಂಕಃ 16-07-2012ರ ವಿಶೇಷ ಆಯುಕ್ತರವರ ಟಿಪ್ಪಣಿ.

**ನಿರ್ಣಯಃ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕಃ 16-07-2012ರ ಟಿಪ್ಪಣಿಯನ್ನು ಒಪ್ಪಲಾಯಿತು.**

## 14] ವಿಷಯ ಸಂಖ್ಯೆಃ/74/2012-13

ವಿಶೇಷ ಆಯುಕ್ತರು (ಯೋಜನೆ) ರವರು ಟಿಪ್ಪಣಿಯಲ್ಲಿ ವಿವರಿಸಿರುವಂತೆ, 2012-13ನೇ ಸಾಲಿಗೆ ಕೇಂದ್ರ ಕಛೇರಿ ವಿವಿಧ ಕಟ್ಟಡಗಳಿಗೆ, ಪುರಭವನ ಹಾಗೂ ಐ.ಪಿ.ಪಿ. ಕಟ್ಟಡಗಳಿಗೆ ಸ್ವಚ್ಛತಾ ಸೇವೆ ಒದಗಿಸಲು ಇ-ಪ್ರಕ್ಯೂರ್‌ಮೆಂಟ್ ಪ್ರಕಟಣೆ ಸಂಖ್ಯೆಃ ಕಾ.ಪಾ.ಅ/ಎಂಪಿಇಡಿ-ಕೇ/ಟೆಂಡರ್/03/12-13 ದಿನಾಂಕಃ 08-05-2012 ಮೂಲಕ ಟೆಂಡರ್‌ಗಳನ್ನು ಪ್ರಕಟಣೆ ನೀಡಲಾಗಿದೆ. ಸದರಿ ಟೆಂಡರ್ ಪ್ರಕಟಣೆಗನುಗುಣವಾಗಿ ನಾಲ್ಕು ಟೆಂಡರ್‌ಗಳನ್ನು ಸ್ವೀಕರಿಸಲಾಗಿದ್ದು ಅವುಗಳ ಸಂಕ್ಷಿಪ್ತ ವಿವರ ಈ ಕೆಳಕಂಡಂತಿರುತ್ತದೆ.

1)M/s. SRI UDYOG ENTERPRISES - Rs. 5453000/-
2)M/s.TIGER SECURITY SERVICES - Rs. 5765632/-
3)M/s.PANORAMA ENTERPRISES - Rs. 7453324/-
4)M/s.NELAANJANAA ENTERPRISES - Rs. 8548416/-

ಮೇಲಿನ ಸಂಸ್ಥೆಗಳು ಸೂಚಿಸಿರುವ ಕಾರ್ಮಿಕರ ವೇತನಗಳನ್ನು ಸರ್ಕಾರದ ಆದೇಶ ಕೆ.ಎ.ಇ/152/ಎಲ್.ಎಂ.ಡಬ್ಲ್ಯೂ./2008 ದಿನಾಂಕಃ 21-01-2011ರಲ್ಲಿ ಕಾರ್ಮಿಕರಿಗೆ ನಿಗದಿಪಡಿಸಿರುವ ದರಗಳಂತೆ ಮೌಲ್ಯಮಾಪನ ಮಾಡಲಾಗಿದೆ. ಇದರಂತೆ ಕ್ರಮ ಸಂಖ್ಯೆಃ 1 ಮತ್ತು 2 ಸಂಸ್ಥೆಗಳು ನಮೂದಿಸಿರುವ ದರಗಳು ಸರ್ಕಾರವು ನಿಗದಿಪಡಿಸಿರುವ ಕನಿಷ್ಠ ವೇತನಗಳ ಮಿತಿಗಿಂತ ಕಡಿಮೆ ಇರುತ್ತದೆ. ಈ ಟೆಂಡರ್ ಮೊತ್ತವನ್ನು ಪರಿಗಣಿಸಿದ್ದಲ್ಲಿ ಸ್ವಚ್ಛತಾ ಸಿಬ್ಬಂದಿಗಳಿಗೆ ಸರ್ಕಾರವು ನಿಗದಿಪಡಿಸಿರುವ ಕನಿಷ್ಠ ವೇತನಗಳನ್ನು ಪಾವತಿಸಲು ಸಾಧ್ಯವಾಗುವುದಿಲ್ಲ. ಈ ಹಿನ್ನಲೆಯಲ್ಲಿ ಅತಿ ಕಡಿಮೆ ಮೊತ್ತ ನಮೂದಿಸಿರುವ ಮೆಃ ಉದ್ಯೋಗ್ ಎಂಟರ್‌ಪ್ರೈಸಸ್ ಮತ್ತು ಮೆಃ ಟೈಗರ್ ಸೆಕ್ಯೂರಿಟಿ ಸರ್ವಿಸಸ್ ರವರ ಟೆಂಡರ್ ಗಳನ್ನು ಹೊರತುಪಡಿಸಿ ಉಳಿದ ಎರಡು ಟೆಂಡರ್‌ಗಳಾದ ಕ್ರ.ಸಂ. 3 ಮತ್ತು 4 ರವರ ಆರ್ಥಿಕ ಬಿಡ್‌ನಲ್ಲಿ ಅರ್ಹ ಗುತ್ತಿಗೆದಾರರಾಗಿರುತ್ತಾರೆ.

ಈ ಮೇಲಿನ ಅರ್ಹ ಗುತ್ತಿಗೆದಾರರ ಪೈಕಿ ಮೆಃ ಪನೋರಮ ಎಂಟರ್‌ಪ್ರೈಸಸ್ ರವರು ನಮೂದಿಸಿರುವ ಮೊತ್ತ ರೂ. 7453324/-ಗಳು ಸರ್ಕಾರ ನಿಗದಿಪಡಿಸಿರುವ ಕನಿಷ್ಠ ವೇತನಗಳ

ಅಧ್ಯಕ್ಷರು
ಬೃ.ಸಾ.ಕಾ. ಸ್ಥಾಸ

ಪರಿಮಿತಿಯಲ್ಲಿರುತ್ತದೆ. ಈ ಮೊತ್ತವು ಶೇಕಡಾ 12.05 ರಷ್ಟು ಕಡಿಮೆ ಪರಿಷ್ಕೃತ ಅಂದಾಜು ಮೊತ್ತಕ್ಕಿಂತ (Re casted estimate based on minimum wages fixed by Government in force) ಕಡಿಮೆ ಇರುತ್ತದೆ.

ಮೆಃ ನೀಲಾಂಜನ್ ಎಂಟರ್‌ಪ್ರೈಸಸ್ ರವರು ಸೂಚಿಸಿರುವ ಮೊತ್ತವು ರೂ. 8548416/- ಗಳಿದ್ದು ಶೇಕಡಾ 0.86 ರಷ್ಟು ಹೆಚ್ಚಾಗಿರುತ್ತದೆ. ಈ ದರಗಳು ಕನಿಷ್ಠ ವೇತನದ ಮಿತಿಯಲ್ಲಿದ್ದರೂ ಗರಿಷ್ಠ ದರಗಳಾಗಿರುತ್ತದೆ.

ಈ ಮೇಲಿನ ಅಂಶಗಳನ್ನು ಪರಿಗಣಿಸಿ ಸರ್ಕಾರವು ನಿಗದಿಪಡಿಸಿರುವ ಕನಿಷ್ಠ ವೇತನದ ಪರಿಮಿತಿಗೆ ಒಳಪಡದೆ ಇರುವ ಕನಿಷ್ಠ ದರ ನಮೂದಿಸಿರುವ ಕ್ರಮ ಸಂಖ್ಯೆಃ 1 ಮತ್ತು 2ರಲ್ಲಿನ ಗುತ್ತಿಗೆದಾರರನ್ನು ಹೊರತುಪಡಿಸಿ ಕ್ರ.ಸಂಖ್ಯೆ-3ರ ಗುತ್ತಿಗೆದಾರರಾದ ಮೆಃ ಪನೋರಮ ಎಂಟರ್‌ಪ್ರೈಸಸ್ ರವರ ಟೆಂಡರ್‌ಗಳನ್ನು ಪರಿಷ್ಕೃತ ಅಂದಾಜು ಮೊತ್ತಕ್ಕಿಂತ ಶೇಕಡ 12.05 ಕಡಿಮೆ ಮೊತ್ತಗಳಿಗೆ ಅನುಮೋದನೆ ಕೋರಿ ಬೃಹತ್ ಸಾರ್ವಜನಿ ಕಾಮಗಾರಿ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ದಿನಾಂಕಃ 20-07-2012ರ ವಿಶೇಷ ಆಯುಕ್ತರು(ಯೋಜನೆ) ರವರ ಟಿಪ್ಪಣಿ.

**ನಿರ್ಣಯಃ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕಃ 20-07-2012ರ ಟಿಪ್ಪಣಿಯನ್ನು ಒಪ್ಪಲಾಯಿತು.**

## 15] ವಿಷಯ ಸಂಖ್ಯೆಃ/75/2012-13

ವಿಶೇಷ ಆಯುಕ್ತರು (ಯೋಜನೆ) ರವರು ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಹೆಬ್ಬಾಳ ಮುಖ್ಯ ಕಣಿವೆ H-100 ಗಂಗಾನಗರ (ವಾರ್ಡ್ ಸಂಖ್ಯೆ: 20) ಹರಿಯುತ್ತಿದ್ದು, ಪ್ರತಿ ಮಳೆಗಾಲದಲ್ಲೂ ಸದರಿ ಪ್ರದೇಶದಲ್ಲಿ ನೀರು ತುಂಬಿ ಹರಿದು ಸಾರ್ವಜನಿಕರ ಆಸ್ತಿಗೆ ನಷ್ಟ ಉಂಟಾಗುತ್ತಿದ್ದು, ಇದನ್ನು ತಪ್ಪಿಸಲು ಕಣಿವೆಯನ್ನು ಅಗಲ ಹಾಗೂ ಆಳಗೊಳಿಸಿ RCC retaining wall ನಿರ್ಮಿಸಲು ಅಂದಾಜನ್ನು 2011-12 ನೇ ಸಾಲಿನ ಲೋಕೋಪಯೋಗಿ ಮತ್ತು ಒಳನಾಡು ಸಾರಿಗೆ, ಬೆಂಗಳೂರು ವೃತ್ತದ ದರಪಟ್ಟಿಯ ದರಗಳನ್ನು ಪರಿಗಣಿಸಿ ರೂ. 100.00 ಲಕ್ಷಗಳಿಗೆ ತಯಾರಿಸಿ ಸಕ್ಷಮ ಪ್ರಾಧಿಕಾರದಿಂದ ಆಡಳಿತಾತ್ಮಕ ಅನುಮೋದನೆ ಪಡೆದು ಟೆಂಡರ್ ಕರೆಯಲಾಯಿತು.

ಈ ಕಾಮಗಾರಿಗೆ ದಿನಾಂಕ 12.04.2012 ರಂದು ಕರ್ನಾಟಕ ಸರ್ಕಾರದ e-procurement portal ಮೂಲಕ ಟೆಂಡರ್‌ನ್ನು ಆಹ್ವಾನಿಸಲಾಗಿತ್ತು. ಸದರಿ ಟೆಂಡರ್‌ಗೆ ಮೊದಲನೇ ಭಾರಿ ಯಾರೂ ಭಾಗವಹಿಸಿರಲಿಲ್ಲ. ದಿನಾಂಕ 21.05.2012 ರಂದು 2ನೇ ಬಾರಿ ಟೆಂಡರ್ ಆಹ್ವಾನಿಸಲಾಗಿತ್ತು ಸದರಿ ಟೆಂಡರ್‌ಗೆ ಒಬ್ಬ ಬಿಡ್‌ದಾರರು ಮಾತ್ರ ಭಾಗವಹಿಸಿದ್ದರು. ಆದರೆ ಕೆಲವು ದಾಖಲೆಗಳನ್ನು ಸಲ್ಲಿಸದೇ ಇದ್ದ ಕಾರಣ ಅವರ ತಾಂತ್ರಿಕ ಬಿಡ್ ತಿರಸ್ಕರಿಸಿ ದಿನಾಂಕ 07.06.2012 ರಂದು 3ನೇ ಬಾರಿ ಟೆಂಡರ್ ಆಹ್ವಾನಿಸಲಾಗಿತ್ತು. ಟೆಂಡರ್ ಸಲ್ಲಿಸಲು ಕಡೆಯ ದಿನಾಂಕವಾಗಿದ್ದ 18.06.2012 ರಂದು ಬಿಡ್ ಸಲ್ಲಿಸಿದ್ದ ಒಬ್ಬ ಗುತ್ತಿಗೆದಾರರಾದ ಶ್ರೀ ಚಂದ್ರಶೇಖರ್ ರವರು ಸಲ್ಲಿಸಿದ್ದ ದಾಖಲೆಗಳನ್ನು ಪರಿಶೀಲಿಸಲಾಗಿ ತಾಂತ್ರಿಕ ಬಿಡ್ ಪುರಸ್ಕರಿಸಲ್ಪಟ್ಟಿದೆ.

ಇವರು ಸಲ್ಲಿಸಿದ್ದ ಆರ್ಥಿಕ ಬಿಡ್‌ನ್ನು ದಿನಾಂಕ: 21.06.2012 ರಂದು ತೆರೆಯಲಾಗಿದ್ದು ಕೆಳಕಂಡಂತೆ ಒಟ್ಟಾರೆ ಮೊತ್ತವನ್ನು ನಮೂದಿಸಿರುತ್ತಾರೆ.

1. This technology will not only ensure the quality of the maintenance (i.e., pot hole filling) but also execute the pot hole filling work expeditiously.
2. The equipment used will do all the pothole filling work without using any labour force. This equipment will clean the pothole, and than compact with mix with a vibratory roller attached to it and the equipments can be moved to the next place of pothole.
3. The entire process of a single pothole filling would take hardly few minutes.
4. The pothole filling by this equipment will lost for at least two years (based on the experience of the agency have gained over a period of time).
5. There is no increase in the pothole filling cost compared to the conventional pothole filling cost, As this is a pilot project, the agency is ready to do the pot hole filling at the same department rates.
6. The agency themselves are agreed to Execute the pilot project using the American technology (using Python 5000 pothole patcher machine)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ 923.00 ಕಿ.ಮೀ. ಗಳಷ್ಟು ಆರ್ಟಿರಿಯಲ್ ಮತ್ತು 1017.00 ಕಿ.ಮೀ. ಗಳಷ್ಟು ಸಬ್-ಆರ್ಟಿರಿಯಲ್ ರಸ್ತೆಗಳ ಪೈಕಿ ಪ್ರಾಯೋಗಿಕವಾಗಿ ಪ್ರಮುಖವಾದ 227 ರಸ್ತೆಗಳ ಒಟ್ಟು 806.00 ಕಿ.ಮೀ. ಉದ್ದದ ಆರ್ಟಿರಿಯಲ್ ಮತ್ತು ಸಬ್-ಆರ್ಟಿರಿಯಲ್ ರಸ್ತೆಗಳ ಗುಂಡಿಗಳನ್ನು ಮುಚ್ಚಲು ಒಂದು ವರ್ಷಕ್ಕೆ ರೂ. 4,98,00,000.00(ನಾಲ್ಕು ಕೋಟಿ ತೊಂಬತ್ತೆಂಟು ಲಕ್ಷಗಳು) ಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದೆ. ಸದರಿ ಮೊತ್ತವನ್ನು 2012-13ನೇ ಸಾಲಿನ ಆಯವ್ಯಯದಲ್ಲಿ ಪ್ರಸ್ತಾಪಿಸಲಾದ ಆರ್ಟಿರಿಯಲ್ ಮತ್ತು ಸಬ್-ಆರ್ಟಿರಿಯಲ್ ರಸ್ತೆಗಳನ್ನು ನಿರ್ವಹಣೆ (P-0601) ಅಡಿಯಲ್ಲಿ ಭರಿಸಲಾಗಿದೆ.

Sridhara Reddy

ಒಟ್ಟಾರೆ ಆಯ್ದ 806.00 ಕಿ.ಮೀ. ರಸ್ತೆಗಳಿಗೆ ರೂ. 4.98 ಕೋಟಿಗಳು ವೆಚ್ಚ ತಗಲುತ್ತದೆ. ಸರಾಸರಿ ಪ್ರತಿ ಕಿ.ಮೀ. ರಸ್ತೆಗೆ ರೂ. 61,733.00 ವೆಚ್ಚ ತಗಲುತ್ತದೆ. ಕರ್ನಾಟಕ ಲೋಕೋಪಯೋಗಿ ಇಲಾಖೆಯು ಸಹ ಅಂದಾಜು ಮಾಡಿರುವಂತೆ ರಾಷ್ಟ್ರೀಯ ಹೆದ್ದಾರಿಗೆ ರೂ. 61,250.00 ಪ್ರತಿ ಕಿ.ಮೀ. ಮತ್ತು ರಾಜ್ಯ ಹೆದ್ದಾರಿಗೆ ರೂ. 48,125.00 ಪ್ರತಿ ಕಿ.ಮೀ. ಉದ್ದಕ್ಕೆ ವೆಚ್ಚ ತಗಲುತ್ತದೆ.

ರಾಷ್ಟ್ರೀಯ ಹೆದ್ದಾರಿ ಮತ್ತು ರಾಜ್ಯ ಹೆದ್ದಾರಿಗಳಿಗೆ ಹೋಲಿಸಿದಾಗ ಬೆಂಗಳೂರು ನಗರದ ರಸ್ತೆಗಳಲ್ಲಿ ಅನೇಕ ಕಾರಣಗಳಿಂದ ರಸ್ತೆ ಗುಂಡಿಗಳು ಹೆಚ್ಚಾಗಿರುತ್ತವೆ. ಆದುದರಿಂದ ನಗರದ ಆಯ್ದ 806 ಕಿ.ಮಿ. ಉದ್ದದ ರಸ್ತೆಗಳ ಗುಂಡಿ ಮುಚ್ಚಲು ಸರಾಸರಿ ಪ್ರತಿ ಕಿ.ಮೀ.ಗೆ 61,733/- ವೆಚ್ಚ ತಗಲುವುದು ಸಮಂಜಸವಾಗಿರುತ್ತದೆ.

ಪ್ರಸ್ತುತ ಮೇಲೆ ತಿಳಿಸಿರುವ ತಂತ್ರಜ್ಞಾನದ ಯಂತ್ರದಿಂದ ರಸ್ತೆ ಗುಂಡಿಗಳನ್ನು Bituminous Hot mix ಉಪಯೋಗಿಸಿ ಅತೀ ಶೀಘ್ರವಾಗಿ ಮುಚ್ಚಿ ಅದನ್ನು ಆ ಯಂತ್ರದಲ್ಲಿ ಅಳವಡಿಸಿರುವ ತಂತ್ರಜ್ಞಾನದಿಂದ Compaction ಮಾಡುವುದರಿಂದ ಮತ್ತು ಒಂದೇ ಯಂತ್ರದಿಂದ ಎಲ್ಲಾ ಕಾರ್ಯಗಳನ್ನು ಕಡಿಮೆ ಅವಧಿಯಲ್ಲಿ ನಿರ್ವಹಿಸುವುದರಿಂದ ರಸ್ತೆಯಲ್ಲಿ ವಾಹನ ಸಂಚಾರಕ್ಕೆ ಅಡಚಣೆಯಾಗುವುದಿಲ್ಲ. ಅಲ್ಲದೆ Bituminous mix ನಲ್ಲಿ ಶಾಖಾಂಶ (Temperature) ಕಡಿಮೆಯಾದಲ್ಲಿ ಅವಶ್ಯಕವಗಿ ಬೇಕಾಗುವ ಶಾಖಾಂಶ (Temperature) ಅನ್ನು ಕಾಪಾಡಿಕೊಳ್ಳುವ ತಂತ್ರಾಂಶ ಇದರಲ್ಲಿ ಇರುವುದರಿಂದ ಗುಣಮಟ್ಟವನ್ನು ಕಾಯ್ದುಕೊಳ್ಳಬಹುದಾಗಿದೆ.

ಈ ಮೇರೆಗೆ ಕೆಳಕಂಡ ಅಂಶಗಳಿಗೆ ಅನುಮೋದನೆ ಕೋರಿದೆ.

1. ಆರ್ಟಿರಿಯಲ್ ಮತ್ತು ಸಬ್-ಆರ್ಟಿರಿಯಲ್ ರಸ್ತೆಗಳ ವಾರ್ಷಿಕ ನಿರ್ವಹಣೆ ಅಡಿಯಲ್ಲಿ ರಸ್ತೆ ಗುಂಡಿಗಳನ್ನು ಮುಚ್ಚುವ ವಾರ್ಷಿಕ ನಿರ್ವಹಣೆ" ಕಾಮಗಾರಿಯ ಮೊತ್ತವಾದ ರೂ. 498.00ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ.

2. ಆರ್ಟಿರಿಯಲ್ ಮತ್ತು ಸಬ್-ಆರ್ಟಿರಿಯಲ್ ರಸ್ತೆಗಳ ವಾರ್ಷಿಕ ನಿರ್ವಹಣೆ ಅಡಿಯಲ್ಲಿ ರಸ್ತೆ ಗುಂಡಿಗಳನ್ನು ಮುಚ್ಚುವ ಕೆಲಸವನ್ನು ನಿರ್ವಹಿಸಲು ವಿಶಿಷ್ಟ ತಂತ್ರಜ್ಞಾನ ಹಾಗೂ ಏಕಮಾತ್ರ ಸಂಸ್ಥೆಯಾದ M/s. arts (American Road Technology & Solutions Private limited) ಸಂಸ್ಥೆರವರಿಗೆ ನೇರ ಗುತ್ತಿಗೆ ಆಧಾರದ ಮೇಲೆ ವಹಿಸಲು KTTP ಕಾಯ್ದೆ 4(ಜಿ) ಅಡಿಯಲ್ಲಿ ವಿನಾಯಿತಿ ಪಡೆಯಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಅನುಮೋದನೆ.

3. ಸರ್ಕಾರದಿಂದ KTTP ಕಾಯ್ದೆ 4(ಜಿ) ಅಡಿಯಲ್ಲಿ ವಿನಾಯಿತಿ ನಿರೀಕ್ಷಿಸಿ ಸದರಿ ಸಂಸ್ಥೆಯೊಂದಿಗೆ ಗುತ್ತಿಗೆ ಕರಾರು ಮಾಡಿಕೊಂಡು ರಸ್ತೆ ಗುಂಡಿಗಳ ನಿರ್ವಹಣೆ ಕಾಮಗಾರಿಯನ್ನು ಪ್ರಾರಂಭಿಸಲು ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ದಿನಾಂಕಃ 13-07-2012ರ ವಿಶೇಷ ಆಯುಕ್ತರವರ ಟಿಪ್ಪಣಿ.

**: ಮುಂದೂಡಿದೆ:**

09]ವಿಷಯ ಸಂಖ್ಯೆಃ/77/2012-13

ವಿಶೇಷ ಆಯುಕ್ತರು (ಯೋಜನೆ) ರವರು ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬಿ.ಬಿ.ಎಂ.ಪಿ ವ್ಯಾಪ್ತಿಯ ರಾಜರಾಜೇಶ್ವರಿ ನಗರ ವಲಯದ ರಾಜರಾಜೇಶ್ವರಿ ನಗರ ವಾರ್ಡಿನ ( ವಾರ್ಡ್ ನಂ: 160) ಜನಪ್ರಿಯ ಅಬೋರ್ಡ್ ಹತ್ತಿರ ದಿನಾಂಕಃ 15-08-2011ರಂದು ರಾತ್ರಿ ಬಿದ್ದ ಭಾರಿ ಮಳೆಗೆ ಮೇಲ್ಕಂಡ ಪ್ರದೇಶದಲ್ಲಿ ತಡೆಗೋಡೆ ಇಲ್ಲದ ಕಾರಣ ತಗ್ಗು ಪ್ರದೇಶಗಳಿಗೆ ನೀರು ನುಗ್ಗಿ ಸಾರ್ವಜನಿಕರಿಗೆ ತೊಂದರೆಯಾಗಿರುತ್ತದೆ. ದಿನಾಂಕಃ 06-08-2011ರಂದು ಪೂಜ್ಯ ಮಹಾಪೌರರು ಬಿ.ಬಿ.ಎಂ.ಪಿ ರವರು ಸ್ಥಳೀಯ ಬಿ.ಬಿ.ಎಂ.ಪಿ ಸದಸ್ಯರೊಂದಿಗೆ ಸ್ಥಳ ಪರಿಶೀಲನೆ ಮಾಡಿ ತಡೆಗೋಡೆ ನಿರ್ಮಿಸಲು ಆದೇಶಿಸಿರುತ್ತಾರೆ. ಅದರಂತೆ ಈ ಮಳೆನೀರು ಕಾಲುವೆಯನ್ನು ವೈಜ್ಞಾನಿಕವಾಗಿ ನಿರ್ಮಿಸಲು ಉದ್ದೇಶಿಸಿದ್ದು ಈ ರಾಜಕಾಲುವೆಯನ್ನು ರಾಜರಾಜೇಶ್ವರಿ ನಗರ ವಲಯದ ಮಳೆ ನೀರು ಕಾಲುವೆಗಳ ಡಿ.ಪಿ.ಆರ್.ನಂತೆ ವಿನ್ಯಾಸಕ್ಕನುಗುಣವಾಗಿ

ಅಭಿವೃದ್ಧಿಪಡಿಸಲು ಅಂದಾಜು ಪಟ್ಟಿಯನ್ನು 2010–11ನೇ ಸಾಲಿನ ಲೋಕೋಪಯೋಗಿ ಇಲಾಖೆಯ ದರಪಟ್ಟಿಯಂತೆ 280.00 ಲಕ್ಷ ರೂಗಳಿಗೆ ತಯಾರಿಸಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆಯಲಾಗಿದೆ.

ಈ ಕಾಮಗಾರಿಗೆ ದಿನಾಂಕಃ 29–03–2012ರಂದು ಮೊದಲನೆ ಭಾರಿ E-Procurement portal ನಲ್ಲಿ, Two cover system ನಲ್ಲಿ ಅಧಿಸೂಚನೆಯನ್ನು ಹೊರಡಿಸಲಾಯಿತು. ಟೆಂಡರ್‌ಸಲ್ಲಿಸಲು ಕಡೆಯ ದಿನಾಂಕಃ 19–04–2012 ಟೆಂಡರ್‌ನಲ್ಲಿ ಇಬ್ಬರು ಗುತ್ತಿಗೆದಾರರು ಭಾಗವಹಿಸಿರುತ್ತಾರೆ. ಸದರಿ ಗುತ್ತಿಗೆದಾರರು ಸಲ್ಲಿಸಿದ್ದ Technical bid ಅನ್ನು ದಿನಾಂಕಃ 25–04–2012ರಂದು ತೆರೆಯಲಾಗಿದೆ. ತಾಂತ್ರಿಕವಾಗಿ ಇಬ್ಬರೂ ಗುತ್ತಿಗೆದಾರರರು ಅರ್ಹತೆಯನ್ನು ಹೊಂದಿದ್ದು, ಇದಕ್ಕೆ ಮುಖ್ಯ ಇಂಜಿನಿಯರ್‌ರವರು ದಿನಾಂಕಃ 16–05–2012ರಲ್ಲಿ ಅನುಮೋದನೆ ನೀಡಿರುತ್ತಾರೆ. ನಂತರ ಸದರಿ ಗುತ್ತಿಗೆದಾರರು ಸಲ್ಲಿಸಿದ್ದ ಆರ್ಥಿಕ ಬಿಡ್ಡನ್ನು ದಿನಾಂಕಃ 23–05–2012ರಂದು ತೆರೆಯಲಾಗಿದ್ದು, ಶ್ರೀ. ನಂಜಯ್ಯ ಮಹದೇವಸ್ವಾಮಿ ರವರು ಕಡಿಮೆ ಮೊತ್ತವನ್ನು ನಮೂದಿಸಿದ್ದು, ಇವರು L1 ಆಗಿರುತ್ತಾರೆ. ಮುಖ್ಯ ಅಭಿಯಂತರರು ದಿನಾಂಕಃ 31–05–2012ರಂದು ನೀಡಿದ ಆದೇಶದಂತೆ ಗುತ್ತಿಗೆದಾರರೊಡನೆ ಸಂಧಾನ ನಡೆಸಿದ್ದು (ಶೇಕಡ 12.45) ದಿನಾಂಕಃ 04–07–2012ರಂದು ಆಯುಕ್ತರ ಅನುಮೋದನೆ ಪಡೆಯಲಾಗಿದೆ. ಉಳಿದ ವಿವರಗಳು ಕೆಳಕಂಡಂತಿವೆ.

| | | |
|---|---|---|
| 1. | ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ (2011-12ನೇ ಸಾಲಿನ ದರಪಟ್ಟಿಯಂತೆ) | ರೂ.2,45,53,889.48 |
| 2. | ಬಿಡ್ಡುದಾರರಾದ ಶ್ರೀ.ನಂಜಯ್ಯ ಮಹದೇವಸ್ವಾಮಿ ರವರು ನಮೂದಿಸಿರುವ ಟೆಂಡರ್ ಮೊತ್ತ | ರೂ.3,18,95,029.96 |
| 3. | 2011-12ನೇ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಾಗ ಟೆಂಡರಿಗೆ ಇಟ್ಟ ಮೊತ್ತದ ಮೇಲಿನ ಶೇಕಡಾವಾರು ಹೆಚ್ಚಳ / ಕಡಿಮೆ | ಶೇ.29.9% ಕಡಿಮೆ |
| 4. | 2011–12ನೇ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಾಗ ಟೆಂಡರಿಗೆ ಇಟ್ಟ ಮೊತ್ತದ ಮೇಲಿನ ಶೇಕಡಾವಾರು ಹೆಚ್ಚಳ/ ಕಡಿಮೆ (KPWD order NO: 8772, dt:29-02-2012, KPWD order NO: 225, dt:18-04-2012, | ಶೇ.15.34% ಕಡಿಮೆ |
| | ಬಿಡ್ಡುದಾರರಾದ ಶ್ರೀ. ನಂಜಯ್ಯ ಮಹದೇವಸ್ವಾಮಿ ರವರು ಸಂಧಾನದ ನಂತರ ನಮೂದಿಸಿದ ಟೆಂಡರ್ ಮೊತ್ತ First Quarter issue rate of steel ದರಗಳಿಗೆ ಹೋಲಿಸಿದಾಗ (KPWD Order No.8772, Dated: 29-02-2012) | ರೂ. 3,16,06,631-00 (ಶೇ 12.45 ಹೆಚ್ಚುವರಿ) |

ಶ್ರೀ.ನಂಜಯ್ಯ ಮಹದೇವಸ್ವಾಮಿ ರವರು ನಮೂದಿಸಿರುವ ಮೊತ್ತವು ಮಂಜೂರಾದ ಅಂದಾಜಿನಂತೆ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇ.29.9 ರಷ್ಟು (2010-11 ನೇ ಸಾಲಿನ ದರಪಟ್ಟಿ) ಹೆಚ್ಚುವರಿಯಾಗಿದ್ದು, ಈ ವರ್ಷದ ಮೊದಲನೇ ಭಾಗದ (First Quarter) ಉಕ್ಕಿನ ಮತ್ತು ಸಿಮೆಂಟ್ ದರಗಳಿಗೆ ಹೋಲಿಸಿದಾಗ ಶೇ.12.45% ಹೆಚ್ಚುವರಿಯಾಗಿದ್ದು, ಸ್ಪರ್ಧಾತ್ಮಕವಾಗಿರುವುದು ಕಂಡು ಬರುತ್ತದೆ. ಮೇಲಿನ ಹಿನ್ನೆಲೆಯಲ್ಲಿ ಶ್ರೀ.ನಂಜಯ್ಯ ಮಹದೇವಸ್ವಾಮಿ ರವರು ನಮೂದಿಸಿರುವ ಟೆಂಡರ್ ಮೊತ್ತ 3,16,06,631-00 ರೂಗಳಿಗೆ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ದಿನಾಂಕಃ20–06–2012ರಂದರ ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ.

**: ಮುಂದೂಡಿದೆ:**

10]ವಿಷಯ ಸಂಖ್ಯೆಃ/80/2012–13

ವಿಶೇಷ ಆಯುಕ್ತರು (ಯೋಜನೆ) ರವರು ಟಿಪ್ಪಣಿಯಲ್ಲಿ ವಿವರಿಸಿರುವಂತೆ, ವಾರ್ಡ್ ಸಂಖ್ಯೆಃ 8 ಸಹಕಾರನಗರದ ರೈಲ್ವೆ ಪ್ಯಾರಲಲ್ ರಸ್ತೆಯಲ್ಲಿರುವ 11 ಕೆ.ವಿ.ಯ ಎಫ್–8 ಮತ್ತು ಎಫ್–11 ಫೀಡರ್‌ನ ರ್‍ಯಾಬಿಟ್ ಎ.ಸಿ.ಎಸ್.ಆರ್. ತಂತಿಗಳನ್ನು ತೆರವುಗೊಳಿಸಿ 3X400 ಚ.ಮೀ.ಮೀ. ಭೂಗತ ಕೇಬಲ್‌ಗೆ



Sridhara Reddy

ಪರಿವರ್ತಿಸುವ ಹಾಗೂ ಸ್ಥಳಾಂತರಿಸುವ ಕಾಮಗಾರಿಗೆ 2010-11ನೇ ಸಾಲಿನ ಬೆಸ್ಕಾಂ ದರ ಪಟ್ಟಿಯನ್ನು ಅಳವಡಿಸಿ ರೂ. 65.36 ಲಕ್ಷಗಳಿಗೆ ಅಂದಾಜನ್ನು ತಯಾರಿಸಲಾಗಿದೆ. ಸದರಿ ಕಾಮಗಾರಿಯು ಹಾಲಿಯಿರುವ ಬೆಸ್ಕಾಂ ಸಂಸ್ಥೆಯ ವಿದ್ಯುತ್ ಕಂಬಗಳು ರಸ್ತೆಯಲ್ಲಿರುವುದರಿಂದ ರಸ್ತೆ ಅಗಲೀಕರಣ ನಿಮಿತ್ತ ಸ್ಥಳಾಂತರಿಸಬೇಕಾಗಿರುವುದು ಅತ್ಯವಶ್ಯವಾಗಿರುತ್ತದೆ. ಹಾಗೂ ಈ ಕಾಮಗಾರಿ ಕೈಗೊಳ್ಳಲು ಪಾಲಿಕೆಯ ಆಯವ್ಯಯದಲ್ಲಿನ Shifting of Electrical lines at International Airport approach road ಎಂಬ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಪುಟ ಸಂಖ್ಯೆ: 136 ಪಿ-2220 ಅಡಿಯಲ್ಲಿ ರೂ. 1000.00 ಲಕ್ಷಗಳನ್ನು ಮೀಸಲಿಡಲಾಗಿದೆ. ಸದರಿ ಅನುದಾನದಲ್ಲಿ ರೂ. 65.36 ಲಕ್ಷಗಳಿಗೆ ಜಾಬ್ ಕೋಡ್ ಅನ್ನು ಸಂಖ್ಯೆ: 303-11-000031ರಂತೆ ಈಗಾಗಲೇ ಪಡೆಯಲಾಗಿದೆ. ಸದರಿ ಕಾಮಗಾರಿ ಬೆಸ್ಕಾಂ ಸಂಸ್ಥೆಯ ಮೇಲ್ವಿಚಾರಣೆಯಲ್ಲಿ ನೆರವೇರಿಸಬೇಕಿರುವುದರಿಂದ ಅಂದಾಜಿನ ಶೇಕಡ 10 ರಷ್ಟಾದ ರೂ. 6,63,182.00 ಗಳನ್ನು ಸದರಿ ಜಾಬ್‌ಕೋಡ್ ನಡಿಯಲ್ಲಿ ಬೆಸ್ಕಾಂ ಸಂಸ್ಥೆಗೆ ಪಾವತಿಸಲಾಗಿದೆ.

ಸದರಿ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ಮತ್ತು ತಾಂತ್ರಿಕ ಮಂಜೂರಾತಿ ದೊರೆತಿದ್ದು, ಇ-ಪ್ರಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಸದರಿ ಟೆಂಡರ್‌ನಲ್ಲಿ ಇಬ್ಬರು ಗುತ್ತಿಗೆದಾರರು ಭಾಗವಹಿಸಿದ್ದು ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿರುವ ವಿವರದಂತೆ, ಗುತ್ತಿಗೆದಾರರು ನಮೂದಿಸಿರುವ ದರಗಳು ಕೆಳಕಂಡಂತಿರುತ್ತದೆ.

| ಕ್ರ.ಸಂ | ಗುತ್ತಿಗೆದಾರರ ಹೆಸರು | ಟೆಂಡರ್‌ಗಿಟ್ಟ ಮೊತ್ತ ರೂ.ಗಳಲ್ಲಿ | ಗುತ್ತಿಗೆದಾರರು ನಮೂದಿಸಿರುವ ಮೊತ್ತ ರೂ.ಗಳಲ್ಲಿ | ಶೇಕಡ ನಮೂದು ಬೆಸ್ಕಾಂ ಎಸ್.ಆರ್.ದರ ಗಳಿಗೆ |
|---|---|---|---|---|
| 1 | ಮೆ: ವೇದಾ ಎಲೆಕ್ಟ್ರಿಕಲ್ಸ್ | 57,35,773.50 | 60,21,538.50 | 4.98 ಹೆಚ್ಚು |
| 2 | ಮೆ: ಲಕ್ಷ್ಮೀ ನಾರಾಯಣ ಎಲೆಕ್ಟ್ರಿಕಲ್ಸ್ | 57,35,773.50 | 63,05,300.00 | 9.93 ಹೆಚ್ಚು |

ಸದರಿ ಕೆಲಸಕ್ಕೆ ನಮೂದಿಸಿರುವ ದರಗಳು ಸ್ಪರ್ಧಾತ್ಮಕ ದರಗಳಾಗಿರುತ್ತದೆ. ಈಗ ಈ ಕಾಮಗಾರಿಗೆ ಸಿಂಧುತ್ವ ಹೊಂದಿರುವ ಮತ್ತು ಕಡಿಮೆ ದರ ನಮೂದಿಸಿರುವ ಗುತ್ತಿಗೆದಾರರಾದ ಮೆ: ವೇದಾ ಎಲೆಕ್ಟ್ರಿಕಲ್ಸ್ ರವರ ದರವು ಬೆಸ್ಕಾಂ ಎಸ್.ಆರ್.ದರಕ್ಕೆ ಶೇಕಡ 4.98 ಹೆಚ್ಚಾಗಿರುತ್ತದೆ. ಇವರನ್ನು ದರಸಂಧಾನಕ್ಕೆ ಆಹ್ವಾನಿಸಿ ಪತ್ರ ಬರೆಯಲಾಗಿದ್ದು, ಈ ಪತ್ರಕ್ಕೆ ಗುತ್ತಿಗೆದಾರರು ಮಾರುಕಟ್ಟೆಯಲ್ಲಿ ಸಾಮಗ್ರಿ ವೆಚ್ಚ ಅಧಿಕವಾಗಿದ್ದು, ಷೆಡ್ಯೂಲ್-ಬಿ ಯಲ್ಲಿ ನಮೂದಿಸಿರುವ ದರಗಳಂತೆ ಕಾಮಗಾರಿ ಆದೇಶ ನೀಡಲು ಕೋರಲಾಗಿದ್ದು, ಇದರನ್ವಯ ಸದರಿ ಕಾಮಗಾರಿಯ ಟೆಂಡರ್ ಅನುಮೋದನೆ ಕೋರಿ ಸಮಿತಿಯ ಮುಂದೆ ಮಂಡಿಸಲಾದ ದಿನಾಂಕ: 03-08-2012ರ ವಿಶೇಷ ಆಯುಕ್ತರವರ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 03-08-2012ರ ಟಿಪ್ಪಣಿಯನ್ನು ಒಪ್ಪಲಾಯಿತು.**

## 11]ವಿಷಯ ಸಂಖ್ಯೆ:/82/2012-13

ವಿಶೇಷ ಆಯುಕ್ತರು (ಯೋಜನೆ) ರವರು ಟಿಪ್ಪಣಿಯಲ್ಲಿ ವಿವರಿಸಿರುವಂತೆ, ವಾರ್ಡ್ ಸಂಖ್ಯೆ: 161ರಲ್ಲಿ ಹೊಸಕೆರೆಹಳ್ಳಿ ರೆಫರಲ್ ಆಸ್ಪತ್ರೆ ನಿರ್ಮಾಣಕ್ಕಾಗಿ 2012-13ನೇ ಸಾಲಿನ ಆಯವ್ಯಯದ ಪುಟ ಸಂಖ್ಯೆ: 77ರ ಲೆಕ್ಕ ಶೀರ್ಷಿಕೆ ಪಿ-2185ರಲ್ಲಿ ರೂ. 200.00 ಲಕ್ಷಗಳ ಅನುದಾನ ಲಭ್ಯವಿರುತ್ತದೆ. ಪದ್ಮನಾಭನಗರದ ವಿಧಾನ ಸಭಾ ಕ್ಷೇತ್ರದ ಶಾಸಕರು, ಉಪ ಮುಖ್ಯ ಮಂತ್ರಿಗಳು ಹಾಗೂ ಗೃಹ ಮತ್ತು ಸಾರಿಗೆ ಸಚಿವರಾದ ಶ್ರೀ.ಆರ್.ಅಶೋಕ್ ರವರು ಹೊಸಕೆರೆಹಳ್ಳಿ ಸುತ್ತಮುತ್ತಲಿನ ನಿವಾಸಿಗಳಿಗೆ ಹತ್ತಿರದಲ್ಲಿ ಯಾವುದೇ ಸರ್ಕಾರಿ ಆಸ್ಪತ್ರೆ ಲಭ್ಯವಿಲ್ಲದೆ ಇರುವುದರಿಂದ ಸ್ಥಳೀಯ ನಿವಾಸಿಗಳ ಅನುಕೂಲಕ್ಕಾಗಿ ಸುಸಜ್ಜಿತ ಆಸ್ಪತ್ರೆಯನ್ನು ಲಭ್ಯವಿರುವ ರೂ. 200.00 ಲಕ್ಷಗಳ ಅನುದಾನದಲ್ಲಿ ಕಾಮಗಾರಿಯನ್ನು ಕೈಗೊಳ್ಳಲು ಆದೇಶಿಸಿರುತ್ತಾರೆ. ಸ್ಥಳೀಯ ಪಾಲಿಕೆಯ ಸದಸ್ಯರು ಸಹ ಹೊಸಕೆರೆಹಳ್ಳಿ ರೆಫೆರಲ್ ಆಸ್ಪತ್ರೆ ಕಾಮಗಾರಿಯನ್ನು ಈ ಕೂಡಲೇ ಕೈಗೊಳ್ಳಲು ಕೋರಿ ಪತ್ರ ನೀಡಿರುತ್ತಾರೆ.

| ಕ್ರಮ ಸಂಖ್ಯೆ | ಕಾಮಗಾರಿಯ ಹೆಸರು | ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ |
|---|---|---|
| 1 | Construction of Referral Hospital at Hosakerehalli in ward No: 161. | 200.00 |

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ 2012–13ನೇ ಸಾಲಿನ ಆಯವ್ಯಯದ ಪುಟ ಸಂಖ್ಯೆ: 77ರಲ್ಲಿ ಪಿ–2185ರಲ್ಲಿ ಲಭ್ಯವಿರುವ ರೂ. 200.00 ಲಕ್ಷಗಳ ಅನುದಾನದಲ್ಲಿ ಮೇಲ್ಕಂಡ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ಮತ್ತು ಜಾಬ್ ಕೋಡ್ ನೀಡಲು ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ 'ವಿಶೇಷ ಆಯುಕ್ತರು (ಯೋಜನೆ)ರವರ ದಿನಾಂಕ: 13–08–2012ರ ಟಿಪ್ಪಣಿ.

**ನಿರ್ಣಯ: ಪಾಲಿಕೆಯ 2012–13ನೇ ಸಾಲಿನ ಆಯವ್ಯಕ್ಕೆ ಸರ್ಕಾರದ ಅನುಮೋದನೆಯನ್ನು ನಿರೀಕ್ಷಿಸಿ ಮತ್ತು ಪ್ರಸ್ತಾವನೆಯಲ್ಲಿ ಸೂಚಿಸಿರುವ 2012–13ನೇ ಸಾಲಿನ ಆಯವ್ಯಯದ ಪುಟ ಸಂಖ್ಯೆ: 77ರ ಲೆಕ್ಕ ಶೀರ್ಷಿಕೆ ಪಿ–2185ರಲ್ಲಿ ಪ್ರಸ್ತುತ ಸಾಲಿನಲ್ಲಿ ಅಗತ್ಯ ಅನುದಾನ ಲಭ್ಯವಿಲ್ಲದೇ ಇರುವುದರಿಂದ ಲಭ್ಯ ವಿರುವ ಅನುದಾನದಲ್ಲಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳುವಂತೆ ಸಮಿತಿಯು ತೀರ್ಮಾನಿಸಲಾಯಿತು.**

## 12]ವಿಷಯ ಸಂಖ್ಯೆ:/83/2012–13

ವಿಶೇಷ ಆಯುಕ್ತರು (ಯೋಜನೆ) ರವರು ಟಿಪ್ಪಣಿಯಲ್ಲಿ ವಿವರಿಸಿರುವಂತೆ, ವಾರ್ಡ್ ಸಂಖ್ಯೆ: 182ರಲ್ಲಿ **" ಬೆಂಗಳೂರು ಒನ್ "** ಕೇಂದ್ರ ನಿರ್ಮಾಣ, ಮಳೆ ನೀರಿನ ಚರಂಡಿ ಮೇಲೆ ಕಾಂಕ್ರೀಟ್ ಸ್ಲ್ಯಾಬ್ ಹಾಗೂ ಉದ್ಯಾನವನದ ಸುತ್ತ ರಸ್ತೆ ಬದಿ ಚರಂಡಿ ಅಭಿವೃದ್ಧಿಗಾಗಿ 2012–13ನೇ ಸಾಲಿನ ಆಯವ್ಯಯದ ಪುಟ ಸಂಖ್ಯೆ: 145ರ ಲೆಕ್ಕ ಶೀರ್ಷಿಕೆ ಪಿ–2221ರಲ್ಲಿ ರೂ. 350.00 ಲಕ್ಷಗಳ ಅನುದಾನ ಲಭ್ಯವಿರುತ್ತದೆ. ಪದ್ಮನಾಭನಗರದ ವಿಧಾನ ಸಭಾ ಕ್ಷೇತ್ರದ ಶಾಸಕರು, ಉಪ ಮುಖ್ಯ ಮಂತ್ರಿಗಳು ಹಾಗೂ ಗೃಹ ಮತ್ತು ಸಾರಿಗೆ ಸಚಿವರಾದ ಶ್ರೀ.ಆರ್.ಅಶೋಕ್ ರವರು ಕೆ.ಎಸ್.ಆರ್.ಟಿ.ಸಿ. ಬಡಾವಣೆ ಹಾಗೂ ಸುತ್ತಮುತ್ತಲಿನ ಸಾರ್ವಜನಿಕರ ಹಿತದೃಷ್ಟಿಯಿಂದ ಸ್ಥಳೀಯ ನಿವಾಸಿಗಳ ಅನುಕೂಲಕ್ಕಾಗಿ ಲಭ್ಯವಿರುವ ರೂ. 350.00 ಲಕ್ಷಗಳ ಅನುದಾನದಲ್ಲಿ ಕೆಳಕಂಡ ಕಾಮಗಾರಿಯನ್ನು ಕೈಗೊಳ್ಳಲು ಆದೇಶಿಸಿರುತ್ತಾರೆ. ಸದರಿ ಕಾಮಗಾರಿಗೆ ಈಗಾಗಲೇ 182–11–000041ರಂತೆ ಜಾಬ್ ಕೋಡ್ ಪಡೆಯಲಾಗಿರುತ್ತದೆ.

| ಕ್ರಮ ಸಂಖ್ಯೆ | ಕಾಮಗಾರಿಯ ಹೆಸರು | ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ |
|---|---|---|
| 1 | Proposed construction of Bangalore one centre building covering slab for drain and improvements to drain around the park at KSRTC Layout, Padmanabhanagar Constituency | 85.00 |

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ 2012–13ನೇ ಸಾಲಿನ ಆಯವ್ಯಯದ ಪುಟ ಸಂಖ್ಯೆ: 145ರಲ್ಲಿ ಪಿ–2221ರಲ್ಲಿ ಲಭ್ಯವಿರುವ ರೂ. 350.00 ಲಕ್ಷಗಳ ಅನುದಾನದಲ್ಲಿ ಮೇಲ್ಕಂಡ ಕಾಮಗಾರಿಗೆ ರೂ. 85.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲು ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ದಿನಾಂಕ: 13–08–2012ರ ಟಿಪ್ಪಣಿ.

**ನಿರ್ಣಯ: ಪಾಲಿಕೆಯ 2012–13ನೇ ಸಾಲಿನ ಆಯವ್ಯಕ್ಕೆ ಸರ್ಕಾರದ ಅನುಮೋದನೆಯನ್ನು ನಿರೀಕ್ಷಿಸಿ ವಿಶೇಷ ಆಯುಕ್ತರು(ಯೋಜನೆ) ರವರ ದಿನಾಂಕ: 13–08–2012ರ ಟಿಪ್ಪಣಿಯನ್ನು ಒಪ್ಪಲಾಯಿತು.**

## 13]ವಿಷಯ ಸಂಖ್ಯೆ:/84/2012–13

ವಿಶೇಷ ಆಯುಕ್ತರು (ಯೋಜನೆ) ರವರು ಟಿಪ್ಪಣಿಯಲ್ಲಿ ವಿವರಿಸಿರುವಂತೆ, ವಾರ್ಡ್ ಸಂಖ್ಯೆ: 182ರಲ್ಲಿ **ಗ್ರಂಥಾಲಯ ಮತ್ತು ಷಟಲ್ ಕೋರ್ಟ್** ನಿರ್ಮಾಣಕ್ಕಾಗಿ 2012–13ನೇ ಸಾಲಿನ ಆಯವ್ಯಯದ ಪುಟ ಸಂಖ್ಯೆ: 145 ಲೆಕ್ಕ ಶೀರ್ಷಿಕೆ ಪಿ–2221ರಲ್ಲಿ ರೂ. 350.00 ಲಕ್ಷಗಳ ಅನುದಾನ ಲಭ್ಯವಿರುತ್ತದೆ. ಪದ್ಮನಾಭನಗರದ ವಿಧಾನ ಸಭಾ ಕ್ಷೇತ್ರದ ಶಾಸಕರು, ಉಪ ಮುಖ್ಯ ಮಂತ್ರಿಗಳು ಹಾಗೂ ಗೃಹ ಮತ್ತು ಸಾರಿಗೆ ಸಚಿವರಾದ ಶ್ರೀ.ಆರ್.ಅಶೋಕ್ ರವರು ಕೆ.ಎಸ್.ಆರ್.ಟಿ.ಸಿ. ಬಡಾವಣೆ ಹಾಗೂ ಸುತ್ತಮುತ್ತಲಿನ ನಿವಾಸಿಗಳಿಗೆ ಹತ್ತಿರದಲ್ಲಿ ಗ್ರಂಥಾಲಯ ಷಟಲ್ ಕೋರ್ಟ್ ಇಲ್ಲದಿರುವುದರಿಂದ ಸ್ಥಳೀಯ ನಿವಾಸಿಗಳ

ಅನುಕೂಲಕ್ಕಾಗಿ ಲಭ್ಯವಿರುವ ರೂ. 350.00 ಲಕ್ಷಗಳ ಅನುದಾನದಲ್ಲಿ ಕೆಳಕಂಡ ಕಾಮಗಾರಿಯನ್ನು ಕೈಗೊಳ್ಳಲು ಆದೇಶಿಸಿರುತ್ತಾರೆ. ಸದರಿ ಕಾಮಗಾರಿಗೆ ಈಗಾಗಲೇ 182-11-000001ರಂತೆ ಜಾಬ್ ಕೋಡ್ ಪಡೆಯಲಾಗಿರುತ್ತದೆ.

| ಕ್ರಮ ಸಂಖ್ಯೆ | ಕಾಮಗಾರಿಯ ಹೆಸರು | ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ |
|---|---|---|
| 1 | Construction of Library and shuttle court building at KSRTC Layut in Padmanabhanagar constituency, Bangalore. | 85.00 |

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ 2012-13ನೇ ಸಾಲಿನ ಆಯವ್ಯಯದ ಪುಟ ಸಂಖ್ಯೆಃ 145ರಲ್ಲಿ ಪಿ-2221ರಲ್ಲಿ ಲಭ್ಯವಿರುವ ರೂ. 350.00 ಲಕ್ಷಗಳ ಅನುದಾನದಲ್ಲಿ ಮೇಲ್ಕಂಡ ಕಾಮಗಾರಿಗೆ ರೂ. 85.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲು ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ದಿನಾಂಕಃ 13-08-2012ರ ಟಿಪ್ಪಣಿ.

**ನಿರ್ಣಯಃ ಪಾಲಿಕೆಯ 2012-13ನೇ ಸಾಲಿನ ಆಯವ್ಯಕ್ಕೆ ಸರ್ಕಾರದ ಅನುಮೋದನೆಯನ್ನು ನಿರೀಕ್ಷಿಸಿ ವಿಶೇಷ ಆಯುಕ್ತರು(ಯೋಜನೆ) ರವರ ದಿನಾಂಕಃ 13-08-2012ರ ಟಿಪ್ಪಣಿಯನ್ನು ಒಪ್ಪಲಾಯಿತು.**

14]ವಿಷಯ ಸಂಖ್ಯೆಃ/85/2012-13

ವಿಶೇಷ ಆಯುಕ್ತರು (ಯೋಜನೆ) ರವರು ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಯಲಹಂಕ ವಲಯದ ಕಾರ್ಯಪಾಲಕ ಅಭಿಯಂತರರು ಯೋಜನೆ ವಿಭಾಗದವತಿಯಿಂದ Widening of road from Rajanakunte to BIA via Vishveshwaraiah College of Engineering (Shifted to widening of road from Bellary road via Gantiganahalli to Doddaballapura road) ಕಾಮಗಾರಿ ಕೈಗೆತ್ತಿಕೊಳ್ಳುವ ಸಂಬಂಧ ಇ-ಪ್ರಕ್ಯೂರ್‌ಮೆಂಟ್ ಮುಖಾಂತರ ಟೆಂಡರ್‌ನ್ನು ದಿನಾಂಕಃ 02-06-2012ರಂದು ಕರೆದಿದ್ದು, ಸದರಿ ಕಾಮಗಾರಿಯಲ್ಲಿ ಮೂರು ಗುತ್ತಿಗೆದಾರರಾದ (1)ಶ್ರೀ.ಶ್ರೀನಿವಾಸಮೂರ್ತಿ(ಮೆ:ಪರಿಚಿತ ಕನ್ಸ್ಟ್ರಕ್ಷನ್) (2) ಶ್ರೀ. ಸಿ.ಜಿ.ಚಂದ್ರಪ್ಪ (3) ಶ್ರೀ.ಎಂ.ಎಸ್.ವೆಂಕಟೇಶ್ ರವರುಗಳು ಟೆಂಡರ್‌ನಲ್ಲಿ ಭಾಗವಹಿಸಿರುತ್ತಾರೆ.

| ಕ್ರ.ಸಂ. | ಗುತ್ತಿಗೆದಾರರು | ಟೆಂಡರ್‌ಮೊತ್ತ | ಗುತ್ತಿಗೆದಾರರು ನಮೂದಿಸಿರುವ ಮೊತ್ತ | ಶೇಕಡ ನಮೂದು (2011-12ನೇ ಸಾಲಿನ ದರಪಟ್ಟಿ) |
|---|---|---|---|---|
| 1 | ಶ್ರೀ.ಸಿ.ಜಿ.ಚಂದ್ರಪ್ಪ | 2,40,81,720.14 | 2,37,77,129.00 | <1.26 |
| 2 | ಶ್ರೀ.ಶ್ರೀನಿವಾಸಮೂರ್ತಿ (ಮೆ:ಪರಿಚಿತ ಕನ್ಸ್ಟ್ರಕ್ಷನ್) | | 2,40,82,046.54 | SR rate |
| 3 | ಶ್ರೀ.ಎಂ.ಎಸ್.ವೆಂಕಟೇಶ್ | | 2,58,18,761.10 | >7.21 |

ಸದರಿ ಕರೆಯಲಾದ ಟೆಂಡರ್‌ನಲ್ಲಿ ಶ್ರೀ.ಸಿ.ಜಿ.ಚಂದ್ರಪ್ಪ ಗುತ್ತಿಗೆದಾರರು ರೂ. 2,37,77,129.00ಗಳನ್ನು (ರೂಪಾಯಿ ಎರಡು ಕೋಟಿ ಮೂವತ್ತೇಳು ಲಕ್ಷದ ಎಪ್ಪತ್ತೇಳು ಸಾವಿರದ ಒಂದುನೂರ ಇಪ್ಪತ್ತೊಂಬತ್ತು ರೂ. ಮಾತ್ರ) ಗಳನ್ನು ಸದರಿ ಕಾಮಗಾರಿಗಾಗಿ ನಮದಿಸಿರುತ್ತಾರೆ. ಇವರು ನಮೂದಿಸಿದ ದರವು ಅನುಮೋದಿತವಾದ ಅಂದಾಜು ಪಟ್ಟಿಯ ಟೆಂಡರ್ ಮೊತ್ತಕ್ಕಿಂತ ಕಡಿಮೆ ನಮೂದಿಸಿರುತ್ತಾರೆ. 2011-12ನೇ ಸಾಲಿನ ದರಗಳಿಗಿಂತ ಶೇಕಡಾ 1.26ರಷ್ಟು ಕಡಿಮೆ ದರಗಳನ್ನು ನಮೂದಿಸಿರುತ್ತಾರೆ.

ಆದುದರಿಂದ ಸದರಿ ಎಲ್ಲಾ ಅಂಶಗಳನ್ನು ಸಮಿತಿಯ ಅವಗಾಹನೆಗೆ ತರುತ್ತಾ ಯಲಹಂಕ ವಲಯದ ಕಾರ್ಯಪಾಲಕ ಅಭಿಯಂತರರು ಯೋಜನೆ ವಿಭಾಗದವತಿಯಿಂದ Widening of road from Rajanakunte to BIA via Vishveshwaraiah College of Engineering (Shifted to widening of road from Bellary road via Gantiganahalli to Doddaballapura road) ಕಾಮಗಾರಿಯನ್ನು ತಕ್ಷಣವೇ ಕೈಗೆತ್ತಿಕೊಳ್ಳಲು

ಟೆಂಡರ್‌ನಲ್ಲಿ ಯಶಸ್ವಿಯಾದ ಶ್ರೀ. ಸಿ.ಜಿ.ಚಂದ್ರಪ್ಪ ಗುತ್ತಿಗೆದಾರರು ಅವರಿಗೆ ಕಾರ್ಯಾದೇಶ ನೀಡುವ ಸಂಬಂಧ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ದಿನಾಂಕಃ 14-08-2012ರ ವಿಶೇಷ ಆಯುಕ್ತರವರ ಟಿಪ್ಪಣಿ.

**: ಮುಂದೂಡಿದೆ :**

15]ವಿಷಯ ಸಂಖ್ಯೆಃ/86/2012-13

ವಿಶೇಷ ಆಯುಕ್ತರು (ಯೋಜನೆ) ರವರು ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬಿಬಿಎಂಪಿ ವ್ಯಾಪ್ತಿಯ ರಾಜರಾಜೇಶ್ವರಿನಗರ ವಲಯದ (ವಾರ್ಡ್ ನಂ.160) ರಾಜರಾಜೇಶ್ವರಿ ನಗರದ BMTC depot, BEML 5th stage, ಪ್ರದೇಶದಲ್ಲಿ ಹರಿಯುವ ಬೃಹತ್ ಮಳೆ ನೀರುಗಾಲುವೆಯು ಉತ್ತರಹಳ್ಳಿ ದೊರೆಕೆರೆ ಕೋಡಿಯಿಂದ ಹರಿದು ಬರುವ ಮುಖ್ಯ ಮಳೆ ನೀರುಗಾಲುವೆಗೆ ಕಾನ್‌ಕಾರ್ಡ್ ಲೇಔಟ್ ಹತ್ತಿರ ಸೇರುತ್ತದೆ. ಮುಂದುವರೆದು, BMTC depot ಯಿಂದ N.K.Bhatt farm ವರೆಗೂ ತುಂಬಾ ಹಳೆಯದಾದ ಕಲ್ಲಿನ ತಡೆಗೋಡೆಯ ಎತ್ತರ ಮತ್ತು ಅಗಲವು ತುಂಬಾ ಕಡಿಮೆ ಇದ್ದು, ಹಾಗೂ ಕಾಲುವೆಯು ಹೂಳಿನಿಂದ ತುಂಬಿರುತ್ತದೆ. ಮಳೆಗಾಲದ ಸಮಯದಲ್ಲಿ ನೀರು ಸರಾಗವಾಗಿ ಹರಿಯದೆ ಅಕ್ಕಪಕ್ಕದ ತಗ್ಗು ಪ್ರದೇಶಗಳಿಗೆ ಹರಿದು ತೊಂದರೆಯಾಗುತ್ತಿದೆ. ದಿನಾಂಕ: 15-08-2011 ರಂದು ಬಿದ್ದ ಭಾರಿ ಮಳೆಯಿಂದ ನೀರು ಹಿಂಭಾಗದಲ್ಲಿರುವ ಬಡಾವಣೆಯ ಮನೆಗಳಿಗೆ ನುಗ್ಗಿ ಮತ್ತು ರಸ್ತೆಯಲ್ಲಿ ಹರಿದು ಸಾರ್ವಜನಿಕರ ಸಂಚಾರಕ್ಕೆ ತೊಂದರೆ ಉಂಟಾಗಿರುತ್ತದೆ. ಇದನ್ನು ತಪ್ಪಿಸಲು ಈ ರಾಜಕಾಲುವೆಯನ್ನು ವಿನ್ಯಾಸಕ್ಕನುಗುಣವಾಗಿ ಹಾಗೂ ವೈಜ್ಞಾನಿಕವಾಗಿ ಅಭಿವೃದ್ಧಿ ಪಡಿಸಲು Remodelling of SWD from 60 feet road BMTC depot of BEML 5th stage, to N.K.Bhatt farm in ward no.160 in RR Nagara Zone ಅಂದಾಜು ಪಟ್ಟಿಯನ್ನು 2011-12ನೇ ಸಾಲಿನ ಲೋಕೋಪಯೋಗಿ ಇಲಾಖೆಯ ದರಪಟ್ಟಿಯಂತೆ 186.50.00 ಲಕ್ಷ ರೂಗಳಿಗೆ ತಯಾರಿಸಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆಯಲಾಗಿದೆ.

ಈ ಕಾಮಗಾರಿಗೆ ದಿನಾಂಕ: 11-04-2012 ರಂದು ಮೊದಲನೇ ಭಾರಿ E-Procurement Portal ನಲ್ಲಿ, Two Cover System ನಲ್ಲಿ ಅಧಿಸೂಚನೆಯನ್ನು ಹೊರಡಿಸಲಾಯಿತು. ಆದರೆ ಕೇವಲ ಒಬ್ಬರು ಗುತ್ತಿಗೆದಾರರು ಭಾಗವಹಿಸಿದ್ದರಿಂದ ಟೆಂಡರ್‌ನ್ನು ಎರಡನೇ ಭಾರಿಗೆ ದಿನಾಂಕ: 05-06-2012 ರಂದು Two Cover System ನಲ್ಲಿ ಅಧಿಸೂಚನೆಯನ್ನು ಹೊರಡಿಸಲಾಯಿತು. ಟೆಂಡರ್ ಸಲ್ಲಿಸಲು ಕಡೆಯ ದಿನಾಂಕ: 22-06-2012. ಟೆಂಡರ್‌ನಲ್ಲಿ ಆರು ಜನ ಗುತ್ತಿಗೆದಾರರು ಭಾಗವಹಿಸಿರುತ್ತಾರೆ. ಸದರಿ ಗುತ್ತಿಗೆದಾರರು ಸಲ್ಲಿಸಿದ್ದ Technical Bid ಅನ್ನು ದಿನಾಂಕ: 26-06-2012 ರಂದು ತೆರೆಯಲಾಗಿದೆ. ತಾಂತ್ರಿಕವಾಗಿ ಐದು ಜನ ಗುತ್ತಿಗೆದಾರರು ಅರ್ಹತೆಯನ್ನು ಹೊಂದಿದ್ದು, ಇದಕ್ಕೆ ಮುಖ್ಯ ಇಂಜಿನಿಯರ್‌ರವರು ಅನುಮೋದನೆ ನೀಡಿದ ನಂತರ ಸದರಿ ಗುತ್ತಿಗೆದಾರರು ಸಲ್ಲಿಸಿದ್ದ ಆರ್ಥಿಕ ಬಿಡ್ಡನ್ನು ದಿನಾಂಕ: 12-07-2012 ರಂದು ತೆರೆಯಲಾಗಿದ್ದು, ಶ್ರೀ.ವಿ.ರಾಜೇಂದ್ರ ನಾಯ್ಡು ರವರು ಕಡಿಮೆ ಮೊತ್ತವನ್ನು ನಮೂದಿಸಿದ್ದು, ಇವರು L1 ಆಗಿರುತ್ತಾರೆ. ಉಳಿದ ವಿವರಗಳು ಕೆಳಕಂಡಂತಿವೆ.

| | | |
|---|---|---|
| 1. | ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ (2011-12ನೇ ಸಾಲಿನ ದರಪಟ್ಟಿಯಂತೆ) | ರೂ.1,79,29,051.43 |
| 2. | ಬಿಡ್ಡುದಾರರಾದ ಶ್ರೀ.ವಿ.ರಾಜೇಂದ್ರ ನಾಯ್ಡು ರವರು ನಮೂದಿಸಿರುವ ಟೆಂಡರ್ ಮೊತ್ತ | ರೂ. 1,93,97,704.00 |
| 3. | 2011-12ನೇ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಾಗ ಟೆಂಡರಿಗೆ ಇಟ್ಟ ಮೊತ್ತದ ಮೇಲಿನ ಶೇಕಡಾವಾರು ಹೆಚ್ಚಳ / ಕಡಿಮೆ | ಶೇ.8.19% ಹೆಚ್ಚುವರಿ |
| 4. | First Quarter issue rate of steel ದರಗಳಿಗೆ ಹೋಲಿಸಿದಾಗ (KPWD Order No.8772, Dated: 29-02-2012) | ಶೇ.1.79% ಕಡಿಮೆ |

Sathara Reddy

ಶ್ರೀ.ವಿ.ರಾಜೇಂದ್ರ ನಾಯ್ಡು ರವರು ನಮೂದಿಸಿರುವ ಮೊತ್ತವು ಮಂಜೂರಾದ ಅಂದಾಜಿನಂತೆ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇ. 8.19% ರಷ್ಟು ಹೆಚ್ಚುವರಿಯಾಗಿದ್ದು, ಈ ವರ್ಷದ ಮೊದಲನೇ ಭಾಗದ (First Quarter) ಉಕ್ಕಿನ ದರಗಳಿಗೆ ಹೋಲಿಸಿದಾಗ ಶೇ.1.79% ಕಡಿಮೆಯಾಗಿದ್ದು, ಸ್ಪರ್ಧಾತ್ಮಕವಾಗಿರುವುದು ಕಂಡು ಬರುತ್ತದೆ. ಮೇಲಿನ ಹಿನ್ನೆಲೆಯಲ್ಲಿ ಶ್ರೀ.ವಿ.ರಾಜೇಂದ್ರ ನಾಯ್ಡು ರವರು ನಮೂದಿಸಿರುವ ಟೆಂಡರ್ ಮೊತ್ತ 1,93,97,704.00 ರೂಗಳಿಗೆ ಅನುಮೋದನೆ ಕೋರಿ ಬೃಹತ್ ಕಾಮಗಾರಿ ಸ್ಥಾಯಿ ಸಮಿತಿಗೆ ಮಂಡಿಸಿರುವ ದಿನಾಂಕಃ 21-08-2012ರ ವಿಶೇಷ ಆಯುಕ್ತರ ಟಿಪ್ಪಣಿ

## 16]ವಿಷಯ ಸಂಖ್ಯೆಃ/87/2012-13

ವಿಶೇಷ ಆಯುಕ್ತರು (ಯೋಜನೆ) ರವರು ಟಿಪ್ಪಣಿಯಲ್ಲಿ ವಿವರಿಸಿರುವಂತೆ, Reconstruction of RCC box culvert across SWD (DH 211 @ ch: 1350m on main road of peenyv industrial association nea HDFC bank Chokkasandra of Dasarahalli Zone. ಕಾಮಗಾರಿಗೆ ರೂ. 129.00 ಲಕ್ಷಗಳಿಗೆ ದಿನಾಂಕಃ 29-05-2012ರಂದು ಸದರಿ ಕಾಮಗಾರಿಗೆ ಟೆಂಡರ್ ಕರೆಯಲಾಗಿರುತ್ತದೆ.

ಈ ಟೆಂಡರಅನ್ನು ದಿನಾಂಕಃ 03-07-2012ರಂದು ತೆರೆಯಲಾಗಿ ನಾಲ್ಕು ಗುತ್ತಿಗೆದಾರರು ಮಾತ್ರ ಭಾಗವಹಿಸಿರುತ್ತಾರೆ. ಮುಖ್ಯ ಅಭಿಯಂತರರು (ಮಳೆ ನೀರು ಚರಂಡಿ) ರವರಿಂದ ತಾಂತ್ರಿಕ ಬಿಡ್‌ಗೆ ಅನುಮೋದನೆ ಪಡೆದ ನಂತರ ಗುತ್ತಿಗೆದಾರರ ಆರ್ಥಿಕ ಬಿಡ್ಡನ್ನು ದಿನಾಂಕಃ 16-07-2012ರಂದು ತೆರೆಯಲಾಗಿರುತ್ತದೆ. ಸದರಿ ಗುತ್ತಿಗೆದಾರರ ಆರ್ಥಿಕ ಬಿಡ್ ವಿವರಗಳು ಕೆಳಕಂಡಂತಿರುತ್ತದೆ

| ಕ್ರ. ಸಂ. | ಗುತ್ತಿಗೆದಾರರ ಹೆಸರು | ಕಾಮಗಾರಿಯ ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ | ಟೆಂಡರ್‌ಗಿಟ್ಟ ಮೊತ್ತ (ಮಂಜೂರಾದ ಅಂದಾಜು ಪಟ್ಟಿಯ ದರದಂತೆ 2010-11ನೇ ಸಾಲಿನ ದರಪಟ್ಟಿಗೆ) ರೂ. ಲಕ್ಷಗಳಲ್ಲಿ | ಗುತ್ತಿಗೆದಾರರು ನಮೂದಿಸಿರುವ ಮೊತ್ತ ರೂ. | 2011-12ನೇ ಸಾಲಿನ ದರಪಟ್ಟಿಯ ದರಗಳಂತೆ) Issue rate ನೊ ಂದಿಗೆ |
|---|---|---|---|---|---|
| 1 | ಶ್ರೀ.ಬಿ.ರಾಮಚಂದ್ರ | 129.00 | 125.34 | 13724906.92 | 11.49% ಕಡಿಮೆ |
| 2 | ಶ್ರೀ.ರಾಜಣ್ಣ | | | 15584704.00 | 0.5% ಹೆಚ್ಚು |
| 3 | ಶ್ರೀ.ಶೇಷಾದ್ರಿ | | | 15430479.00 | 0.49% ಹೆಚ್ಚು |
| 4 | ಶ್ರೀ.ಕೆ.ಸಿ.ಪ್ರಶಾಂತ್ | | | 15758725.00 | 1.62% ಹೆಚ್ಚು |

ಮೇಲ್ಕಂಡ ವಿವರಗಳನ್ನು ಪರಿಶೀಲಿಸಲಾಗಿ ಈಕಾಮಗಾರಿಗೆ ಶ್ರೀ. ಬಿ.ರಾಮಚಂದ್ರ ರವರು ಟೆಂಡರ್ ಮೊತ್ತ ರೂ. 13724906.92ಗಳನ್ನು ನಮೂದಿಸಿದ್ದು, ಎಸ್.ಆರ್. ದರ 2011-12ರ ಮತ್ತು Issue rate ನೊ ಂದಿಗೆ ಹೋಲಿಸಿದಾಗ ಶೇಕಡ 11.49 ರಷ್ಟು ಕಡಿಮೆ ಇರುತ್ತದೆ.

ಪ್ರಸ್ತಾಪಿಸಿರುವ ಕಾಮಗಾರಿ ಶ್ರೀ. ಬಿ.ರಾಮಚಂದ್ರ ರವರು ನಮೂದಿಸಿರುವ ಟೆಂಡರ್ ಮೊತ್ತ ರೂ.137249.06.92 (ಎಸ್.ಆರ್.ದರ 2011-12ರ ಮತ್ತು Issue rate ನೊಂದಿಗೆ ಹೋಲಿಸಿದಾಗ ಶೇಕಡ 11.49 ರಷ್ಟು ಕಡಿಮೆ) ಗಳಿಗೆ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ದಿನಾಂಕಃ 22-08-2012ರ ಟಿಪ್ಪಣಿ.

**: ಮುಂದೂಡಿದೆ :**

## 17]ವಿಷಯ ಸಂಖ್ಯೆಃ/88/2012-13

ವಿಶೇಷ ಆಯುಕ್ತರು (ಯೋಜನೆ) ರವರು ಟಿಪ್ಪಣಿಯಲ್ಲಿ ವಿವರಿಸಿರುವಂತೆ, ದಿನಾಂಕ:12.04.2012 ರ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಸಭೆಯ ವಿಷಯ ಸಂಖ್ಯೆ: 195/2011-12ರಲ್ಲಿ ಪ್ರಸ್ತಾಪಿತ (Dismantling of existing compound wall and construction of new size stone masonry compound and construction of over head tank with water supply facility in the premises of muslim burial ground in mysore road.) ಕಾಮಗಾರಿಯ ಬಗ್ಗೆ ಚರ್ಚಿಸಿದ್ದು, ಮಾನ್ಯ ಅಧ್ಯಕ್ಷರು ಸದರಿ ಕಾಮಗಾರಿಯ ಬಗ್ಗೆ ಆಕ್ಷೇಪಣೆಗಳನ್ನು ವ್ಯಕ್ತಪಡಿಸಿ ಸ್ಪಷ್ಟೀಕರಣವನ್ನು ನೀಡಲು ಸೂಚಿಸಿ ವಿಷಯವನ್ನು

ಮುಂದೂಡಿರುತ್ತಾರೆ. ಅದರಂತೆ ಆಕ್ಷೇಪಣೆಗಳಿಗೆ ಪೂರಕ ಸ್ಪಷ್ಟೀಕರಣ ವರದಿಯು ಈ ಕೆಳಕಂಡಂತೆ ಇರುತ್ತದೆ.

| ಕ್ರಮ ಸಂಖ್ಯೆ | ಅಕ್ಷೇಪಣೆ | ಪಾಲನ ವರದಿ |
|---|---|---|
| 1. | ಮುಖ್ಯ ಅಭಿಯಂತರರು (ಜಾಗೃತ ಮತ್ತು ಪಿ.ಪಿ.ಇ.ಡಿ) ರವರು ಎತ್ತಿರುವ ಎರಡು ವಿಷಯಗಳು<br><br>ಅ). ಸೂಚಿತ ಕಾಮಗಾರಿಗೆ ಸಕ್ಷಮ ಪ್ರಾಧಿಕಾರದಿಂದ ಅಗತ್ಯ ಅನುಮೋದನೆಗಳನ್ನು ಸಮರ್ಪಕವಾಗಿ ಪಡೆದಿರುವುದಿಲ್ಲ, ಹಾಗೂ ಗುತ್ತಿಗೆದಾರರಿಗೆ ಅನುಕೂಲ ಮಾಡುವ ಉದ್ದೇಶದಿಂದ ಶಾಸನಬದ್ಧ ದಾಖಲಾತಿಗಳನ್ನು Manipulate ಮಾಡಲಾಗಿದ್ದು ಇದರಿಂದ ನಿರ್ವಹಿಸಲಾದ ಕಾಮಗಾರಿಯಲ್ಲಿನ ಗುಣಮಟ್ಟಗಳು ಪ್ರಮಾಣಿತ/ನಿರೀಕ್ಷಿತ/ನಿರ್ದಿಷ್ಟ ಮಟ್ಟದಲ್ಲಿರುವ ಬಗ್ಗೆ ಅನುಮಾನವಿರುವುದಾಗಿ ಅಕ್ಷೇಪಿಸಿರುತ್ತಾರೆ. | ಸದರಿ ಕಾಮಗಾರಿಯು ಮೈಸೂರು ರಸ್ತೆಯಲ್ಲಿನ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದ ಸ್ಮಶಾನದ ಜಾಗದಲ್ಲಿ ಕಾಂಪೌಂಡ ನಿರ್ಮಿಸುವ ಕಾಮಗಾರಿಯಾಗಿದ್ದು, ಸ್ಮಶಾನದ ಜಾಗವನ್ನು ವಶಪಡಿಸಿಕೊಂಡು ತುರ್ತಾಗಿ ಕಾಮಗಾರಿ ನಿರ್ವಹಿಸುವ ಉದ್ದೇಶದಿಂದ ಮಾನ್ಯ ಆಯುಕ್ತರವರ ಅನುಮೋದನೆಯನ್ನು ಪಡೆದು KRIDL ಸಂಸ್ಥೆಗೆ ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯ ಆದೇಶದಂತೆ ನೇರ ಗುತ್ತಿಗೆಯನ್ನು ವಹಿಸಲಾಗಿರುತ್ತದೆ. KRIDL ಸಂಸ್ಥೆಯು ಒಂದು ಸರ್ಕಾರಿ ಸೌಮ್ಯದ ಸಂಸ್ಥೆಯಾಗಿದ್ದು ಮುಖ್ಯ ಅಭಿಯಂತರರು, ಟಿ.ವಿ.ಸಿ.ಸಿ ರವರ ವರದಿಯಂತೆ ಯಾವುದೇ ಗುತ್ತಿಗೆದಾರರಿಗೆ ಅನುಕೂಲ ಮಾಡುವ ಉದ್ದೇಶ ಇರುವುದಿಲ್ಲ.<br>ಸದರಿ ಕಾಮಗಾರಿಯ ಗುಣಮಟ್ಟವನ್ನು ಕಾಪಾಡಲು KRIDL ಸಂಸ್ಥೆವತಿಯಿಂದ ನೇಮಿಸಲಾಗಿರುವ Third party ವತಿಯಿಂದ ಗುಣಮಟ್ಟವನ್ನು ಪರೀಕ್ಷಿಸಿದ್ದು, ನಿರ್ಧಿಷ್ಟ ಮಟ್ಟದಲ್ಲಿ ಫಲಿತಾಂಶಗಳು ಲಭ್ಯವಿರುತ್ತದೆ. |
| 2 | ಕಾಮಗಾರಿಯಲ್ಲಿ ಉಪಯೋಗಿಸಿರುವ ಸಾಮಗ್ರಿಗಳು/ಉಪಕರಣಗಳು ಕಳಪೆ ಮಟ್ಟದ್ದಾಗಿರುವುದಾಗಿರುವುದೆಂದು ಹಾಗೂ ಇನ್ನಿತರೇ ವಿಷಯದ ಬಗ್ಗೆ ವ್ಯವಹಾರಿಕ ಪುಟ ಸಂಖ್ಯೆ: 26ರಲ್ಲಿ ಆಕ್ಷೇಪಣೆಗಳನ್ನು ವ್ಯಕ್ತಪಡಿಸಿರುತ್ತಾರೆ. | ಕಾಮಗಾರಿಯಲ್ಲಿ ಉಪಯೋಗಿಸಿರುವ ಸಾಮಗ್ರಿಗಳು /ಉಪಕರಣಗಳನ್ನು KRIDL ಸಂಸ್ಥೆವತಿಯಿಂದ ನೇಮಿಸಲಾಗಿರುವ Third party ವತಿಯಿಂದ ಗುಣಮಟ್ಟವನ್ನು ಪರೀಕ್ಷಿಸಿದ್ದು, ನಿರ್ಧಿಷ್ಟ ಮಟ್ಟದಲ್ಲಿ ಫಲಿತಾಂಶಗಳು ಲಭ್ಯವಿರುತ್ತದೆ. |
| 3. | ಮುಖ್ಯ ಅಭಿಯಂತರರು (ಜಾಗೃತ ಮತ್ತು ಪಿ.ಪಿ.ಇ.ಡಿ) ರವರು ಪ್ರಸ್ತಾಪಿತ ಕಾಮಗಾರಿಯ ನಿರ್ವಹಣೆಯಲ್ಲಿ ಬಹಳಷ್ಟು ದೋಷಗಳಿವೆ ಎಂಬುದಾಗಿ ತಿಳಿಸಿದ್ದರೂ ಸಹ ಅವುಗಳನ್ನು ಸಮರ್ಪಕವಾಗಿ ಪರಿಶೀಲಿಸಿ ದೋಷಗಳನ್ನು ಸರಿಪಡಿಸಿಕೊಳ್ಳದೇ ಮತ್ತು ಮುಖ್ಯ ಅಭಿಯಂತರರು, (ಜಾಗೃತ ಮತ್ತು ಪಿ.ಪಿ.ಇ.ಡಿ) ರವರ ಆಕ್ಷೇಪಣೆಗಳಿಗೆ ಸೂಕ್ತ ಸಮಜಾಯಿಸಿ ನೀಡಿ ಅವರಿಂದ ನಿರಾಕ್ಷೇಪಣೆಯನ್ನು ಪಡೆಯದೇ ನಿಯಮ ಬಾಹಿರವಾಗಿ ಗುತ್ತಿಗೆದಾರರಿಗೆ ಹಣ ಪಾವತಿ ಮಾಡುವುದು ಸಾರ್ವಜನಿಕರ ಹಾಗು ಪಾಲಿಕೆಯ ಹಿತಾಸಕ್ತಿಗಳನ್ನು ಉಪೇಕ್ಷಿಸಿರುವುದು ಸ್ಪಷ್ಟಗೊಂಡಿರುತ್ತದೆ. | ಮುಖ್ಯ ಅಭಿಯಂತರರು, ಟಿ.ವಿ.ಸಿ.ಸಿ ರವರ 6 ಅಕ್ಷೇಪಣೆಗಳಿಗೆ ಪಾಲನಾ ವರದಿಯನ್ನು ಮೂಲ ಕಡತದ ಕಂಡಿಕೆ ಸಂಖ್ಯೆ (67) ರಿಂದ (74) ರವರೆಗೆ ನೀಡಲಾಗಿರುತ್ತದೆ. ಸದರಿ ಅಕ್ಷೇಪಣೆಗಳನ್ನು ಮಾನ್ಯ ವಿಶೇಷ ಆಯುಕ್ತರಿಗೆ ಪಾಲನಾ ವರದಿಯನ್ನು ಮಂಡಿಸಿ ನಿರಾಕ್ಷೇಪಣೆಯನ್ನು ಮೂಲ ಕಡತದ ಕಂಡಿಕೆ (81)ರಲ್ಲಿ ಪಡೆಯಲಾಗಿರುತ್ತದೆ. ಸದರಿ ಕಾಮಗಾರಿಯ ಅಂದಾಜು ಮೊತ್ತ ರೂ.50.00 ಲಕ್ಷಗಳಿಗಿಂತ ಕಡಿಮೆ ಇರುವ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಪ್ರಾಧಿಕಾರವು ಮಾನ್ಯ ಆಯುಕ್ತರಿಗೆ ಇರುವುದರಿಂದ ಮೂಲ ಕಡತದ ಕಂಡಿಕೆ 9 ರಲ್ಲಿ ಮಾನ್ಯ ಆಯುಕ್ತರು ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡಿದ್ದು ಹಾಗೂ ಕಂಡಿಕೆ 18ರಲ್ಲಿ KRIDL ಸಂಸ್ಥೆಗೆ ವಹಿಸಲು ಅನುಮೋದನೆ ನೀಡಿರುತ್ತಾರೆ. ಮುಖ್ಯ ಅಭಿಯಂತರರು, ರಸ್ತೆ ಮೂಲಭೂತ ಸೌಕರ್ಯ ರವರು |

| | | |
|---|---|---|
| | | ಆಡಳಿತಾತ್ಮಕ ಅನುಮೋದನೆ ಹಾಗೂ ತಾಂತ್ರಿಕ ಮಂಜೂರಾತಿಯನ್ನು ತಾತ್ವಿಕವಾಗಿ ನೀಡಿರುತ್ತಾರೆ. ಸದರಿ ಕಾಮಗಾರಿಯನ್ನು ತ್ವರಿತವಾಗಿ ನಿರ್ವಹಿಸಬೇಕಾಗಿರುವುದರಿಂದ ತುರ್ತಾಗಿ ಕಾಮಗಾರಿಯನ್ನು ಪ್ರಾರಂಭಿಸಲಾಗಿದ್ದು, ಸದರಿ ಕ್ರಮದ ಸ್ಥಿರೀಕರಣಕ್ಕಾಗಿ ಪ್ರಸ್ತಾವನೆಯನ್ನು ಮಂಡಿಸಿದೆ. ಈ ವಿಷಯವಾಗಿ ಸಾರ್ವಜನಿಕರ ಹಾಗು ಪಾಲಿಕೆಯ ಹಿತಾಸಕ್ತಿಗಳನ್ನು ಯಾವುದೇ ರೀತಿ ಉಪೇಕ್ಷಿಸಿರುವುದಿಲ್ಲ. |
| 4 | ಕರ್ನಾಟಕ ಸರ್ಕಾರ ಆರ್ಥಿಕ ಇಲಾಖೆ ಸಂಖ್ಯೆ:ಆಇ/169/ವೆಚ್ಚ–12/11 ದಿನಾಂಕ: 10–03–2011ರಂತೆ ಕೆ.ಟಿ.ಪಿ.ಪಿ. ಅಧಿನಿಯಮಗಳಂತೆ ಕೆ.ಆರ್.ಐ.ಡಿ.ಎಲ್. ಸಂಸ್ಥೆಯು ಶಾಸನಬದ್ಧ ನೀತಿ ನಿಯಮಗಳನ್ನು ಪಾಲನೆ ಮಾಡಿರುತ್ತಾರೆಯೇ ಎಂಬುದಾಗಿ ಮತ್ತು ಮೇಲ್ಕಂಡ ಎಲ್ಲಾ ಅಂಶಗಳ ಅನುಸಾರ ಸೂಕ್ತ ಸ್ಪಷ್ಟೀಕರಣಗಳೊಂದಿಗೆ ಕಡತವನ್ನು ಮರು ಮಂಡಿಸುವುದು. | ಕೆ.ಆರ್.ಐ.ಡಿ.ಎಲ್. ಸಂಸ್ಥೆಯು ಸರ್ಕಾರಿ ಸೌಮ್ಯದ ಸಂಸ್ಥೆಯಾಗಿದ್ದು, ಕರ್ನಾಟಕ ಸರ್ಕಾರ ಆರ್ಥಿಕ ಇಲಾಖೆ ಸುತ್ತೋಲೆ ಸಂಖ್ಯೆ: ಆಇ/169/ವೆಚ್ಚ–12/11, ದಿನಾಂಕ: 10–03–2011 ರನ್ವಯ ಕೆ.ಟಿ.ಪಿ.ಪಿ. ಅಧಿನಿಯಮಗಳಂತೆ ಶಾಸನಬದ್ಧ ನೀತಿ ನಿಯಮಗಳನ್ನು ಪಾಲನೆ ಮಾಡುವುದು ಸದರಿ ಸಂಸ್ಥೆಯ ಕರ್ತವ್ಯವಾಗಿರುತ್ತದೆ. |

ಆದುದರಿಂದ ಕಾಮಗಾರಿಯು ತುರ್ತಾಗಿದ್ದುದರಿಂದ ಮಾನ್ಯ ಆಯುಕ್ತರ ಆದೇಶದಂತೆ ಸದರಿ ಕಾಮಗಾರಿಯನ್ನು KRIDL ಸಂಸ್ಥೆಗೆ ನೇರ ಗುತ್ತಿಗೆ ಆಧಾರದ ಮೇಲೆ ವಹಿಸಲಾಗಿದ್ದು, ಈಗಾಗಲೆ ಕಾಮಗಾರಿಯು ಪ್ರಗತಿಯಲ್ಲಿರುವುದರಿಂದ ನಿರ್ವಹಿಸಲಾದ ಕ್ರಮಕ್ಕೆ ಸ್ಪಷ್ಟೀಕರಣದೊಂದಿಗೆ ಸ್ಥಿರೀಕರಣಕ್ಕೆ ಅನುಮೋದನೆ ಕೋರಿ ಬೃಹತ್ ಕಾಮಗಾರಿ ಸ್ಥಾಯಿ ಸಮಿತಿ ಮುಂದೆ ಮರು–ಮಂಡಿಸಲಾದ ದಿನಾಂಕ:22–08–2012ರ ಅಪರ ಆಯುಕ್ತರು(ಯೋಜನೆ) ರವರ ಟಿಪ್ಪಣಿ.

**ನಿರ್ಣಯ: ಅಪರ ಆಯುಕ್ತರು (ಯೋಜನೆ) ರವರ ದಿನಾಂಕ: 22–08–2012ರ ಟಿಪ್ಪಣಿಯನ್ನು ಒಪ್ಪಲಾಯಿತು.**

## 18] ವಿಷಯ ಸಂಖ್ಯೆ:/89/2012–13

ಅಪರ ಆಯುಕ್ತರು (ಯೋಜನೆ) ರವರು ಟಿಪ್ಪಣಿಯಲ್ಲಿ ವಿವರಿಸಿರುವಂತೆ, ದಿನಾಂಕ: 08.03.2012 ರಂದು ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಸಭೆಯ ವಿಷಯ ಸಂಖ್ಯೆ: 197/2011–12 ರಲ್ಲಿ ಪ್ರಸ್ತಾಪಿತ ಕಾಮಗಾರಿಯ (Dismantling of existing compound wall and Construction of new Size stone masonry Compound wall to the premises of Christian Cemetery in Mysore Road.) ಬಗ್ಗೆ ಚರ್ಚೆ ನಡೆದು ಮತ್ತು ಮಾನ್ಯ ಅಧ್ಯಕ್ಷರು ಪ್ರಸ್ತಾಪಿತ ಕಾಮಗಾರಿಯ ಬಗ್ಗೆ ಸ್ಪಷ್ಟೀಕರಣವನ್ನು ಕೋರಿ ವಿಷಯವನ್ನು ಮುಂದುಡಿರುತ್ತಾರೆ. ನಂತರ ಮಾನ್ಯ ಅಧ್ಯಕ್ಷರು ಬೃ.ಸಾ.ಕಾ.ಸ್ಥಾ.ಸಮಿತಿ ರವರ ಪತ್ರ ಸಂಖ್ಯೆ: ಬೃ.ಸಾ.ಕಾ.ಸ್ಥಾ.ಸ/ವಿಸಂ:197/11-12, ದಿನಾಂಕ: 12.04.2012ರಲ್ಲಿ ಕೆಲವು ಆಕ್ಷೇಪಣೆಗಳನ್ನು ವ್ಯಕ್ತಪಡಿಸಿ ಅವುಗಳಿಗೆ ಪೂರಕ ವರದಿಯನ್ನು ಕೋರಿದ್ದು ಅದರಂತೆ ಆಕ್ಷೇಪಣೆಗಳಿಗೆ ಪೂರಕ ಪಾಲನ ವರದಿಯನ್ನು ಕೆಳಕಂಡಂತೆ ನೀಡಲಾಗಿದೆ.

| ಕ್ರಮ ಸಂಖ್ಯೆ | ಆಕ್ಷೇಪಣೆ | ಪಾಲನ ವರದಿ |
|---|---|---|
| 1. | ಮುಖ್ಯ ಅಭಿಯಂತರರು (ಜಾಗೃತ ಮತ್ತು ಪಿ.ಪಿ.ಇ.ಡಿ) ರವರು ಎತ್ತಿರುವ ಎರಡು ವಿಷಯಗಳು<br><br>ಅ) ಸೂಚಿತ ಕಾಮಗಾರಿಗೆ ಸಕ್ಷಮ | ಸದರಿ ಕಾಮಗಾರಿಯು ಮೈಸೂರು ರಸ್ತೆಯಲ್ಲಿನ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದ ಸ್ಮಶಾನದ ಜಾಗದಲ್ಲಿ ಕಾಂಪೌಂಡ ನಿರ್ಮಿಸುವ ಕಾಮಗಾರಿಯಾಗಿದ್ದು, ಸ್ಮಶಾನದ ಜಾಗವನ್ನು |



Sudhakara Reddy

| | | |
|---|---|---|
| | ಪ್ರಾಧಿಕಾರದಿಂದ ಅಗತ್ಯ ಅನುಮೋದನೆಗಳನ್ನು ಸಮರ್ಪಕವಾಗಿ ಪಡೆದಿರುವುದಿಲ್ಲ, ಹಾಗೂ ಗುತ್ತಿಗೆದಾರರಿಗೆ ಅನುಕೂಲ ಮಾಡುವ ಉದ್ದೇಶದಿಂದ ಶಾಸನಬದ್ಧ ದಾಖಲಾತಿಗಳನ್ನು Manipulate ಮಾಡಲಾಗಿದ್ದು ಇದರಿಂದ ನಿರ್ವಹಿಸಲಾದ ಕಾಮಗಾರಿಯಲ್ಲಿನ ಗುಣಮಟ್ಟಗಳು ಪ್ರಮಾಣಿತ/ನಿರೀಕ್ಷಿತ/ನಿರ್ದಿಷ್ಟ ಮಟ್ಟದಲ್ಲಿರುವ ಬಗ್ಗೆ ಅನುಮಾನವಿರುವುದಾಗಿ ಅಕ್ಷೇಪಿಸಿರುತ್ತಾರೆ. | ವಶಪಡಿಸಿಕೊಂಡು ತುರ್ತಾಗಿ ಕಾಮಗಾರಿ ನಿರ್ವಹಿಸುವ ಉದ್ದೇಶದಿಂದ ಮಾನ್ಯ ಆಯುಕ್ತರವರ ಅನುಮೋದನೆಯನ್ನು ಪಡೆದು KRIDL ಸಂಸ್ಥೆಗೆ ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯ ಆದೇಶದಂತೆ ನೇರ ಗುತ್ತಿಗೆಯನ್ನು ವಹಿಸಲಾಗಿರುತ್ತದೆ. KRIDL ಸಂಸ್ಥೆಯು ಒಂದು ಸರ್ಕಾರಿ ಸೌಮ್ಯದ ಸಂಸ್ಥೆಯಾಗಿದ್ದು ಮುಖ್ಯ ಅಭಿಯಂತರರು, ಟಿ.ವಿ.ಸಿ.ಸಿ ರವರ ವರದಿಯಂತೆ ಯಾವುದೇ ಗುತ್ತಿಗೆದಾರರಿಗೆ ಅನುಕೂಲ ಮಾಡುವ ಉದ್ದೇಶ ಇರುವುದಿಲ್ಲ.<br>ಸದರಿ ಕಾಮಗಾರಿಯ ಗುಣಮಟ್ಟವನ್ನು ಕಾಪಾಡಲು KRIDL ಸಂಸ್ಥೆವತಿಯಿಂದ ನೇಮಿಸಲಾಗಿರುವ Third party ವತಿಯಿಂದ ಗುಣಮಟ್ಟವನ್ನು ಪರೀಕ್ಷಿಸಿದ್ದು, ನಿರ್ದಿಷ್ಟ ಮಟ್ಟದಲ್ಲಿ ಫಲಿತಾಂಶಗಳು ಲಭ್ಯವಿರುತ್ತದೆ. |
| 2 | ಕಾಮಗಾರಿಯಲ್ಲಿ ಉಪಯೋಗಿಸಿರುವ ಸಾಮಗ್ರಿಗಳು/ಉಪಕರಣಗಳು ಕಳಪೆ ಮಟ್ಟದ್ದಾಗಿರುವುದಾಗಿರುವುದೆಂದು ಹಾಗೂ ಇನ್ನಿತರೇ ವಿಷಯದ ಬಗ್ಗೆ ವ್ಯವಹಾರಿಕ ಪುಟ ಸಂಖ್ಯೆ: 26ರಲ್ಲಿ ಆಕ್ಷೇಪಣೆಗಳನ್ನು ವ್ಯಕ್ತಪಡಿಸಿರುತ್ತಾರೆ. | ಕಾಮಗಾರಿಯಲ್ಲಿ ಉಪಯೋಗಿಸಿರುವ ಸಾಮಗ್ರಿಗಳು /ಉಪಕರಣಗಳನ್ನು KRIDL ಸಂಸ್ಥೆವತಿಯಿಂದ ನೇಮಿಸಲಾಗಿರುವ Third party ವತಿಯಿಂದ ಗುಣಮಟ್ಟವನ್ನು ಪರೀಕ್ಷಿಸಿದ್ದು, ನಿರ್ದಿಷ್ಟ ಮಟ್ಟದಲ್ಲಿ ಫಲಿತಾಂಶಗಳು ಲಭ್ಯವಿರುತ್ತದೆ. |
| 3. | ಮುಖ್ಯ ಅಭಿಯಂತರರು (ಜಾಗೃತ ಮತ್ತು ಪಿ.ಪಿ.ಇ.ಡಿ) ರವರು ಪ್ರಸ್ತಾಪಿತ ಕಾಮಗಾರಿಯ ನಿರ್ವಹಣೆಯಲ್ಲಿ ಬಹಳಷ್ಟು ದೋಷಗಳಿವೆ ಎಂಬುದಾಗಿ ತಿಳಿಸಿದ್ದರೂ ಸಹ ಅವುಗಳನ್ನು ಸಮರ್ಪಕವಾಗಿ ಪರಿಶೀಲಿಸಿ ದೋಷಗಳನ್ನು ಸರಿಪಡಿಸಿಕೊಳ್ಳದೇ ಮತ್ತು ಮುಖ್ಯ ಅಭಿಯಂತರರು, (ಜಾಗೃತ ಮತ್ತು ಪಿ.ಪಿ.ಇ.ಡಿ) ರವರ ಆಕ್ಷೇಪಣೆಗಳಿಗೆ ಸೂಕ್ತ ಸಮಜಾಯಿಸಿ ನೀಡಿ ಅವರಿಂದ ನಿರಾಕ್ಷೇಪಣೆಯನ್ನು ಪಡೆಯದೇ ನಿಯಮ ಬಾಹಿರವಾಗಿ ಗುತ್ತಿಗೆದಾರರಿಗೆ ಹಣ ಪಾವತಿ ಮಾಡುವುದು ಸಾರ್ವಜನಿಕರ ಹಾಗು ಪಾಲಿಕೆಯ ಹಿತಾಸಕ್ತಿಗಳನ್ನು ಉಪೇಕ್ಷಿಸಿರುವುದು ಸ್ಪಷ್ಟಗೊಂಡಿರುತ್ತದೆ. | ಮುಖ್ಯ ಅಭಿಯಂತರರು, ಟಿ.ವಿ.ಸಿ.ಸಿ ರವರ 6 ಅಕ್ಷೇಪಣೆಗಳಿಗೆ ಪಾಲನಾ ವರದಿಯನ್ನು ಮೂಲ ಕಡತದ ಕಂಡಿಕೆ ಸಂಖ್ಯೆ (67) ರಿಂದ (74) ರವರೆಗೆ ನೀಡಲಾಗಿರುತ್ತದೆ. ಸದರಿ ಅಕ್ಷೇಪಣೆಗಳನ್ನು ಮಾನ್ಯ ವಿಶೇಷ ಆಯುಕ್ತರಿಗೆ ಪಾಲನಾ ವರದಿಯನ್ನು ಮಂಡಿಸಿ ನಿರಾಕ್ಷೇಪಣೆಯನ್ನು ಮೂಲ ಕಡತದ ಕಂಡಿಕೆ (81)ರಲ್ಲಿ ಪಡೆಯಲಾಗಿರುತ್ತದೆ. ಸದರಿ ಕಾಮಗಾರಿಯ ಅಂದಾಜು ಮೊತ್ತ ರೂ.50.00 ಲಕ್ಷಗಳಿಗಿಂತ ಕಡಿಮೆ ಇರುವ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಪ್ರಾಧಿಕಾರವು ಮಾನ್ಯ ಆಯುಕ್ತರಿಗೆ ಇರುವುದರಿಂದ ಮೂಲ ಕಡತದ ಕಂಡಿಕೆ 9 ರಲ್ಲಿ ಮಾನ್ಯ ಆಯುಕ್ತರು ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡಿದ್ದು ಹಾಗೂ ಕಂಡಿಕೆ 18ರಲ್ಲಿ KRIDL ಸಂಸ್ಥೆಗೆ ವಹಿಸಲು ಅನುಮೋದನೆ ನೀಡಿರುತ್ತಾರೆ. ಮುಖ್ಯ ಅಭಿಯಂತರರು, ರಸ್ತೆ ಮೂಲಭೂತ ಸೌಕರ್ಯ ರವರು ಆಡಳಿತಾತ್ಮಕ ಅನುಮೋದನೆ ಹಾಗೂ ತಾಂತ್ರಿಕ ಮಂಜೂರಾತಿಯನ್ನು ತಾತ್ವಿಕವಾಗಿ ನೀಡಿರುತ್ತಾರೆ. ಸದರಿ ಕಾಮಗಾರಿಯನ್ನು ತ್ವರಿತವಾಗಿ ನಿರ್ವಹಿಸಬೇಕಾಗಿರುವುದರಿಂದ ತುರ್ತಾಗಿ ಕಾಮಗಾರಿಯನ್ನು ಪ್ರಾರಂಭಿಸಲಾಗಿದ್ದು, ಸದರಿ ಕ್ರಮದ ಸ್ಥಿರೀಕರಣಕ್ಕಾಗಿ ಪ್ರಸ್ತಾವನೆಯನ್ನು ಮಂಡಿಸಿದೆ. ಈ ವಿಷಯವಾಗಿ ಸಾರ್ವಜನಿಕರ ಹಾಗು ಪಾಲಿಕೆಯ ಹಿತಾಸಕ್ತಿಗಳನ್ನು ಯಾವುದೇ ರೀತಿ ಉಪೇಕ್ಷಿಸಿರುವುದಿಲ್ಲ. |



Sridhara Reddy

| | | |
|---|---|---|
| 4 | ಕರ್ನಾಟಕ ಸರ್ಕಾರ ಆರ್ಥಿಕ ಇಲಾಖೆ ಸಂಖ್ಯೆ:ಆಇ/169/ವೆಚ್ಚ-12/11 ದಿನಾಂಕ: 10-03-2011ರಂತೆ ಕೆ.ಟಿ.ಪಿ.ಪಿ. ಅಧಿನಿಯಮಗಳಂತೆ ಕೆ.ಆರ್.ಐ.ಡಿ.ಎಲ್. ಸಂಸ್ಥೆಯು ಶಾಸನಬದ್ಧ ನೀತಿ ನಿಯಮಗಳನ್ನು ಪಾಲನೆ ಮಾಡಿರುತ್ತಾರೆಯೇ ಎಂಬುದಾಗಿ ಮತ್ತು ಮೇಲ್ಕಂಡ ಎಲ್ಲಾ ಅಂಶಗಳ ಅನುಸಾರ ಸೂಕ್ತ ಸ್ಪಷ್ಟೀಕರಣಗಳೊಂದಿಗೆ ಕಡತವನ್ನು ಮರು ಮಂಡಿಸುವುದು. | ಕೆ.ಆರ್.ಐ.ಡಿ.ಎಲ್. ಸಂಸ್ಥೆಯು ಸರ್ಕಾರಿ ಸೌಮ್ಯದ ಸಂಸ್ಥೆಯಾಗಿದ್ದು, ಕರ್ನಾಟಕ ಸರ್ಕಾರ ಆರ್ಥಿಕ ಇಲಾಖೆ ಸುತ್ತೋಲೆ ಸಂಖ್ಯೆ: ಆಇ/169/ವೆಚ್ಚ-12/11, ದಿನಾಂಕ: 10-03-2011 ರನ್ವಯ ಕೆ.ಟಿ.ಪಿ.ಪಿ. ಅಧಿನಿಯಮಗಳಂತೆ ಶಾಸನಬದ್ಧ ನೀತಿ ನಿಯಮಗಳನ್ನು ಪಾಲನೆ ಮಾಡುವುದು ಸದರಿ ಸಂಸ್ಥೆಯ ಕರ್ತವ್ಯವಾಗಿರುತ್ತದೆ. |

ಆದುದರಿಂದ ಕಾಮಗಾರಿಯು ತುರ್ತಾಗಿದ್ದುದರಿಂದ ಮಾನ್ಯ ಆಯುಕ್ತರ ಆದೇಶದಂತೆ ಸದರಿ ಕಾಮಗಾರಿಯನ್ನು KRIDL ಸಂಸ್ಥೆಗೆ ನೇರ ಗುತ್ತಿಗೆ ಆಧಾರದ ಮೇಲೆ ವಹಿಸಲಾಗಿದ್ದು, ಈಗಾಗಲೆ ಕಾಮಗಾರಿಯು ಪ್ರಗತಿಯಲ್ಲಿರುವುದರಿಂದ ನಿರ್ವಹಿಸಲಾದ ಕ್ರಮಕ್ಕೆ ಸ್ಪಷ್ಟೀಕರಣದೊಂದಿಗೆ ಸ್ಥಿರೀಕರಣಕ್ಕೆ ಅನುಮೋದನೆ ಕೋರಿ ಬೃಹತ್ ಕಾಮಗಾರಿ ಸ್ಥಾಯಿ ಸಮಿತಿ ಮುಂದೆ ಮರು-ಮಂಡಿಸಲಾದ ದಿನಾಂಕಃ 22-08-2012ರ ಅಪರ ಆಯುಕ್ತರು (ಯೋಜನೆ) ರವರ ಟಿಪ್ಪಣಿ.

**ನಿರ್ಣಯಃ ಅಪರ ಆಯುಕ್ತರು (ಯೋಜನೆ) ರವರ ದಿನಾಂಕಃ 22-08-2012ರ ಟಿಪ್ಪಣಿಯನ್ನು ಒಪ್ಪಲಾಯಿತು.**

19]ವಿಷಯ ಸಂಖ್ಯೆಃ/90/2012-13

ವಿಶೇಷ ಆಯುಕ್ತರು (ಯೋಜನೆ) ರವರು ಟಿಪ್ಪಣಿಯಲ್ಲಿ ವಿವರಿಸಿರುವಂತೆ, Construction of RCC wall drain from to DH 211A joins. (link 211 (length 1350-1500m) in Dasarahalli zone. ಕಾಮಗಾರಿಗೆ ರೂ. 130.00 ಲಕ್ಷಗಳಿಗೆ ಅಂದಾಜನ್ನು ತಯಾರಿಸಿ ಸಕ್ಷಮ ಪ್ರಧಿಕಾರದಿಂದ ಅನುಮೋದನೆ ಪಡೆದು ದಿನಾಂಕಃ 29-05-2012ರಂದು ಸದರಿ ಕಾಮಗಾರಿಗೆ ಟೆಂಡರ್ ಕರೆಯಲಾಗಿರುತ್ತದೆ.

ಈ ಟೆಂಡರಅನ್ನು ದಿನಾಂಕಃ 03-07-2012ರಂದು ತೆರೆಯಲಾಗಿ 3 ಗುತ್ತಿಗೆದಾರರು ಮಾತ್ರ ಭಾಗವಹಿಸಿರುತ್ತಾರೆ. ಮುಖ್ಯ ಅಭಿಯಂತರರು (ಮಳೆ ನೀರು ಚರಂಡಿ) ರವರಿಂದ ತಾಂತ್ರಿಕ ಬಿಡ್‌ಗೆ ಅನುಮೋದನೆ ಪಡೆದ ನಂತರ ಗುತ್ತಿಗೆದಾರರ ಆರ್ಥಿಕ ಬಿಡ್ಡನ್ನು ದಿನಾಂಕಃ 11-07-2012ರಂದು ತೆರೆಯಲಾಗಿರುತ್ತದೆ. ಸದರಿ ಗುತ್ತಿಗೆದಾರರ ಆರ್ಥಿಕ ಬಿಡ್ ವಿವರಗಳು ಕೆಳಕಂಡಂತಿರುತ್ತದೆ

| ಕ್ರ. ಸಂ. | ಗುತ್ತಿಗೆದಾರರ ಹೆಸರು | ಕಾಮಗಾರಿಯ ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ | ಟೆಂಡರ್‌ಗಿಟ್ಟ ಮೊತ್ತ (ಮಂಜೂರಾದ ಅಂದಾಜು ಪಟ್ಟಿಯ ದರದಂತೆ 2010-11ನೇ ಸಾಲಿನ ದರಪಟ್ಟಿಗೆ) ರೂ. ಲಕ್ಷಗಳಲ್ಲಿ | ಗುತ್ತಿಗೆದಾರರು ನಮೂದಿಸಿರುವ ಮೊತ್ತ ರೂ. | 2011-12ನೇ ಸಾಲಿನ ದರಪಟ್ಟಿಯ ದರಗಳಂತೆ) Issue rate ನೊ ಂದಿಗೆ |
|---|---|---|---|---|---|
| 1 | ಶ್ರೀ.ಬಿ.ಮುನಿರಾಜು | 130.00 | 124.98 | 13254733.00 | 1.61% ಕಡಿಮೆ |
| 2 | ಶ್ರೀ.ಪ್ರಶಾಮತ್ ಕೆ.ಸಿ.)ಸಾಯಿ ಕನ್ಸ್ಟ್ರಕ್ಷನ್ಸ್) | | | 14476597.35 | 7.46% ಹೆಚ್ಚು |
| 3 | ಶ್ರೀ.ಟಂ ಟಂ ಪೆದ್ದಾಗುರುವಾ ರೆಡ್ಡಿ | | | 14781214.95 | 9.73% ಹೆಚ್ಚು |

ಮೇಲ್ಕಂಡ ವಿವರಗಳನ್ನು ಪರಿಶೀಲಿಸಲಾಗಿ ಈಕಾಮಗಾರಿಗೆ ಶ್ರೀ. ಬಿ.ಮುನಿರಾಜು ರವರು ಟೆಂಡರ್ ಮೊತ್ತ ರೂ. 13724906.92ಗಳನ್ನು ನಮೂದಿಸಿದ್ದು, ಎಸ್.ಆರ್. ದರ 2011-12ರ ಮತ್ತು Issue rate ನೊ ಂದಿಗೆ ಹೋಲಿಸಿದಾಗ ಶೇಕಡ 1.61 ರಷ್ಟು ಕಡಿಮೆ ಇರುತ್ತದೆ.

Sathara Reddy

ಪ್ರಸ್ತಾಪಿಸಿರುವ ಕಾಮಗಾರಿ ಶ್ರೀ. ಬಿ.ಮುನಿರಾಜು ರವರು ನಮೂದಿಸಿರುವ ಟೆಂಡರ್ ಮೊತ್ತ ರೂ.13254733.00 (ಎಸ್.ಆರ್.ದರ 2011-12ರ ಮತ್ತು Issue rate ನೊಂದಿಗೆ ಹೋಲಿಸಿದಾಗ ಶೇಕಡ 11.49 ರಷ್ಟು ಕಡಿಮೆ) ಗಳಿಗೆ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ದಿನಾಂಕಃ 23-08-2012ರ ಟಿಪ್ಪಣಿ.

**: ಮುಂದೂಡಿದೆಃ**

20]ವಿಷಯ ಸಂಖ್ಯೆಃ/91/2012-13

ವಿಶೇಷ ಆಯುಕ್ತರು (ಯೋಜನೆ) ರವರು ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಮೆ: ಜಿ.ಕಾರ್ಪ್ ಹೋಮ್ಸ್ ಪ್ರೈವೇಟ್ ಲಿಮಿಟೆಡ್, ಥಣಿಸಂದ್ರ ರಸ್ತೆ, ಥಣಿಸಂದ್ರ ಬೆಂಗಳೂರು ಇವರು ಸರ್ವೆ ನಂಃ 13/2 ಸ್ವತ್ತಿನ ಮಾಲೀಕರಾಗಿದ್ದು, ಈ ಸ್ವತ್ತಿಗೆ ಹೊಂದಿಕೊಂಡಂತೆ ಹಾಲಿ 9.5 ಮೀಟರ್ ಅಗಲದ ಮಳೆನೀರಿನ ಚರಂಡಿ ಹಾದು ಹೋಗುತ್ತಿರುತ್ತದೆ. ಸರ್ವೆ ನಂಃ 13/2ರಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಬಡಾವಣೆ ನಿರ್ಮಾಣ ಮಾಡಿದ್ದು, ಬಡಾವಣೆ ನಿರ್ಮಾಣಗೊಂಡ ಪ್ರಾಧಿಕಾರದಿಂದ ಅನುಮೋದನೆಗೊಂಡಿರುವ ನಕ್ಷೆ ಲಗತ್ತಿಸಲಾಗಿದೆ) ಹೊಸ ಬಡಾವಣೆಗೆ ಪ್ರವೇಶಿಸಬೇಕಾದರೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸೇರಿದ ಮಳೆಯ ನೀರಿನ ಚರಂಡಿಯನ್ನು ದಾಟಿಕೊಂಡು ಹೋಗಬೇಕಾಗಿರುತ್ತದೆ. ಸ್ವತ್ತಿನ ಮಾಲೀಕರು ತಮ್ಮ ಸ್ವಂತ ಖರ್ಚಿನಲ್ಲೇ ಹಾಲಿ ಇರುವ ಮಳೆನೀರಿನ ಚರಂಡಿಯ ಮೇಲೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ Standards ಗೆ ಅನುಗುಣವಾಗಿ ಕಾಂಕ್ರೀಟ್ ಡೆಕ್ ನಿರ್ಮಿಸಿಕೊಳ್ಳಲು ಮುಂದೆ ಬಂದಿರುತ್ತಾರೆ. ಸದರಿ ಮಾಲೀಕರ ಮನವಿಯನ್ನು ಪರಿಗಣಿಸಿ ಈ ಕೆಳಕಂಡ ಷರತ್ತಿಗೊಳಪಡಿಸಿ ಅನುಮೋದನೆ ನೀಡಬಹುದಾಗಿರುತ್ತದೆ.

1. ಪ್ರಸ್ತಾಪಿತ ಜಾಗದಲ್ಲಿ ಸಂಪರ್ಕ ರಸ್ತೆಯನ್ನು ಮಾತ್ರ ನಿರ್ಮಾಣ ಮಾಡಬೇಕು ಮತ್ತು ಈ ಜಾಗಕ್ಕೆ ಕಲ್ಲು ನೆಟ್ಟು ಸರಹದ್ದನ್ನು ಗುರುತು ಮಾಡುವುದು ಹಾಗೂ ರಸ್ತೆಗಲ್ಲದೇ ಯಾವುದೇ ಉದ್ದೇಶಕ್ಕೆ ಬಳಸಬಾರದು.
2. ರಸ್ತೆಯನ್ನು ಸಾರ್ವಜನಿಕ ಉದ್ದೇಶಕ್ಕಾಗಿ ಉಪಯೋಗಿಸಬೇಕು ಮತ್ತು ಇದರ ಮೇಲೆ ಬಿ.ಬಿ.ಎಂ.ಪಿ ಹೊರತುಪಡಿಸಿ ಬೇರೆ ಯಾರೂ ಹಕ್ಕನ್ನು ಹೊಂದಿರಬಾರದು.
3. ಮಳೆನೀರು ಚರಂಡಿಗೆ ನಿರ್ಮಿಸುವ ಸೇತುವೆಯು ಬಿ.ಬಿ.ಎಂ.ಪಿ ನೀಡುವ ವಿನ್ಯಾಸಕ್ಕೆ ಅನುಗುಣವಾಗಿ ನಿರ್ಮಿಸಬೇಕು ಹಾಗೂ ಹರಿಯುವ ನೀರಿಗೆ ತೊಂದರೆಯಾಗಬಾರದು.
4. ಸದರಿ ಮಳೆನೀರು ಚರಂಡಿಯ ಮೇಲೆ ಬೃಹತ್ ನೀರುಗಾಲುವೆ, ಬಿ.ಬಿ.ಎಂ.ಪಿ. ಎಂಬ ನಾಮಫಲಕ ಪ್ರದರ್ಶಿಸಬೇಕು.
5. ಸದರಿ ಕಾಮಗಾರಿಗೆ ತಗಲುವ ಸಂಪೂರ್ಣ ವೆಚ್ಚವನ್ನು ಸ್ವತ್ತಿನ ಮಾಲೀಕರೇ ಭರಿಸಬೇಕು.
6. ಕಾಮಗಾರಿಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಅನುಮೋದನೆಗೊಂಡ ನಕ್ಷೆಯಂತೆ ಹಾಗೂ ಮಹಾನಗರ ಪಾಲಿಕೆಯು ನೀಡುವ ನಿರ್ದೇಶನದಂತೆ ಕಾಮಗಾರಿಯನ್ನು ನಿರ್ವಹಿಸುವುದು.
7. ಅನುಮತಿಸಿದ ಭಾಗದ ಚರಂಡಿಯನ್ನು ನಿರಂತರವಾಗಿ ನಿಮ್ಮ ಸ್ವಂತ ವೆಚ್ಚದಲ್ಲಿ ಸ್ವಚ್ಛಗೊಳಿಸಿ ನಿರ್ವಹಣೆಯನ್ನು ಕನಿಷ್ಠ ಪಕ್ಷ 6 ತಿಂಗಳಿಗೊಮ್ಮೆ ಮಾಡಬೇಕು, ಮಳೆನೀರಿನ ಸ್ವಾಭಾವಿಕ ಹರಿವಿಗೆ ಅಡೆತಡೆ ಇಲ್ಲದಂತೆ ನೋಡಿಕೊಳ್ಳಬೇಕು. (ದಾಖಲೆಯನ್ನು ಪಾಲಿಕೆಗೆ ಸಲ್ಲಿಸಬೇಕು).
8. ಕಾಮಗಾರಿ ನಿರ್ವಹಿಸುವ ಸಮಯದಲ್ಲಿ, ಕಾಮಗಾರಿ ನಂತರದಲ್ಲಿ ಪಾಲಿಕೆಯ ಚರಂಡಿಯ ಭದ್ರತೆ ಮತ್ತು ರಕ್ಷಣೆಗಾಗಿ ಸದರಿ ಆರ್.ಸಿ.ಸಿ. ಮುಚ್ಚಳಿಕೆ ಮೇಲೆ ಯಾವುದೇ ತರಹದ ವಾಹನ ಸಂಚಾರ ನಡೆಸದಂತೆ ನೋಡಿಕೊಳ್ಳಬೇಕು.
9. ಕಾಮಗಾರಿ ಮುಗಿದ ನಂತರ ಸ್ಥಳದಲ್ಲಿ ಪಾಲಿಕೆ ಅನುಮತಿ ಇಲ್ಲದೇ ಯಾವುದೇ ತರಹದ ವಾಣಿಜ್ಯ ವ್ಯವಹಾರ ನಡೆಸಬಾರದು.

10. ಅನುಮತಿಯನ್ನು ರದ್ದುಪಡಿಸುವ ಅಥವಾ ಬೇರೆ ಯಾವುದೇ ಬದಲಾವಣೆ ಮಾಡುವ ಅಧಿಕಾರವನ್ನು ಮಹಾನಗರ ಪಾಲಿಕೆ ಹೊಂದಿರುತ್ತದೆ.
11. ಕಾಮಗಾರಿ ನಿರ್ವಹಿಸುವ ಸಮಯದಲ್ಲಿ ಮಳೆ ನೀರಿನ ಚರಂಡಿಗೆ ಹಾಗೂ ಪಾಲಿಕೆ ಸ್ವತ್ತಿಗೆ ಹಾನಿಯಾಗದಂತೆ ನಿರ್ವಹಿಸುವುದು.
12. ಕಾಮಗಾರಿ ನಿರ್ವಹಿಸುವ ಸಮಯದಲ್ಲಿ ಯಾವುದೇ ರೀತಿಯ ಬದಲಾವಣೆಗಳನ್ನು ಮಾಡಬೇಕಾದ ಸಂದರ್ಭ ಬಂದಲ್ಲಿ ಮಹಾನಗರ ಪಾಲಿಕೆ ವತಿಯಿಂದ ಅನುಮತಿ ಪಡೆಯಬೇಕು.
13. ಸದರಿ ಚರಂಡಿಯ ಭಾಗ ಹಾಗೂ ಎರಡು ಬದಿಯಲ್ಲಿ ಬಿಡಲಾಗಿರುವ ರಸ್ತೆ ಜಾಗ ಮತ್ತು ತಾವು ನಿರ್ಮಿಸಲಿರುವ ಆರ್.ಸಿ.ಸಿ. ಡೆಕ್ ಸ್ಲಾಬ್ ಸಹ ಮಹಾನಗರ ಪಾಲಿಕೆಯ ಆಸ್ತಿಯಾಗಿರುತ್ತದೆ. ಇದರ ಮೇಲೆ ಯಾವುದೇ ರೀತಿಯ ಒತ್ತುವರಿಯಾಗದಂತೆ ನೋಡಿಕೊಳ್ಳಬೇಕು.
14. ಈ ಅನುಮತಿಗೆ ಒಂದು ವರ್ಷ ಕಾಲಾವಕಾಶ ಇರುತ್ತದೆ ಅದರೊಳಗೆ ಕಾಮಗಾರಿಯನ್ನು ಪ್ರಾರಂಭಿಸಬೇಕು ಹಾಗೂ ಕಾಮಗಾರಿಯ ಪ್ರತಿ ವಿವರಗಳನ್ನು ಪಾಲಿಕೆಗೆ ಕಾಲಕಾಲಕ್ಕೆ ತಿಳಿಯಪಡಿಸುವುದು.

ಮೇಲ್ಕಂಡ ಷರತ್ತಿನೊಡನೆ ಅನುಮೋದನೆಗಾಗಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ದಿನಾಂಕಃ 22-08-2012ರ ವಿಶೇಷ ಆಯುಕ್ತರವರ ಟಿಪ್ಪಣಿ.

**: ಮುಂದೂಡಿದೆ :**

21]ವಿಷಯ ಸಂಖ್ಯೆಃ/92/2012-13

ವಿಶೇಷ ಆಯುಕ್ತರು (ಯೋಜನೆ) ರವರು ಟಿಪ್ಪಣಿಯಲ್ಲಿ ವಿವರಿಸಿರುವಂತೆ, RCC wall drain from point at DH 211A joins to Dasarahalli Tank in Dasarahalli Zone (link 211(length 1500-1975m) ಕಾಮಗಾರಿಗೆ ರೂ. 368.00 ಲಕ್ಷಗಳಿಗೆ ಅಂದಾಜನ್ನು ತಯಾರಿಸಿ ಸಕ್ಷಮ ಪ್ರಧಿಕಾರದಿಂದ ಅನುಮೋದನೆ ಪಡೆದು ದಿನಾಂಕಃ 29-05-2012ರಂದು ಸದರಿ ಕಾಮಗಾರಿಗೆ ಟೆಂಡರ್ ಕರೆಯಲಾಗಿರುತ್ತದೆ.

ಈ ಟೆಂಡರಅನ್ನು ದಿನಾಂಕಃ 03-07-2012ರಂದು ತೆರೆಯಲಾಗಿ ಇಬ್ಬರು ಗುತ್ತಿಗೆದಾರರು ಮಾತ್ರ ಭಾಗವಹಿಸಿರುತ್ತಾರೆ. ಮುಖ್ಯ ಅಭಿಯಂತರರು (ಮಳೆ ನೀರು ಚರಂಡಿ) ರವರಿಂದ ತಾಂತ್ರಿಕ ಬಿಡ್‌ಗೆ ಅನುಮೋದನೆ ಪಡೆದ ನಂತರ ಗುತ್ತಿಗೆದಾರರ ಆರ್ಥಿಕ ಬಿಡ್ಡನ್ನು ದಿನಾಂಕಃ 11-07-2012ರಂದು ತೆರೆಯಲಾಗಿರುತ್ತದೆ. ಸದರಿ ಗುತ್ತಿಗೆದಾರರ ಆರ್ಥಿಕ ಬಿಡ್ ವಿವರಗಳು ಕೆಳಕಂಡಂತಿರುತ್ತದೆ

| ಕ್ರ. ಸಂ. | ಗುತ್ತಿಗೆದಾರರ ಹೆಸರು | ಕಾಮಗಾರಿಯ ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ | ಟೆಂಡರ್‌ಗಿಟ್ಟ ಮೊತ್ತ (ಮಂಜೂರಾದ ಅಂದಾಜು ಪಟ್ಟಿಯ ದರದಂತೆ 2010-11ನೇ ಸಾಲಿನ ದರಪಟ್ಟಿಗೆ) ರೂ. ಲಕ್ಷಗಳಲ್ಲಿ | ಗುತ್ತಿಗೆದಾರರು ನಮೂದಿಸಿರುವ ಮೊತ್ತ ರೂ. | 2011-12ನೇ ಸಾಲಿನ ದರಪಟ್ಟಿಯ ದರಗಳಂತೆ) Issue rate ನೊ ಂದಿಗೆ |
|---|---|---|---|---|---|
| 1 | ಶ್ರೀ.ಬಿ.ರಾಮಚಂದ್ರ | 368.00 | 354.19 | 38686077.60 | 1.89% ಕಡಿಮೆ |
| 2 | ಶ್ರೀ. ಟಿ೦. ಟಿ೦. ಪೆದ್ದಾ ಗುರುವಾರೆಡ್ಡಿ | | | 41090417.00 | 8.22% ಹೆಚ್ಚು |

ಮೇಲ್ಕಂಡ ವಿವರಗಳನ್ನು ಪರಿಶೀಲಿಸಲಾಗಿ ಈಕಾಮಗಾರಿಗೆ ಶ್ರೀ. ಬಿ.ರಾಮಚಂದ್ರ ರವರು ಟೆಂಡರ್ ಮೊತ್ತ ರೂ. 38686077.60ಗಳನ್ನು ನಮೂದಿಸಿದ್ದು, ಎಸ್.ಆರ್. ದರ 2011-12ರ ಮತ್ತು Issue rate ನೊಂದಿಗೆ ಹೋಲಿಸಿದಾಗ ಶೇಕಡ 1.89 ರಷ್ಟು ಕಡಿಮೆ ಇರುತ್ತದೆ.

ಪ್ರಸ್ತಾಪಿಸಿರುವ ಕಾಮಗಾರಿ ಶ್ರೀ. ಬಿ.ರಾಮಚಂದ್ರ ರವರು ನಮೂದಿಸಿರುವ ಟೆಂಡರ್ ಮೊತ್ತ ರೂ.38686077.60 (ಎಸ್.ಆರ್.ದರ 2011-12ರ ಮತ್ತು Issue rate ನೊಂದಿಗೆ ಹೋಲಿಸಿದಾಗ ಶೇಕಡ

11.49 ರಷ್ಟು ಕಡಿಮೆ) ಗಳಿಗೆ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ದಿನಾಂಕಃ 22-08-2012ರ ಟಿಪ್ಪಣಿ.

**: ಮುಂದೂಡಿದೆ :**

22]ವಿಷಯ ಸಂಖ್ಯೆಃ/93/2012-13

ವಿಶೇಷ ಆಯುಕ್ತರು (ಯೋಜನೆ) ರವರು ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬಿಬಿಎಂಪಿ ವ್ಯಾಪ್ತಿಯ ರಾಜರಾಜೇಶ್ವರಿ ನಗರ ವಲಯದ ದೊಡ್ಡಬಿದರು ಕಲ್ಲು ವಾರ್ಡಿನ (ವಾರ್ಡ್ ನಂ.40) ಬ್ಲೂಬೆಲ್ ಶಾಲೆಯಿಂದ ಮುಂದಕ್ಕೆ ಹಾಲಿ ಚಿಕ್ಕದಾಗಿ ಮಳೆ ನೀರುಕಾಲುವೆ ಇರುತ್ತದೆ. ಅಲ್ಲಲ್ಲಿ ಚಿಕ್ಕ ಚಿಕ್ಕ Vent ಇರುವ Culverts ಇರುತ್ತದೆ. ಹಾಗಾಗಿ ಮಳೆ ಬಿದ್ದಾಗ ಮಳೆ ನೀರಿನಿಂದಾಗಿ ಈ ಪ್ರದೇಶದ ತಗ್ಗು ಜಾಗಗಳಲ್ಲಿ ಪ್ರವಾಹ ಉಂಟಾಗಿ ಸಾರ್ವಜನಿಕ ಆಸ್ತಿಪಾಸ್ತಿಗಳಿಗೆ ಹಾನಿಯಾಗಿರುತ್ತದೆ. ದಿನಾಂಕ: 15-08-2011ರ ರಾತ್ರಿ ಬಿದ್ದ ಭಾರೀ ಮಳೆಯಿಂದಾಗಿ ಹೊಸಹಳ್ಳಿ ಲೇಔಟ್‌ನ ಗೊಲ್ಲರ ಪಾಳ್ಯದ ತಗ್ಗು ಪ್ರದೇಶಗಳಿಗೆ ನೀರು ನುಗ್ಗಿ ಪ್ರವಾಹ ಉಂಟಾಗಿ ಸಾರ್ವಜನಿಕರಿಗೆ ಅನಾನುಕೂಲವಾಗಿರುತ್ತದೆ. ಈ ರೀತಿ ಪ್ರವಾಹ ಉಂಟಾಗಿ ಸಾರ್ವಜನಿಕರಿಗೆ ತೊಂದರೆಯಾಗುವುದನ್ನು ತಪ್ಪಿಸಲು ಈ ರಾಜಕಾಲುವೆಯನ್ನು ರಾಜರಾಜೇಶ್ವರಿ ನಗರ ವಲಯದ ಮಳೆ ನೀರು ಕಾಲುವೆಗಳ ಡಿ.ಪಿ.ಆರ್.ನಂತೆ ವಿನ್ಯಾಸಕ್ಕನುಗುಣವಾಗಿ ಅಭಿವೃದ್ಧಿ ಪಡಿಸಲು Remodelling of SWD DH-367 fom Ch: 1000.00m to 1500.00m in Doddabidara kallu ward no.40 in RR Nagara Zone ಕಾಮಗಾರಿಗೆ ಅಂದಾಜು ಪಟ್ಟಿಯನ್ನು 2011-12ನೇ ಸಾಲಿನ ಲೋಕೋಪಯೋಗಿ ಇಲಾಖೆಯ ದರಪಟ್ಟಿಯಂತೆ 230.50 ಲಕ್ಷ ರೂಗಳಿಗೆ ತಯಾರಿಸಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆಯಲಾಗಿದೆ.

ಈ ಕಾಮಗಾರಿಗೆ ದಿನಾಂಕ: 11-04-2012 ರಂದು ಮೊದಲನೆ ಭಾರಿ E-Procurement Portal ನಲ್ಲಿ, Two Cover System ನಲ್ಲಿ ಅಧಿಸೂಚನೆಯನ್ನು ಹೊರಡಿಸಲಾಯಿತು. ಟೆಂಡರ್ ಸಲ್ಲಿಸಲು ಕಡೆಯ ದಿನಾಂಕ: 11-05-2012. ಟೆಂಡರ್‌ನಲ್ಲಿ ಮೂರು ಜನ ಗುತ್ತಿಗೆದಾರರು ಭಾಗವಹಿಸಿರುತ್ತಾರೆ. ಸದರಿ ಗುತ್ತಿಗೆದಾರರು ಸಲ್ಲಿಸಿದ್ದ Technical Bid ಅನ್ನು ದಿನಾಂಕ:14-05-2012 ರಂದು ತೆರೆಯಲಾಗಿದೆ. ತಾಂತ್ರಿಕವಾಗಿ ಮೂರು ಜನ ಗುತ್ತಿಗೆದಾರರು ಅರ್ಹತೆಯನ್ನು ಹೊಂದಿದ್ದು, ಇದಕ್ಕೆ ಮುಖ್ಯ ಇಂಜಿನಿಯರ್‌ರವರು ದಿನಾಂಕ: 11-07-2012 ರಂದು ಅನುಮೋದನೆ ನೀಡಿರುತ್ತಾರೆ. ನಂತರ ಸದರಿ ಗುತ್ತಿಗೆದಾರರು ಸಲ್ಲಿಸಿದ್ದ ಆರ್ಥಿಕ ಬಿಡ್ಡನ್ನು ದಿನಾಂಕ: 12-07-2012 ರಂದು ತೆರೆಯಲಾಗಿದ್ದು, ಶ್ರೀ.ಚೆರುಕುರಿ ಭೋಜೇಶ್ವರ ರಾವ್ ರವರು ಕಡಿಮೆ ಮೊತ್ತವನ್ನು ನಮೂದಿಸಿದ್ದು, ಇವರು ಎಲ್1 ಆಗಿರುತ್ತಾರೆ. ಉಳಿದ ವಿವರಗಳು ಕೆಳಕಂಡಂತಿವೆ.

| | | |
|---|---|---|
| 1. | ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ (2011-12ನೇ ಸಾಲಿನ ದರಪಟ್ಟಿಯಂತೆ) | ರೂ.206.904 ಲಕ್ಷಗಳು |
| 2. | ಬಿಡ್ಡುದಾರರಾದ ಶ್ರೀ.ಚೆರುಕುರಿ ಭೋಜೇಶ್ವರ ರಾವ್ ರವರು ನಮೂದಿಸಿರುವ ಟೆಂಡರ್ ಮೊತ್ತ | ರೂ. 2,26,61,112.00 |
| 3. | 2011-12ನೇ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಾಗ ಟೆಂಡರಿಗೆ ಇಟ್ಟ ಮೊತ್ತದ ಮೇಲಿನ ಶೇಕಡವಾರು ಹೆಚ್ಚಳ / ಕಡಿಮೆ | ಶೇ. 9.52 ಹೆಚ್ಚುವರಿ |
| 4. | First Quarter issue rate of steel & Cement ದರಗಳಿಗೆ ಹೋಲಿಸಿದಾಗ (KPWD Order No.8772, Dated: 29-02-2012, KPWD Order No. 225, Dated: 18-04-2012 ) | ಶೇ. 0.66 ಕಡಿಮೆ |

ಶ್ರೀ.ಚೆರುಕುರಿ ಭೋಜೇಶ್ವರ ರಾವ್ ರವರು ನಮೂದಿಸಿರುವ ಮೊತ್ತವು ಮಂಜೂರಾದ ಅಂದಾಜಿನಂತೆ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇ. 9.52 ರಷ್ಟು ಹೆಚ್ಚುವರಿ ಇದ್ದು, ಈ ವರ್ಷದ ಮೊದಲನೇ ಭಾಗದ (First Quarter) ಉಕ್ಕು ಮತ್ತು ಸಿಮೆಂಟ್ ದರಗಳಿಗೆ ಹೋಲಿಸಿದಾಗ ಶೇ. 0.66 ಕಡಿಮೆಯಾಗಿದ್ದು, ಸ್ಪರ್ಧಾತ್ಮಕವಾಗಿರುವುದು ಕಂಡು ಬರುತ್ತದೆ. ಮೇಲಿನ ಹಿನ್ನೆಲೆಯಲ್ಲಿ ಶ್ರೀ.ಚೆರುಕುರಿ ಭೋಜೇಶ್ವರ ರಾವ್ ರವರು ನಮೂದಿಸಿರುವ ಟೆಂಡರ್ ಮೊತ್ತ 2,26,61,112.00 ರೂಗಳಿಗೆ

(ಮಂಜೂರಾದ ಅಂದಾಜು ಪಟ್ಟಿಯಂತೆ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇ. 9.52 ರಷ್ಟು ಹೆಚ್ಚುವರಿ ದರ ಹಾಗೂ ಈ ವರ್ಷದ ಮೊದಲಭಾಗದ (First Quarter) ಉಕ್ಕು ಮತ್ತು ಸಿಮೆಂಟ್ ದರಗಳಿಗೆ ಹೋಲಿಸಿದಾಗ ಶೇ. 0.66 ಕಡಿಮೆ) ಅನುಮೋದನೆ ಕೋರಿ ಬೃಹತ್ ಕಾಮಗಾರಿ ಸ್ಥಾಯಿ ಸಮಿತಿಗೆ ಮಂಡಿಸಿರುವ ದಿನಾಂಕಃ 21-08-2012ರ ವಿಶೇಷ ಆಯುಕ್ತರ ಟಿಪ್ಪಣಿ.

**ನಿರ್ಣಯಃ ವಿಶೇಷ ಆಯುಕ್ತರು(ಯೋಜನೆ) ರವರ ದಿನಾಂಕಃ 21-08-2012ರ ಟಿಪ್ಪಣಿಯನ್ನು ಒಪ್ಪಲಾಯಿತು.**

23]ವಿಷಯ ಸಂಖ್ಯೆಃ/94/2012-13

ವಿಶೇಷ ಆಯುಕ್ತರು (ಯೋಜನೆ) ರವರು ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೆಂಗಳೂರು ಮಹಾನಗರ ಪಾಲಿಕೆಯನ್ನು ಬೆಂಗಳೂರು ಮಹಾನಗರ ಪಾಲಿಕೆಯಾಗಿ ರಚಿಸಿದ ಹಿನ್ನಲೆಯಲ್ಲಿ ಪಾಲಿಕೆಯ ಸದಸ್ಯರುಗಳ ಸಂಖ್ಯೆಯನ್ನು 100 ರಿಂದ 198ಕ್ಕೆ ಹೆಚ್ಚಿಸಿದ ಹಿನ್ನಲೆಯಲ್ಲಿ ಪಾಲಿಕೆಯ ಪೌರ ಸಭಾಂಗಣದ ಆಸನಗಳ ವ್ಯವಸ್ಥೆಯನ್ನು ಸಹ ಅಗತ್ಯಕ್ಕೆ ತಕ್ಕಂತೆ ವಿಸ್ತರಿಸಲಾಗಿದೆ. ಈ ಕಾಮಗಾರಿಗೆ ಸಂಬಂಧಪಟ್ಟ ಮೂಲ ಅಂದಾಜುಪಟ್ಟಿಯನ್ನು ಮಾನ್ಯ ಆಯುಕ್ತರು ದಿನಾಂಕಃ 30-09-2007ರಲ್ಲಿ ಅನುಮೋದಿಸಿರುತ್ತಾರೆ. ಕಾಮಗಾರಿ ನಿರ್ವಹಣೆ ಸಂದರ್ಭದಲ್ಲಿ ಅಗತ್ಯಕ್ಕೆ ತಕ್ಕಂತೆ ಕೌನ್ಸಿಲ್ ಸಭಾಂಗಣ ನವೀಕರಣದ ಕಾರ್ಯವನ್ನು ಒಟ್ಟಾಗಿ 271 ಸ್ಥಾನಗಳಿಗೆ ಆಸನದ ವ್ಯವಸ್ಥೆ ಕಲ್ಪಿಸಲಾಗಿದೆ. ಸದರಿ ಕಾಮಗಾರಿ ವರ್ಕ್ ಕೋಡ್ ಲಭ್ಯವಾಗಿರುತ್ತದೆ, ಹಾಗೂ ಮರು ದೃಢೀಕರಣ ಪ್ರಮಾಣ ಪತ್ರ ಸಂಖ್ಯೆಃ R-077-12-000002, ಅಂದಾಜು ಮೊತ್ತ ರೂ. 46.76 ಲಕ್ಷಗಳು.

ಮೇಲಿನ ಕಾಮಗಾರಿಯನ್ನು ಶ್ರೀ. ಸಿ.ಎನ್.ಎಸ್. ಮೂರ್ತಿ ರವರಿಗೆ ಟೆಂಡರ್ ಮೂಲಕ ದಿನಾಂಕಃ 13-11-2007ರಂದು ಕಾರ್ಯಾದೇಶ ನೀಡಲಾಗಿದ್ದು ಸದರಿ ಕಾಮಗಾರಿಯನ್ನು ಚುನಾಯಿತ ಪ್ರತಿನಿಧಿಗಳು ಅಧಿಕಾರ ವಹಿಸಿಕೊಳ್ಳುವ ಮುನ್ನ ಮಾರ್ಚ್-2010ರಲ್ಲಿ ಮುಕ್ತಾಯಗೊಳಿಸಲಾಗಿದೆ. ಸದರಿ ಕಾಮಗಾರಿಯ ಪ್ರಮಾಣಗಳು ಟೆಂಡರ್ ಪ್ರಮಾಣಗಳಿಗಿಂತ ಹೆಚ್ಚುವರಿಯಾಗಿದ್ದು ಈ ಬಗ್ಗೆ ಮೂಲ ಕಡತದ ಕಂಡಿಕೆ 06ರಲ್ಲಿ ಮಾನ್ಯ ಆಯುಕ್ತರ ಅನುಮೋದನೆಯಂತೆ ಕಾಮಗಾರಿಯನ್ನು ಪೂರ್ಣಗೊಳಿಸಿ ಚುನಾಯಿತ ಅಧಿಕಾರಿಗಳ ಕಾರ್ಯನಿರ್ವಹಣೆಗೆ ಕೌನ್ಸಿಲ್ ಸಭಾಂಗಣವನ್ನು ಸಜ್ಜುಗೊಳಿಸಲಾಗಿದೆ. ಸದರಿ ಕಾಮಗಾರಿಯ ಪರಿಷ್ಕೃತ ಅಂದಾಜುಪಟ್ಟಿಯನ್ನು ರೂ. 69,71,601/-ಗಳಾಗಿರುತ್ತದೆ.

Kodhanda Reddy

ಈ ಮೇಲಿನ ಪ್ರಸ್ತುತ ಅಂದಾಜುಪಟ್ಟಿಗೆ ಸಮಿತಿಯ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ದಿನಾಂಕಃ 24-08-2012ರ ವಿಶೇಷ ಆಯುಕ್ತರು(ಯೋಜನೆ) ರವರ ಟಿಪ್ಪಣಿ.

**ನಿರ್ಣಯಃ ವಿಶೇಷ ಆಯುಕ್ತರು(ಯೋಜನೆ) ರವರ ದಿನಾಂಕಃ 24-08-2012ರ ಟಿಪ್ಪಣಿಯನ್ನು ಒಪ್ಪಲಾಯಿತು.**

(ಎನ್.ಆರ್.ಶ್ರೀಧರ ರೆಡ್ಡಿ)
ಅಧ್ಯಕ್ಷರು
ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ

**ಪ್ರತಿಯನ್ನುಃ**

1. ಪೂಜ್ಯ ಮಹಾಪೌರವರ ಅವಗಾಹನೆಗೆ ಸಲ್ಲಿಸಿದೆ.
2. ಉಪ ಮಹಾಪೌರವರ ಅವಗಾಹನೆಗೆ ಸಲ್ಲಿಸಿದೆ.
3. ಆಡಳಿತ ಪಕ್ಷ ನಾಯಕರು/ ವಿರೋಧ ಪಕ್ಷ ನಾಯಕರು/ ಜೆ.ಡಿ.ಎಸ್.ಪಕ್ಷ ನಾಯಕರಿಗೆ ಕಳುಹಿಸಿದೆ.
4. ಸಮಿತಿಯ ಎಲ್ಲಾ ಸದಸ್ಯರಿಗೆ ಕಳುಹಿಸಿದೆ.
5. ಆಯುಕ್ತರವರಿಗೆ ಕಳುಹಿಸಿದೆ.
6. ವಿಶೇಷ ಆಯುಕ್ತರವರಿಗೆ ಕಳಹಿಸಿದೆ.
7. ಪ್ರಧಾನ ಅಭಿಯಂತರರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
8. ಮುಖ್ಯ ಲೆಕ್ಕಾಧಿಕಾರಿಯವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
9. ಮುಖ್ಯ ಅಭಿಯಂತರರು, ರಸ್ತೆ ಮೂಲಭೂತ ಸೌಕರ್ಯ, ರವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
10. ಮುಖ್ಯ ಅಭಿಯಂತರರು, ಬೃಹತ್ ನೀರು ಗಾಲುವೆ ರವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
11. ಕೌನ್ಸಿಲ್ ಕಾರ್ಯದರ್ಶಿಗಳಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.